ಕೃಷ್ಣ ತಾನು ಸೂರ್ಯನಂತೆ, ಮಾಯೆ ಅಂಧಕಾರ; ಕೃಷ್ಣ ನೆಲೆ ನಿಂತಂತೆ, ಮಾಯೆಗೆಲ್ಲಿ ಅಧಿಕಾರ.



# ಭಕ್ತಿ ವೇದಾಂತ ದರ್ಶನ

ಹರೇಕೃಷ್ಣ ಆಂದೋಲನದ ಮಾಸಪತ್ರಿಕೆ



ಸಂಪುಟ-22 ಸಂಚಿಕೆ-6 ಅಕ್ಟೋಬರ್ 2024 ಬೆಲೆ: ರೂ. 40/-



# ಶ್ರೀ ರಾಧಾಷ್ಟಮಿ 2024

बैंक ऑफ़ बड़ौदा
Bank of Baroda

# OPEN THE DOOR TO HAPPINESS WITH MAA'S BLESSINGS!

BOB KE SANG TYOHAAR KI UMANG

Shubh Bhi. Labh Bhi.

## Happy Durga Puja



#bobHomeLoan
@ 8.40% p.a.*



#bobCarLoan
@ 8.95% p.a.*

Scan to Apply

To get your CKYC No./CKYC Card on your mobile, dial Central Registry Toll Free Number : 7799022129

Give a missed call*:
Home Loan: 846 700 1111 | Car Loan: 846 700 1133

www.bankofbaroda.in | Follow us on

Advt.

ಕೃಷ್ಣ ತಾನು ಸೂರ್ಯನಂತೆ, ಮಾಯೆ ಅಂಧಕಾರ; ಕೃಷ್ಣ ನೆಲೆ ನಿಂತಂತೆ ಮಾಯೆಗೆಲ್ಲಿ ಅಧಿಕಾರ





# ಭಕ್ತಿ ವೇದಾಂತ ದರ್ಶನ

ಹರೇಕೃಷ್ಣ ಆಂದೋಲನದ ಮಾಸಪತ್ರಿಕೆ



ಸಂಪುಟ-22 ಸಂಚಿಕೆ-6 ಅಕ್ಟೋಬರ್ 2024 ಬೆಲೆ: ರೂ. 40/-

ಬ್ಯಾಕ್ ಟು ಗಾಡ್‌ಹೆಡ್ ಪತ್ರಿಕೆ ಸಂಸ್ಥಾಪಕ

ಶ್ರೀ ಶ್ರೀಮದ್ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದ ಅವರ ದಿವ್ಯಸ್ಮೃತಿಗೆ ಅರ್ಪಿತ

## ಲೇಖನಗಳು

08 ಕೃಷ್ಣನನ್ನು ಅರಸುತ್ತಾ

24 ನೋವು ನಿವಾರಕ ವಿದ್ಯೆ

30 ಶಕ್ತಿಯಿಂದ ಪರಮ ಪುರುಷನವರೆಗೆ

## ಧಾರಾವಾಹಿ

14 ಸುವರ್ಣಾವತಾರ

## ಸ್ಥಿರ ಶೀರ್ಷಿಕೆಗಳು

04 ಗುರು ಮುಖಪದ್ಮ ವಾಕ್ಯ

07 ನುಡಿಮುತ್ತು

17 ಹಬ್ಬ-ಹರಿದಿನ

18 ಸಂವಾದ

20 ಪುಣ್ಯಕ್ಷೇತ್ರ

22 ವನಿತಾ: ಕೃಷ್ಣ ಪಾಕಶಾಲೆ

29 ಉಪಾಖ್ಯಾನ ಉಪದೇಶ

35 ನಾಮಾಮೃತ

## ವರದಿ:

36-38 ಶ್ರೀ ರಾಧಾಷ್ಟಮಿ, ಹರೇ ಕೃಷ್ಣ ಗಿರಿ, ಇಸ್ಕಾನ್ ಬೆಂಗಳೂರು

39-40 ಶ್ರೀ ರಾಧಾಷ್ಟಮಿ, ವೈಕುಂಠ ಗಿರಿ, ಇಸ್ಕಾನ್ ಬೆಂಗಳೂರು

ಸಲಹೆ ಮತ್ತು ಮಾರ್ಗದರ್ಶನ: ಸ್ತೋಕ ಕೃಷ್ಣ ಸ್ವಾಮಿ; ಸಂಪಾದಕ: ಭರತರ್ಷಭ ದಾಸ; ಸಹ ಸಂಪಾದಕ: ಪತಿತಪಾವನ ದಾಸ;
ಕಲೆ-ವಿನ್ಯಾಸ: ಇಸ್ಕಾನ್ ಡಿಸೈನ್ ಗ್ರೂಪ್; ಒಟ್ಟು ಪುಟಗಳು: 42; ಚಿತ್ರ ಕೃಪೆ: ಭಕ್ತಿವೇದಾಂತ ಬುಕ್ ಟ್ರಸ್ಟ್;
ಸಂಪಾದಕೀಯ ವಿಳಾಸ: C/o ಇಸ್ಕಾನ್, ಹರೇ ಕೃಷ್ಣ ಗಿರಿ, ಕಾರ್ಡ್ ರಸ್ತೆ, ಬೆಂಗಳೂರು-10;
✆: 9341694076, ಇ-ಮೇಲ್: ppad@hkm-group.org

# ಶ್ರೀಕೃಷ್ಣನ ಸೇವೆಯಲ್ಲಿ ಮುಕ್ತಿ



ಅಂತಾರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘದ ಸಂಸ್ಥಾಪನಾಚಾರ್ಯ
ಶ್ರೀ ಶ್ರೀಮದ್ ಎ. ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು
ಲಾಸ್‌ಏಂಜಲೀಸ್‌ನಲ್ಲಿ 1972ರ ನವೆಂಬರ್‌ನಲ್ಲಿ ನೀಡಿದ ಉಪನ್ಯಾಸ.

**ಅತೋ ವೈ ಕವಯೋ ನಿತ್ಯಂ ಭಕ್ತಿಂ ಪರಮಯಾ ಮುದಾ ।**
**ವಾಸುದೇವೇ ಭಗವತಿ ಕುರ್ವಂತ್ಯಾತ್ಮಪ್ರಸಾದನೀಮ್ ॥**

ವಾಸ್ತವವಾಗಿ ಅನಾದಿಕಾಲದಿಂದಲೂ ಎಲ್ಲ ದಿವ್ಯವಾದಿಗಳು ಪರಮ ಪುರುಷ ಶ್ರೀಕೃಷ್ಣನಿಗೆ ಆನಂದಭರಿತರಾಗಿ ಭಕ್ತಿಸೇವೆಯನ್ನು ಸಲ್ಲಿಸುತ್ತಿದ್ದಾರೆ. ಏಕೆಂದರೆ ಅಂತಹ ಭಕ್ತಿಸೇವೆ ಆತ್ಮಕ್ಕೆ ಸಂತೋಷವನ್ನು ಕೊಡುತ್ತದೆ.

**(ಶ್ರೀಮದ್ ಭಾಗವತ: 1.2.22)**

ಆತ್ಮ ಎಂದರೆ ಸ್ವಯಂ, ಮನಸ್ಸು ಅಥವಾ ದೇಹ. ನಾವು ಮೂರು ಹಂತಗಳಲ್ಲಿ ಬದುಕುತ್ತಿದ್ದೇವೆ: ದೇಹಾತ್ಮ ಬುದ್ಧಿ, ಮಾನಸಿಕ ಜೀವನ ಹಾಗೂ ಆಧ್ಯಾತ್ಮಿಕ ಸಿದ್ಧಾಂತದ ಬದುಕು. ಯಾರು ಮೌಢ್ಯದಿಂದ ಇರುವರೋ ಅವರು ದೇಹಾತ್ಮ ಬುದ್ಧಿಯಲ್ಲಿ ಚಿಂತಿಸುತ್ತಾರೆ. ಇನ್ನೂ ಸ್ವಲ್ಪ ಮುಂದುವರಿದವರು ಮಾನಸಿಕ ಉದ್ದೇಶದ ಬದುಕನ್ನು ಕುರಿತು ಯೋಚಿಸುತ್ತಾರೆ.



ಇನ್ನೂ ಮುಂದುವರಿದ ಪ್ರಗತಿಶೀಲ ಜನರು ಆಧ್ಯಾತ್ಮಿಕ ಬದುಕಿನ ಬಗೆಗೆ ಚಿಂತಿಸುತ್ತಾರೆ.

ಈ ಹಿಂದಿನ ಶ್ಲೋಕದಲ್ಲಿ ಆಧ್ಯಾತ್ಮಿಕ ಉದ್ದೇಶದ ಬದುಕಿನ ಬಗೆಗೆ ವಿವರಿಸಲಾಗಿದೆ. **ವದಂತಿ ತತ್ ತತ್ತ್ವ - ವಿದಸ್ ತತ್ತ್ವಂ. ತತ್ತ್ವಂ** ಎಂದರೆ ಸತ್ಯ ಎಂದರ್ಥ. ತತ್ತ್ವ ಎಂದರೆ ಆತ್ಮ, ಭೌತಿಕ ವಸ್ತು ಅಲ್ಲ. ಭೌತವಸ್ತು ಸತ್ಯ ಎಂದಾದರೂ ಅದು ಆಧ್ಯಾತ್ಮಿಕ ಸತ್ಯಕ್ಕೆ ಅಧೀನ. ಆಧ್ಯಾತ್ಮಿಕತೆಯ ಆಧಾರದ ಮೇಲೆ ವಸ್ತು ವಿಷಯದ ಬೆಳವಣಿಗೆ ಉಂಟಾಗುತ್ತದೆ. ನಮ್ಮ ಆಧ್ಯಾತ್ಮಿಕ ಅಸ್ತಿತ್ವದ ಆಧಾರದ ಮೇಲೆ ಹೇಗೆ ದೇಹದ ಬೆಳವಣಿಗೆ ಕಂಡು ಬರುವುದೋ, ಹಾಗೆಯೇ.

ಹಾಗಾಗಿ ನಮ್ಮ ಬದುಕಿನ ಅಂತಿಮ ಗುರಿಯು ಆಧ್ಯಾತ್ಮಿಕ ಅರಿವೇ ಆಗಿದೆ. **ಜೀವಸ್ಯ ತತ್ತ್ವಜಿಜ್ಞಾಸಾ ನಾರ್ಥೋ ಯಶ್ಚೇಹ ಕರ್ಮಭಿಃ.** ಬದುಕಿನ ಪರಮ ಉದ್ದೇಶ ಸತ್ಯದ ಶೋಧನೆಯೇ ಆಗಿದೆ. ಆದರೆ ಮಾನವನಿಗಿಂತ ಕೀಳಾದ ಪ್ರಾಣಿ, ಪಕ್ಷಿ, ಇತ್ಯಾದಿಗಳಿಗೆ ಪರಮ ಸತ್ಯವನ್ನು ಕುರಿತು ಪ್ರಶ್ನಿಸುವ ಸವಲತ್ತು ಇಲ್ಲ. ಮಾನವರೂಪಕ್ಕೆ ಮಾತ್ರ ಈ ಪರಮಸತ್ಯದ ಶೋಧನೆ ಸಾಧ್ಯ.

ಪರಮಸತ್ಯದ ಬಗೆಗೆ ಕುತೂಹಲ ಉಳ್ಳವರು ಮೂರು ದಿವ್ಯ ವಿಷಯಗಳ ಬಗೆಗೆ ಅರಿವು ಹೊಂದುತ್ತಾರೆ - **ಬ್ರಹ್ಮೇತಿ ಪರಮಾತ್ಮೇತಿ ಭಗವಾನ್ ಇತಿ ಶಬ್ದ್ಯತೇ** - ಸರ್ವವ್ಯಾಪಕ ಬ್ರಹ್ಮನ್, ಪರಮಾತ್ಮ, ಹಾಗೂ ದೇವೋತ್ತಮ ಪರಮ ಪುರುಷ ಭಗವಾನ್. ಅಂತಿಮವಾಗಿ ಎಲ್ಲರೂ ಭಗವಾನ್ ವಾಸುದೇವನ ಹಂತಕ್ಕೆ ಹೋಗಲೇಬೇಕು. **ವಾಸುದೇವ ಸರ್ವಂ ಇತಿ ಸ ಮಹಾತ್ಮ ಸು ದುರ್ಲಭ.** ವಾಸುದೇವನನ್ನು ಅರ್ಥಮಾಡಿಕೊಳ್ಳುವ ಹಂತ ತಲುಪುವವರು ಪರಿಪಕ್ವ ಮಹಾತ್ಮರೆನ್ನಿಸಿಕೊಳ್ಳುವರು.

ಇತರ ಅನೇಕ ದಿವ್ಯವಾದಿಗಳಿರಬಹುದು, ಆದರೆ ದೇವೋತ್ತಮ ಪರಮಪುರುಷ ವಾಸುದೇವನನ್ನು ಅರ್ಥಮಾಡಿಕೊಳ್ಳುವ, ಗ್ರಹಿಸುವ ಹಂತ ತಲಪಿದವರನ್ನು ಮಹಾತ್ಮ ಎಂದು ಕರೆಯಬಹುದು. ಭಾರತದಲ್ಲಿ ಮಹಾತ್ಮ ಎನ್ನುವುದು ಅತಿ ಸಾಮಾನ್ಯ ಶಬ್ದ. ಯಾವುದೇ ಸಂತ ಪುರುಷರನ್ನು ಮಹಾತ್ಮ ಎಂದು ಕರೆಯಲಾಗುತ್ತದೆ. ಆದರೆ ವೇದಗಳ ವಿವರಣೆಯಂತೆ, ದೇವೋತ್ತಮ ಪರಮ ಪುರುಷ ವಾಸುದೇವನನ್ನು

ಅರ್ಥಮಾಡಿಕೊಂಡವರು ಮಹಾತ್ಮರೆನ್ನಿಸಿಕೊಳ್ಳುವರು.

ಇನ್ನೊಂದು ಕಡೆ ಹೀಗೆ ಹೇಳಲಾಗಿದೆ: **ಮಹತ್ಸೇವಾಂ ದ್ವಾರಂ ಆಹುರ್ ವಿಮುಕ್ತೇಃ ತಮೋದ್ವಾರಂ ಯೋಷಿತಾಂ ಸಂಗಿ-ಸಂಗಮ್.** ಎರಡು ರೀತಿಯ ಬದುಕುಗಳು ಇವೆ. ಒಂದು ವಿಮೋಚನೆಯದ್ದು, ಮತ್ತೊಂದು ಬಂಧನದ ಜೀವನ. ಉದಾಹರಣೆಗೆ, ದಾರದ ರಾಟೆಯು ಒಂದು ಕಡೆ ತಿರುಗಿಸಿದರೆ ಅದು ದಾರವನ್ನು ಎಳೆದುಕೊಳ್ಳುತ್ತದೆ. ಮತ್ತೊಂದು ಕಡೆ ತಿರುಗಿಸಿದರೆ ಅದು ದಾರವನ್ನು ಬಿಡುತ್ತದೆ. ಅದೇ ರೀತಿ, ನಾವು ವಿಮೋಚನೆ ಅಥವಾ ಬಂಧನ – ಯಾವ ದಿಕ್ಕಿನತ್ತಲೂ ಸಾಗಬಹುದಾಗಿದೆ.

ಬಂಧನ ಅಥವಾ ವಿಮೋಚನೆ ಕುರಿತಂತೆ ಆಧುನಿಕ ಶಿಕ್ಷಣ ಪದ್ಧತಿಯಲ್ಲಿ ಚಕಾರವಿಲ್ಲ. ದೇವರು, ಸ್ವಯಂ ಹಾಗೂ ಭಗವಾನ್ ವಿಷ್ಣುವಿನ ಜೊತೆಗಿನ ಅವರ ಬಾಂಧವ್ಯ ಕುರಿತಂತೆ ವಿದ್ಯಾರ್ಥಿಗಳು ಗ್ರಹಿಸಿಕೊಳ್ಳುವಂಥದ್ದು ಏನೂ ಶಿಕ್ಷಣ ಪದ್ಧತಿಯಲ್ಲಿ ಇಲ್ಲ. ಆಧುನಿಕ ಶೈಕ್ಷಣಿಕ ತಜ್ಞರಿಗೆ ಇವೆಲ್ಲ ಅಪರಿಚಿತ.

ಆದುದರಿಂದ ವೇದ ಸಾಹಿತ್ಯವು **ಅಂಧಾ ಯಥಾಂಧೈ ಉಪನೀಯ ಮಾನಾಸ್ ತೇಪೀಶತಂತ್ರ್ಯಾಮ್ ಉರುದಾಮ್ನಿ ಬದ್ಧಾಃ. ಉರು** ಎಂದರೆ 'ಬಹಳ ಪ್ರಬಲ'. **ದಾಮ್ನಿ** ಎಂದರೆ 'ಹಗ್ಗ' ಎಂದರ್ಥ. ನಿಮ್ಮ ಕೈಕಾಲುಗಳನ್ನು ಬಲವಾಗಿ ಕಟ್ಟಿಹಾಕಿದರೆ, ಹೆಜ್ಜೆ ಇಡುವುದು ನಿಮಗೆ ತುಂಬ ಕಷ್ಟ. ಅದೇ ರೀತಿ, ಪ್ರಕೃತಿ ನಿಯಮದಂತೆ ಪ್ರತಿಯೊಂದು ಜೀವಿಯೂ ಪ್ರಬಲವಾಗಿ ಬದ್ಧವಾಗಿರುತ್ತದೆ – **ಈಶ ತಂತ್ರ್ಯ.** ಪರಮದೈವದ ನಿಯಮದಂತೆ ನಾವು ಕಟ್ಟಿಹಾಕಲ್ಪಟ್ಟಿದ್ದೇವೆ. ನಾವು ತಿರುವು ಪಡೆವುದು ಸಾಧ್ಯವಿಲ್ಲ.

ನಾವು ಪ್ರಕೃತಿ ನಿಯಮವನ್ನು ಉಲ್ಲಂಘಿಸಲಾಗದು. ಪ್ರತಿಯೊಬ್ಬರೂ ಇದನ್ನು ಅನುಭವಿಸಬಹುದು. ಈ ನಿಯಮದ ಸ್ವಲ್ಪ ಉಲ್ಲಂಘನೆ, ಸ್ವಲ್ಪ ಭಿನ್ನ ಮಾರ್ಗದಿಂದ ನಾವೇ ಸಂಕಷ್ಟ ಅನುಭವಿಸುವವರು. ಅದು ನಮ್ಮ ದಿನನಿತ್ಯದ ಅನುಭವ. ಉದಾಹರಣೆಗೆ, ನೀವು ಜೀರ್ಣಿಸಿಕೊಳ್ಳುವಷ್ಟು ಮಾತ್ರ ಆಹಾರ ಸೇವಿಸಿ ಎಂದು ಪ್ರಕೃತಿ ನಿಯಮ ಹೇಳುತ್ತದೆ. ನೀವು ಅಧಿಕವಾಗಿ ಸೇವಿಸಿದರೆ, ನಿಯಮದಂತೆ ನೀವು ಅಜೀರ್ಣದಿಂದ ನರಳುತ್ತೀರಿ. ನೋವು ಅನುಭವಿಸದೆ ನೀವು ನಿಯಮ ಉಲ್ಲಂಘಿಸುವುದು ಸಾಧ್ಯವಿಲ್ಲ. **ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ** ಯಾರೂ ಪ್ರಕೃತಿ ನಿಯಮ ಉಲ್ಲಂಘಿಸುವಂತಿಲ್ಲ.

ಪ್ರಕೃತಿ ನಿಯಮದಿಂದ ಹೇಗೆ ಹೊರಬರುವುದೆಂಬ ಬಗೆಗೆ ನಾವು ಈ ಮೊದಲೇ ಚರ್ಚಿಸಿದ್ದೇವೆ: **ಮುಕ್ತಸಂಗಸ್ಯ ಜಾಯತೇ. ಮುಕ್ತ ಸಂಗ** ಎಂದರೆ ಪ್ರಕೃತಿಯ ಮೂರು ಗುಣಗಳಿಂದ ಮುಕ್ತಿಹೊಂದಿದವರು ಎಂದೇ ಅರ್ಥ. ಈ ಮೂರರಿಂದ ಮುಕ್ತರಾದ ಮೇಲೆ ವಾಸುದೇವಭಕ್ತಿ ಕುರಿತಂತೆ ಮಾತನಾಡಬಹುದು.

ಮತ್ತೊಂದು ದೃಷ್ಟಿಕೋನದಂತೆ ವಾಸುದೇವನಿಗೆ ಭಕ್ತಿರಸಧಾರೆ ಮೂಲಕ ಯಾರು ಬೇಕಾದರೂ ಲೌಕಿಕದಿಂದ ಮುಕ್ತಿ ಹೊಂದಬಹುದು. ಇದನ್ನು ಶ್ರೀಮದ್ ಭಾಗವತದಲ್ಲಿ



ಒತ್ತಿಹೇಳಲಾಗಿದೆ. **ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ । ಜನಯತ್ಯಾಶು ವೈರಾಗ್ಯಂ ಜ್ಞಾನಂ ಚ ಯದಹೈತುಕಮ್ :** ಒಬ್ಬನು ಸುಮ್ಮನೆ ವಾಸುದೇವ, ಕೃಷ್ಣನಿಗೆ ಹೇಗೆ ಭಕ್ತಿಸೇವೆ ಸಲ್ಲಿಸುವುದು ಎಂದು ಕಲಿತರೆ ಅವನು ಬಹು ಬೇಗ ಭೌತಿಕ ಬಂಧನದಿಂದ ಮುಕ್ತಿಹೊಂದುವನು. ಅವನು ಜ್ಞಾನ, ನಿಜವಾದ ಜ್ಞಾನವನ್ನು ಪಡೆಯುವನು. ಲೌಕಿಕ ಜ್ಞಾನವು ಬಂಧನಕ್ಕೆ ಕಾರಣವಾಗಿದೆ. ಭಕ್ತಿವಿನೋದ ಠಾಕುರರ ಪ್ರಕಾರ ಲೌಕಿಕ ಜ್ಞಾನದ ಪ್ರಗತಿ ಎಂದರೆ ಹೆಚ್ಚು ಬಂಧನದ ಬದುಕು; ಆಧ್ಯಾತ್ಮಿಕ ಜ್ಞಾನದ ಪ್ರಗತಿ ಎಂದರೆ ಹೆಚ್ಚು ಮುಕ್ತಿ. ಹಾಗಾಗಿ ಲೌಕಿಕ ಬಂಧನದಿಂದ ನಮ್ಮನ್ನು ನಾವು ಹೇಗೆ ಮುಕ್ತಗೊಳಿಸುವುದೆಂಬುದೇ ನಮ್ಮ ಸಮಸ್ಯೆ.

ನಾವು ಕಟ್ಟಿ ಹಾಕಲ್ಪಟ್ಟಿದ್ದೇವೆ. ನಾನು ಆಧ್ಯಾತ್ಮಿಕ ಆತ್ಮ, ನೀವೂ ಆಧ್ಯಾತ್ಮಿಕ ಆತ್ಮ. ಆದರೆ ನಾವು ಲೌಕಿಕ ಬಂಧನದಲ್ಲಿ ಸಿಲುಕಿದ್ದೇವೆ. ಈ ಬಂಧನದಲ್ಲಿರುವುದರಿಂದ ನಮಗೆ ಸ್ವಾತಂತ್ರ್ಯವಿಲ್ಲ. ಜನರು ಇದನ್ನು ಅರ್ಥಮಾಡಿಕೊಳ್ಳುವುದಿಲ್ಲ.

ಆಧ್ಯಾತ್ಮಿಕ ಆತ್ಮವನ್ನು **ಸರ್ವ-ಗ** ಎಂದು ವಿವರಿಸಲಾಗಿದೆ. **ಸರ್ವ-ಗ** ಎಂದರೆ ಈ ಆಧ್ಯಾತ್ಮಿಕ ಆತ್ಮವು ಎಲ್ಲಿ ಬೇಕಾದರೂ ಸಂಚರಿಸಬಹುದು. ಆದರೆ ಈ ಲೌಕಿಕ ಬಂಧನದಿಂದ ನಾವು ಲೌಕಿಕ ದೇಹಿಗಳಾಗಿರುವುದರಿಂದ ನಮ್ಮನ್ನು ತಡೆಯಲಾಗುತ್ತಿದೆ. ಬೇರೆ ಗ್ರಹಗಳಿಗೂ ನಮಗೆ ಹೋಗಲಾಗದು.

ಆದರೂ, ಯೋಗಿಗಳು, ಯೋಗ ವಿಧಾನಗಳಿಂದ ಲೌಕಿಕ ಬದುಕಿನಿಂದ ಒಂದಷ್ಟು ಮುಕ್ತಿ ಪಡೆದುಕೊಳ್ಳುತ್ತಾರೆ. ಹಾಗಾಗಿ, ತ್ವರಿತವಾಗಿ ಅವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗುವುದು ಸಾಧ್ಯ. ಲೌಕಿಕ ಜಗತ್ತಿನಲ್ಲಿರುವ ಯೋಗಿಗಳಿಗೂ ಇದು ಸಾಧ್ಯ. ಅವರು ಈ ಗ್ರಹದಲ್ಲಿ ತ್ವರಿತವಾಗಿ ಸಂಚರಿಸುತ್ತಾರೆ. ಭಾರತದಲ್ಲಿ ಈಗಲೂ ಕೆಲ ಯೋಗಿಗಳಿದ್ದಾರೆ. ಅವರು ಪ್ರತಿದಿನ ಮುಂಜಾನೆ ನಾಲ್ಕು ಪವಿತ್ರ ಸ್ಥಳಗಳಲ್ಲಿ ಸ್ನಾನ ಮಾಡುತ್ತಾರೆ. ಜಗನ್ನಾಥಪುರಿ, ರಾಮೇಶ್ವರಂ, ಹರಿದ್ವಾರ ಮತ್ತು ದ್ವಾರಕೆಯಲ್ಲಿ ಅವರು ಮೀಯುತ್ತಾರೆ. ಒಂದು ಕಡೆಯಿಂದ ಮತ್ತೊಂದೆಡೆಗೆ ಎಷ್ಟು ವೇಗವಾಗಿ ಹೋಗುವುದು ಸಾಧ್ಯ ಎಂಬುದನ್ನು ಅವರು

ವಿವರಿಸುತ್ತಾರೆ. ನಾವು ಕೆಲ ಯೋಗಿಗಳನ್ನು ಭೇಟಿ ಮಾಡಿದ್ದೆವು.

ಅವರು ಹಾಗೆ ಮಾಡುವುದು ಹೇಗೆ ಸಾಧ್ಯ ಎಂಬುದನ್ನು ನಾವು ನಮ್ಮದೇ ಅನುಭವದಿಂದ ಅರ್ಥಮಾಡಿಕೊಳ್ಳಬಲ್ಲೆವು. ಸುಮ್ಮನೆ ಮನಸ್ಸನ್ನು ಪರಿಗಣಿಸಿ. ಮನಸ್ಸು ಎಷ್ಟು ವೇಗವಾಗಿ ಸಂಚರಿಸುತ್ತದೆ ಎಂದರೆ ಕೆಲವೇ ಸೆಕೆಂಡ್‌ಗಳಲ್ಲಿ ಅದು ಸಾವಿರಾರು ಮೈಲಿ ಸಂಚರಿಸುತ್ತದೆ. ಆಧ್ಯಾತ್ಮಿಕ ಆತ್ಮ ಇನ್ನೂ ಹೆಚ್ಚು ವೇಗವಾಗಿ ಸಂಚರಿಸಬಲ್ಲದು. ಹಾಗಾಗಿ ಅದರ ವೇಗ ಉತ್ಕೃಷ್ಟದ್ದು. ಭಗವದ್ಗೀತೆಯಲ್ಲಿ ಕೃಷ್ಣ ಹೇಳುತ್ತಾನೆ: **ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ ಮಾಮೇತಿ ಸೋಽರ್ಜುನ** ಈ ದೇಹ ಪರಿತ್ಯಾಗ ಮಾಡಿದ ಮೇಲೆ ನನ್ನ ಬಳಿಗೆ, ಅಧ್ಯಾತ್ಮ ಜಗತ್ತಿಗೆ ಬರಬಹುದು. ಇವು ವೇದವಾಕ್ಯಗಳು. **ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ** – ಇದನ್ನು ನೀವು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ. ಸಾವಿನ ಅನಂತರ ಮತ್ತೊಂದು ದೇಹವನ್ನು ನಾವು ಸ್ವೀಕರಿಸುತ್ತೇವೆ. ನಡೆಯುವಾಗ ಮೊದಲ ಹೆಜ್ಜೆ ದೃಢವಾಗಿದ್ದರೆ ನೀವು ಮತ್ತೊಂದು ಹೆಜ್ಜೆ ಇಡುತ್ತೀರಿ. ಅದೇ ರೀತಿ ಪರಮಾತ್ಮನ ವ್ಯವಸ್ಥೆಯಿಂದ ಮತ್ತೊಂದು ದೇಹ ಸಿದ್ಧವಾದ ತತ್‌ಕ್ಷಣ ನಾವು ಪ್ರಸ್ತುತ ದೇಹ ತ್ಯಜಿಸಿ ಅದನ್ನು ಪ್ರವೇಶ ಮಾಡುತ್ತೇವೆ. ಇದು ನಿಯಮ.

ಹಾಗಾಗಿ ಕೃಷ್ಣ ಹೇಳುತ್ತಾನೆ: **ತ್ಯಕ್ತ್ವಾ ದೇಹಂ ಪುನರ್ಜನ್ಮ ನೈತಿ.** ಒಂದು ಜೀವವು ಮತ್ತೊಂದು ದೇಹ ಪ್ರವೇಶಿಸದಿದ್ದರೆ, ಅವನೆಲ್ಲಿಗೆ ಹೋಗುತ್ತಾನೆ? 'ಅವನು ನನ್ನ ಬಳಿಗೆ ಬರುತ್ತಾನೆ' ಎನ್ನುತ್ತಾನೆ ಕೃಷ್ಣ. ಈಗ ಆತ್ಮದ ವೇಗವನ್ನು ಕಲ್ಪಿಸಿಕೊಳ್ಳಿ. ಸಾವಿನ ಅನಂತರ ದೇಹದಾಚೆ ಇರುವ ಅವನು ತತ್‌ಕ್ಷಣ ಗೋಲೋಕ ವೃಂದಾವನಕ್ಕೆ ಅಥವಾ ಕೃಷ್ಣ ಎಲ್ಲಿರುತ್ತಾನೋ ಅಲ್ಲಿಗೆ ತೆರಳುತ್ತಾನೆ. ಕೃಷ್ಣನ ನಿತ್ಯಲೀಲೆಗೆ ಸೇರಲು ಸಾಗುತ್ತಾನೆ.

ಕೃಷ್ಣನ ನಿತ್ಯಲೀಲೆ ಕುರಿತಂತೆ ಚೈತನ್ಯ ಚರಿತಾಮೃತದಲ್ಲಿ ವಿವರಿಸಲಾಗಿದೆ. ತನ್ನ ಭೌಮಲೀಲೆಗಾಗಿ ಕೃಷ್ಣ ಒಂದಲ್ಲ ಒಂದು ವಿಶ್ವದಲ್ಲಿ ಉಪಸ್ಥಿತನಾಗಿರುತ್ತಾನೆ. ಇದು ಲೌಕಿಕ ಜಗತ್ತಿನಲ್ಲಿ ಅವನ ನಿತ್ಯಲೀಲೆ. ಶ್ರೀ ಚೈತನ್ಯರು ಸೂರ್ಯನ ಚಲನೆಯ ವಿವರ ನೀಡಿದ್ದಾರೆ. ಸೂರ್ಯನ ಚಲನೆಯಿಂದ ನಾವು ದಿನವನ್ನು 24 ತಾಸಿಗೆ, 60 ನಿಮಿಷಗಳಿಗೆ, 60 ಸೆಕೆಂಡ್‌ಗಳಿಗೆ ವಿಭಾಗಿಸಿದ್ದೇವೆ. ಆದರೂ ದಿನದ ಪ್ರತಿ ವೇಳೆಯೂ ಅಸ್ತಿತ್ವದಲ್ಲಿರುತ್ತದೆ. ಉದಾಹರಣೆಗೆ, ಇಂದು ನಮ್ಮ ಸೂರ್ಯೋದಯ 6.30ಕ್ಕೆ. ಇಲ್ಲಿ ಈ 6.30 ಸಾಗಿಬಿಟ್ಟಿತು. ಆದರೆ ಇನ್ನೆಲ್ಲೋ ಈಗ 6.30. ಅದು ಸಾಗಿದ ಮೇಲೆ ಮತ್ತೆಲ್ಲೋ 6.30 ಆಗಿರುತ್ತದೆ. ಅದೇ ರೀತಿ, ಕೃಷ್ಣ ಒಂದು ಜಗತ್ತಿನಿಂದ ಮತ್ತೊಂದು ಜಗತ್ತಿಗೆ ಸಂಚರಿಸುತ್ತಲೇ ಇರುತ್ತಾನೆ. ನಮ್ಮ ವಿಶ್ವಕ್ಕೆ ಬಂದಾಗ, ನಮಗೆ ಅವನ ದರ್ಶನ ಲಾಭ.

ಶ್ರೀಲ ಸನಾತನ ಗೋಸ್ವಾಮಿ ಹೇಳುತ್ತಾರೆ, ಕೃಷ್ಣನ ಜೊತೆಗೂಡುವ ಸಾಮರ್ಥ್ಯವುಳ್ಳ ಆತ್ಮವು ಈ ಜಗತ್ತಿನೊಳಗೇ ಎಲ್ಲಿ ಕೃಷ್ಣ ಭೌಮಲೀಲೆಯಲ್ಲಿ ನಿರತನಾಗಿರುವನೋ ಅಲ್ಲಿಗೇ ತೆರಳುತ್ತದೆ ಎಂದು. ಹೇಗೆ ವ್ಯಕ್ತಿಯೊಬ್ಬನಿಗೆ ಅಪ್ರೆಂಟಿಸ್‌ನಂತೆ ತರಬೇತಿ ನೀಡಿದ ಮೇಲೆ ಅವನಿಗೆ ಆ ಹುದ್ದೆ ನೀಡಲಾಗುತ್ತೋ ಹಾಗೆಯೇ ಕೃಷ್ಣಪ್ರಜ್ಞೆಗೆ ಅರ್ಹನಾದ ಜೀವಿಯು, ತನ್ನ ದೇಹವನ್ನು ತ್ಯಜಿಸಿದ ಕೂಡಲೇ ಕೃಷ್ಣನಿರುವ ಜಗತ್ತಿಗೆ ವರ್ಗಾಯಿಸಲ್ಪಡುತ್ತಾನೆ. ಅಲ್ಲಿ ಪರಿಪೂರ್ಣವಾದ ತರಬೇತಿಯ ಅನಂತರ ಮೂಲ ಕೃಷ್ಣಲೋಕವಾದ ಗೋಲೋಕ ವೃಂದಾವನಕ್ಕೆ ಅವನನ್ನು ಕಳುಹಿಸಲಾಗುತ್ತದೆ.

ಆತ್ಮ ಎಷ್ಟು ತ್ವರಿತವಾಗಿ ಸಂಚರಿಸುತ್ತದೆ – ಒಂದು ಕ್ಷಣದಲ್ಲಿ ಅದು ಕೃಷ್ಣನಲ್ಲಿಗೆ ಅಥವಾ ಯಾವುದಾದರೂ ಒಂದು ವಿಶ್ವಕ್ಕೆ ಓಡುತ್ತದೆ! ಲಕ್ಷಾಂತರ, ಕೋಟ್ಯಂತರ ವಿಶ್ವಗಳಿವೆ. ನಮಗೆ ನಮ್ಮ ವಿಶ್ವದ ಮಾಹಿತಿ ಮಾತ್ರ ತಿಳಿದುಬರುತ್ತದೆ. ಆದರೆ ವೇದ ಸಾಹಿತ್ಯದಿಂದ ಕೋಟ್ಯಂತರ ವಿಶ್ವಗಳ ಮಾಹಿತಿ ಲಭ್ಯವಾಗುತ್ತದೆ. ನಾವು ಒಂದು ವಿಶ್ವವನ್ನು ನೋಡಬಹುದು. ಆದರೆ ನಮಗೆ ಬ್ರಹ್ಮಸಂಹಿತೆಯಿಂದ ಮಾಹಿತಿ ಸಿಗುತ್ತದೆ: **ಯಸ್ಯ ಪ್ರಭಾ ಪ್ರಭವತೋ ಜಗದಂಡ ಕೋಟಿ.** ಜಗದಂಡ ಎಂದರೆ ಒಂದು ವಿಶ್ವ. ಕೋಟಿ ಎಂದರೆ ಕೋಟ್ಯಂತರ. ಅಪರಿಮಿತ ವಿಶ್ವಗಳಿವೆ ಎಂದು ಅರ್ಥ. ಪ್ರತಿಯೊಂದು ವಿಶ್ವದಲ್ಲಿಯೂ ಕೋಟ್ಯಂತರ ಗ್ರಹಗಳಿವೆ. ಒಂದಕ್ಕೊಂದು ಭಿನ್ನ. ಇದು ಸೃಷ್ಟಿ.

ಭಗವಂತನ ಸೃಷ್ಟಿ ವ್ಯಾಪ್ತಿಯನ್ನು ಈಗ ಕಲ್ಪಿಸಿಕೊಳ್ಳಿ. ಅವನು ಹೇಗೆ ನಿರಂತರವಾಗಿ ಪ್ರತಿ ವಿಶ್ವವನ್ನು ಪ್ರವೇಶಿಸುತ್ತಾನೆ, ಹೇಗೆ ಅವನ ಲೀಲೆ ಸಾಗುತ್ತಲೇ ಇದೆ ಎಂಬುದನ್ನು ಕಣ್ಣಮುಂದೆ ಕಟ್ಟಿಕೊಳ್ಳಿ. ಒಂದು ವಿಶ್ವದಲ್ಲಿ ಕೃಷ್ಣನ ಜನ್ಮ ಪೂರ್ಣಗೊಂಡ ಮೇಲೆ ತತ್‌ಕ್ಷಣವೇ ಮತ್ತೊಂದು ಜಗತ್ತಿನಲ್ಲಿ ಅವನ ಅವತಾರವಾಗುತ್ತದೆ. ಇದನ್ನೇ ನಿತ್ಯಲೀಲ ಎನ್ನುವುದು. ಹೀಗಾಗಿ ಆತ್ಮಕ್ಕೆ ಅಪರಿಮಿತ ಶಕ್ತಿ ಇದೆ ಹಾಗೂ ಆತ್ಮವು ಕೃಷ್ಣನ ಒಂದು ತುಣುಕು ಅಷ್ಟೆ . ಈಗ ನೀವು ಕೃಷ್ಣನ ಅಗಾಧ ಶಕ್ತಿಯನ್ನು ಕಲ್ಪಿಸಿಕೊಳ್ಳಬಹುದು. ಜೀವಿಗಳಿಗೇ ಎಷ್ಟೊಂದು ಸಾಮರ್ಥ್ಯವಿದೆ. ಹಾಗಾದರೆ, ಕೃಷ್ಣನ ಸಾಮರ್ಥ್ಯವೇನು? ಸಂಪೂರ್ಣ ಆಧ್ಯಾತ್ಮಿಕ ಸಾಮರ್ಥ್ಯವಿರುವ ಕೃಷ್ಣನ ಶಕ್ತಿ ಏನು?

ವಾಸ್ತವವಾಗಿ ನಮಗೆ ಕೃಷ್ಣನ ಅಂಶವಾಗಿ ಸಂತೋಷದಿಂದ ಇರಬೇಕೆಂದರೆ, ನಾವು ಅವನ ಜೊತೆಗೂಡಬೇಕು. ಅದೇ ನಮ್ಮ ಮೌಲ್ಯ. ಈ ಉದಾಹರಣೆಯನ್ನು ನಾನು ಅನೇಕ ಬಾರಿ ನೀಡಿದ್ದೇನೆ. ಯಂತ್ರಕ್ಕೆ ಅಳವಡಿಸಿದಾಗ ಸಣ್ಣ ಸ್ಕ್ರೂಗೆ ಇನ್ನಿಲ್ಲದ ಬೆಲೆ ಇರುತ್ತದೆ. ಯಂತ್ರದಿಂದ ಹೊರ ತೆಗೆದರೆ ಅದಕ್ಕೆ ಬೆಲೆಯೇ ಇಲ್ಲ. ಅದೇ ರೀತಿ ನಾವು ಕೃಷ್ಣ, ವಾಸುದೇವನ ವಿಭಿನ್ನಾಂಶ. ಕೃಷ್ಣನ ಜೊತೆಗೂಡಿದಾಗ ನಮ್ಮ ಬೆಲೆ ಅಧಿಕ. ಕೃಷ್ಣಪ್ರಜ್ಞೆಯಲ್ಲಿ ನಮ್ಮೆಲ್ಲ ಚಟುವಟಿಕೆಯನ್ನು ಅಳವಡಿಸಿದರೆ ನಮ್ಮ ಮೌಲ್ಯ ಪರಿಪೂರ್ಣ. ನಾವು ಬೆಲೆಬಾಳುವವರಾಗುತ್ತೇವೆ. ಇಲ್ಲವಾದರೆ, ಪ್ರಗತಿ ಎನ್ನುವುದು ಬರೀ ಕಲ್ಪನೆ / ಮಿಥ್ಯೆಯಾಗುತ್ತದೆ.

ನಮಗೆ ನಿಜವಾಗಿಯೂ ಸಂತೋಷ, ನೆಮ್ಮದಿ ಬೇಕಾದರೆ ನಾವು ಕೃಷ್ಣನ ಜೊತೆಗೂಡಬೇಕು. ನಮಗೆ ಕೃಷ್ಣಬೇಕು. ಅದು ಕೃಷ್ಣನ ಆಸಕ್ತಿಗಲ್ಲ, ನಮ್ಮ ಆಸಕ್ತಿಗಾಗಿ. ನಿಮ್ಮಂಥ ಸಹಸ್ರಾರು ಜೀವಿಗಳನ್ನು ಕೃಷ್ಣ ಸೃಷ್ಟಿಸಬಲ್ಲ. ಅವನಿಗೆ ನಿಮ್ಮ ಸೇವೆಯ ಅಗತ್ಯವಿಲ್ಲ. ಅವನು ಪರಿಪೂರ್ಣ. ನಿಮ್ಮ ತೃಪ್ತಿಗಾಗಿ ನೀವು ಕೃಷ್ಣನಿಗೆ ಪ್ರೇಮ ಭಕ್ತಿಸೇವೆ ಸಲ್ಲಿಸಬೇಕು. ಅದು ಬುದ್ಧಿವಂತಿಕೆ. ಇಲ್ಲವಾದರೆ, ಮೂರ್ಖತನ, ಮೌಢ್ಯ, ಕಲ್ಪನೆ. ದನ್ಯವಾದಗಳು. *




ಕೇವಲ ಕೃಷ್ಣನ ಪವಿತ್ರನಾಮವನ್ನು ಜಪಿಸುವಷ್ಟರಿಂದಲೇ ವ್ಯಕ್ತಿಯು ಐಹಿಕ ಅಸ್ತಿತ್ವದಿಂದ ವಿಮೋಚನೆಯನ್ನು ಪಡೆಯಬಹುದು.  ಹರೇ ಕೃಷ್ಣ ಮಹಾಮಂತ್ರವನ್ನು ಜಪಿಸುವುದರಿಂದ ವ್ಯಕ್ತಿಯು ದಿಟವಾಗಿಯೂ ಪ್ರಭುವಿನ ಪಾದಕಮಲವನ್ನು ನೋಡಲು ಸಮರ್ಥನಾಗುತ್ತಾನೆ.

**– ಶ್ರೀ ಚೈತನ್ಯ ಮಹಾಪ್ರಭು, ಚೈತನ್ಯ ಚರಿತಾಮೃತ ಆದಿ 7.73**

★ ★ ★

ಹರೇ ಕೃಷ್ಣ – ಎನ್ನುವ ಪದಗಳು ಶ್ರೀ ಚೈತನ್ಯ ಮಹಾಪ್ರಭುಗಳ ಬಾಯಿಂದ ಹೊರಹೊಮ್ಮಿದವು ಮತ್ತು ಜಗತ್ತನ್ನು ಭಗವಂತನ ಪ್ರೇಮದಲ್ಲಿ ಮುಳುಗಿಸಿತು. ಈ ನಾಮಗಳನ್ನು ಕೊಂಡಾಡೋಣ!

**– ರೂಪ ಗೋಸ್ವಾಮಿ, ಲಘು ಭಾಗವತಾಮೃತ, 1.4**

★ ★ ★

ದೇವೋತ್ತಮ ಪರಮ ಪುರುಷನು ತನ್ನ ಮೂಲ ರೂಪ ಗೋಪಾಲಕ ಬಾಲಕನಾಗಿ ಅವತರಿಸಿದನು. ಅವನ ಮಾಯಾಶಕ್ತಿಯಿಂದ ವಂಚನೆಗೆ ಒಳಗಾದ ಮತ್ತು ಗೊಂದಲಕ್ಕೆ ಸಿಲುಕಿರುವ ವಿಶ್ವಕ್ಕೆ ಅವನ ನೈಜ ಗುರುತು ಅರ್ಥವಾಗುವುದಿಲ್ಲ.

**– ಶ್ರೀ ಕೃಷ್ಣ ಉಪನಿಷದ್ 1.10**

★ ★ ★

ಹರಿ, ಕೃಷ್ಣ ಮತ್ತು ರಾಮ ಮುಂತಾದ ಹೆಸರುಗಳಿಂದ ಕರೆಯುವ ದೇವೋತ್ತಮ ಪರಮ ಪುರುಷನಿಗೆ ಜಯವಾಗಲಿ! ಅವನು ವಿಶ್ವದ ಎಲ್ಲ ಜೀವಿಗಳ ಶುಭಕರವಾದ ಆಶ್ರಯತಾಣ. ಅವನು ಎಲ್ಲ ಆತ್ಮಗಳ ಮನಸ್ಸನ್ನು ಸಂತೋಷಪಡಿಸುತ್ತಾನೆ.

**– ಶ್ರೀಲ ಭಕ್ತಿವಿನೋದ ಠಾಕುರ, ಶ್ರೀ ನಾಮಾಷ್ಟಕ, 2**

★ ★ ★

ಭ್ರಮೆಯಲ್ಲಿ ಇರಬೇಡ, ಶಾಶ್ವತ ವಾಸ್ತವಕ್ಕೆ ಹೋಗು. ಕತ್ತಲಿನಲ್ಲಿ ಇರಬೇಡ, ಬೆಳಕಿಗೆ ಹೋಗು. ಲೌಕಿಕ ಶರೀರವನ್ನು ಪಡೆಯುತ್ತಲೇ ಇರಬೇಡ. ಅಮರನಾಗು!

**– ಬೃಹತ್ ಅರಣ್ಯಕ ಉಪನಿಷತ್, 1.3.28**

★ ★ ★

# ಕೃಷ್ಣನನ್ನು ಅರಸುತ್ತಾ

ನಮ್ಮಲ್ಲಿ ಪ್ರತಿಯೊಬ್ಬರೂ ಸುಖವನ್ನು ಅರಸುತ್ತಿದ್ದೇವೆ. ಆದರೆ ನಿಜವಾದ ಸುಖ ಯಾವುದೆಂಬುದು ನಮಗೆ ತಿಳಿಯದು. ಸುಖದ ಬಗೆಗೆ ಎಷ್ಟೆಷ್ಟೋ ಜಾಹೀರಾತುಗಳು ಬರುತ್ತಿರುವುದನ್ನು ನಾವು ನೋಡಬಹುದು. ಆದರೆ ವಾಸ್ತವವಾಗಿ ಸುಖವಾಗಿರುವ ಕೆಲವರಾದರೂ ನಮ್ಮ ಕಣ್ಣಿಗೆ ಬೀಳುವುದಿಲ್ಲ. ಏಕೆಂದರೆ ನಿಜವಾದ ಸುಖದ ನೆಲೆಯು ಕ್ಷಣಿಕ ವಸ್ತುಗಳನ್ನು ಮೀರಿದ್ದು ಎನ್ನುವುದನ್ನು ಬಹು ಜನ ಅರಿಯರು. ಇಂತಹ ನೈಜ ಸುಖವನ್ನು ಭಗವಾನ್ ಕೃಷ್ಣನು ಭಗವದ್ಗೀತೆಯಲ್ಲಿ ಅರ್ಜುನನಿಗೆ ವರ್ಣಿಸಿ ಹೇಳಿದ್ದಾನೆ.

ಸುಖವನ್ನು ನಾವು ಸಾಮಾನ್ಯವಾಗಿ ಇಂದ್ರಿಯಗಳ ಮೂಲಕ ಪರಿಗ್ರಹಿಸುತ್ತೇವೆ. ಉದಾಹರಣೆಗೆ ಕಲ್ಲೊಂದನ್ನು ತೆಗೆದುಕೊಳ್ಳೋಣ. ಕಲ್ಲಿಗೆ ಇಂದ್ರಿಯಗಳು ಇಲ್ಲವಾದ್ದರಿಂದ ಅದು ಸುಖವನ್ನಾಗಲಿ ದುಃಖವನ್ನಾಗಲಿ ಅನುಭವಿಸಲಾರದು. ಬೆಳೆದು ಪಕ್ವವಾಗಿಲ್ಲದ ಪ್ರಜ್ಞೆಗಿಂತ, ಪಕ್ವವಾದ ಪ್ರಜ್ಞೆಯು ಸುಖದುಃಖಗಳನ್ನು ತೀವ್ರವಾಗಿ ಅನುಭವಿಸಬಲ್ಲದು. ಮರಗಳಿಗೇನೋ ಪ್ರಜ್ಞೆಯುಂಟು. ಆದರೆ ಅದು ಮಾಗಿದ ಪ್ರಜ್ಞೆಯಲ್ಲ. ಎಲ್ಲ ಋತುಮಾನಗಳಲ್ಲಿ ಮರಗಳು ಬಹುಕಾಲ ಒಂದೆಡೆ ನಿಂತಿರಬಲ್ಲವು. ಆದರೆ ಅವು ದುಃಖಗಳನ್ನು ಅನುಭವಿಸುವ ಮಾರ್ಗವೇ ಇಲ್ಲ. ಮೂರು ದಿನಗಳ ಕಾಲ ಅಥವಾ ಅದಕ್ಕೂ ಕಡಮೆ ಕಾಲ ಮರದಂತೆ ಒಂದೆ ಕಡೆ ನಿಂತಿರೆಂದು ಒಬ್ಬ ಮನುಷ್ಯನಿಗೆ ಹೇಳಿದರೆ, ಆ ಪಾಡನ್ನು ತಾಳಲು ಅವನು ಸಮರ್ಥನಾಗಲಾರ. ಒಟ್ಟಿನಲ್ಲಿ ಹೇಳುವುದಾದರೆ ಒಂದು ಜೀವಿಯ ಪ್ರಜ್ಞೆ ಎಷ್ಟರಮಟ್ಟಿಗೆ ಬೆಳೆದಿದೆ ಎನ್ನುವುದನ್ನವಲಂಬಿಸಿ ಅದು ಸುಖದುಃಖಗಳನ್ನು ಅನುಭವಿಸುತ್ತದೆ.



## ನಿಜವಾದ ಸುಖ

ನಾವು ಈ ಐಹಿಕ ಜಗತ್ತಿನಲ್ಲಿ ಅನುಭವಿಸುತ್ತಿರುವ ಸುಖವು ನಿಜವಾದ ಸುಖವಲ್ಲ. ನೀನು ಸುಖವಾಗಿರುವೆಯಾ ಎಂದು ಒಂದು ಮರವನ್ನು ಕೇಳಿದ್ದೇ ಆದರೆ, ಉತ್ತರ ಕೊಡುವ ಶಕ್ತಿ ಆ ಮರಕ್ಕಿದ್ದು ಅದು ಹೇಳಬಹುದಾದರೆ, "ನಿಂತ ಕಡೆಯೇ ವರ್ಷದುದ್ದಕ್ಕೂ ಸುಖವಾಗಿದ್ದೇನೆ. ಚಳಿಗಾಳಿಗಳನ್ನೂ, ಹಿಮ ಸುರಿಯುವುದನ್ನೂ ನಾನು ನಿಜಕ್ಕೂ ಸಂತೋಷದಿಂದ ತಾಳಿಕೊಂಡಿದ್ದೇನೆ" ಎಂದು ಹೇಳೀತು. ಇಂತಹ ಸುಖದಿಂದ ಮರವೇನೋ ಸಂತೋಷಪಟ್ಟೀತು, ಆದರೆ ಮನುಷ್ಯನ ಪಾಲಿಗೆ ಇದು ಬಹು ಕೀಳು ತೆರನ ಸುಖ. ಜೀವಿಗಳಲ್ಲಿ ನಾನಾ ಬಗೆಯವರಿದ್ದಾರೆ. ಹಾಗೆಯೇ ಸುಖದ ಬಗೆಗಿನ ಅವರ ಗ್ರಹಿಕೆಗಳೂ ಕಲ್ಪನೆಗಳೂ ಬೇರೆ ಬೇರೆ ತೆರನಾಗಿವೆ; ಬೇರೆ ಬೇರೆ ವರ್ಗದ್ದಾಗಿವೆ. ಒಂದು ಪ್ರಾಣಿಯು ವಧೆಯಾಗಲು ಹೋಗುತ್ತಿರುವುದನ್ನು ನೋಡಿದ ಇನ್ನೊಂದು ಪ್ರಾಣಿಯು ತನ್ನ ಪಾಡಿಗೆ ತಾನು ಹುಲ್ಲು ಮೇಯುವ ಕಾಯಕದಲ್ಲಿ ಮಗ್ನವಾಗಿರುತ್ತದೆ. ಮುಂದಿನ ಸರದಿ ತನ್ನದೇ ಇರಬಹುದೆಂಬ ಜ್ಞಾನ ಆ ಪ್ರಾಣಿಗಿಲ್ಲ. ಮರುಕ್ಷಣವೇ ತಾನೇ ವಧೆಯಾಗಬಹುದಾಗಿದ್ದೂ, ತಾನು ಸುಖವಾಗಿದ್ದೇನೆಂದೇ ಆ ಪ್ರಾಣಿಯು ತಿಳಿದಿರುತ್ತದೆ.

ಹೀಗೆ ಸುಖದಲ್ಲಿ ಹತ್ತು ಹಲವು ದರ್ಜೆಗಳಿವೆ. ಇದ್ದರೂ ಅವುಗಳಲ್ಲಿ ಅತ್ಯಂತ ಉನ್ನತ ಮಟ್ಟದ ಸುಖ ಯಾವುದು? ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ :

**ಸುಖಂ ಆತ್ಯಂತಿಕಮ್ ಯತ್ತದ್ ಬುದ್ಧಿಗ್ರಾಹ್ಯಂ ಅತೀಂದ್ರಿಯಮ್**
**ವೇತ್ತಿ ಯತ್ರ ನ ಚೈವಾಯಮ್ ಸ್ಥಿತಃ ಚಲತಿ ತತ್ತ್ವತಃ**

"ಆ ಸಮಾಧಿ ಸ್ಥಿತಿಯಲ್ಲಿ ವ್ಯಕ್ತಿಯು ಅನಿಯಮಿತ ದಿವ್ಯ ಸುಖವನ್ನು ಅನುಭವಿಸುತ್ತಿರುತ್ತಾನೆ ಮತ್ತು ದಿವ್ಯ ಇಂದ್ರಿಯಗಳಿಂದ ಆ ಸುಖವನ್ನು ಸವಿಯುತ್ತಿರುತ್ತಾನೆ. ಹೀಗೆ ಸ್ಥಿತನಾಗಿರುತ್ತ, ಆ ವ್ಯಕ್ತಿಯು ಸತ್ಯದ ಮಾರ್ಗವನ್ನು ಬಿಟ್ಟು ಅತ್ತಿತ್ತ ಚಲಿಸುವುದಿಲ್ಲ. " (ಗೀತಾ 6.21).

## ಸುಖಿಸುವುದು ಆತ್ಮ, ದೇಹವಲ್ಲ

ಬುದ್ಧಿ ಎಂದರೆ ಜಾಣ್ಮೆ. ಸುಖಪಡಬೇಕಾದರೆ ವ್ಯಕ್ತಿಯು ಬುದ್ಧಿವಂತನಾಗಿರಬೇಕು. ಪ್ರಾಣಿಗಳಿಗೆ ವಿಕಸಿತ ಬುದ್ಧಿಯಿಲ್ಲದ ಕಾರಣ ಅವು ಮನುಷ್ಯರಂತೆ ಸುಖವನ್ನು ಸವಿಯಲಾರವು. ಮೃತ ಶರೀರವೊಂದಕ್ಕೆ ಕೈಕಾಲು, ಮುಖ, ಕಣ್ಣು ಮತ್ತು ಇತರೆ ಇಂದ್ರಿಯಗಳೇನೇ ಇರಬಹುದು. ಆದರೂ ಅದೇನೂ ಸುಖಪಡಲಾರದು. ಹೀಗೇಕೆ? ಸುಖಪಡುವ ಶಕ್ತಿ, ಆಧ್ಯಾತ್ಮಿಕ ಕಿಡಿ, ಅದರ ದೇಹದಿಂದ ಹೊರಟು ಹೋಗಿದೆಯಾದ್ದರಿಂದ ಆ ದೇಹದಲ್ಲಿ ಶಕ್ತಿ ಉಳಿದಿಲ್ಲ. ಈ ವಿಷಯವನ್ನು ಸ್ವಲ್ಪ ಬುದ್ಧಿವಂತಿಕೆಯಿಂದ ಇನ್ನೂ ಅಷ್ಟು ಪರಿಶೀಲಿಸಿದರೆ, ಸುಖಪಡುತ್ತಿದ್ದುದು ದೇಹವಲ್ಲ, ಅದರೊಳಗಿನ ಆಧ್ಯಾತ್ಮಿಕ ಕಿಡಿ ಎನ್ನುವುದು ಮನದಟ್ಟಾಗುತ್ತದೆ. ದೈಹಿಕ ಇಂದ್ರಿಯಗಳಿಂದ ತಾನು ಸುಖ ಪಡುತ್ತಿರುವುದಾಗಿ ವ್ಯಕ್ತಿಯು ಭಾವಿಸಿದರೂ, ನಿಜವಾಗಿ ಸುಖ ಪಡುತ್ತಿದ್ದುದು ಆ ಆಧ್ಯಾತ್ಮಿಕ ಕಿಡಿ. ಸುಖಿಸುವ ಶಕ್ತಿ ಆ ಆಧ್ಯಾತ್ಮಿಕ ಕಿಡಿಗೆ ಸರ್ವದಾ ಇರುತ್ತದೆ. ಆದರೆ ಐಹಿಕ ದೇಹವು ಅದನ್ನು ಕವಿದಿರುವುದರಿಂದ ಅದರ ಸುಖಿಸುವ ಶಕ್ತಿಯು ಸರ್ವದಾ ಪ್ರಕಟವಾಗುವುದಿಲ್ಲ. ನಮಗೆ ತಿಳಿಯದಿರಬಹುದಾದರೂ, ಆಧ್ಯಾತ್ಮಿಕ ಕಿಡಿಯಿಲ್ಲದೆ ದೇಹವು ಸುಖದ ಭಾವವನ್ನು ಅನುಭವಿಸಲಾರದು. ಸುಂದರ ಹೆಣ್ಣಿನ ಮೃತ ಶರೀರವನ್ನು ಒಬ್ಬ ವ್ಯಕ್ತಿಗೆ ನೀಡಿದರೆ ಅವನು ಅದನ್ನು ಪರಿಗ್ರಹಿಸುತ್ತಾನೆಯೇ? ಇಲ್ಲ. ಏಕೆಂದರೆ ಆ ಸ್ತ್ರೀ ಶರೀರದಿಂದ ಆಧ್ಯಾತ್ಮಿಕ ಕಿಡಿಯು ಹಾರಿಹೋಗಿದೆ. ಆ ಕಿಡಿ ದೇಹದಲ್ಲಿದ್ದು ಕೊಂಡು ಎಲ್ಲವನ್ನೂ ಅನುಭವಿಸುತ್ತಿತ್ತು. ಅಷ್ಟೇ ಅಲ್ಲ, ಆ ಕಿಡಿಯು ದೇಹವನ್ನು ಪೋಷಿಸುತ್ತಲೂ ಇತ್ತು. ಆ ಕಿಡಿಯು ದೇಹವನ್ನು ಬಿಟ್ಟೊಡನೆ ದೇಹವು ಕೊಳೆಯತೊಡಗುತ್ತದೆ.

## ಆತ್ಮದ ರೂಪ

ಚೇತನವು ಸುಖಪಡುತ್ತಿದ್ದರೆ, ಅದಕ್ಕೆ ಅದರದೇ ಇಂದ್ರಿಯಗಳಿರಬೇಕೆಂಬುದು ಇದರಿಂದ ಸಿದ್ಧವಾಗುತ್ತದೆ. ಇಂದ್ರಿಯಗಳಿಲ್ಲದೆ ಅದು ಹೇಗೆ ತಾನೆ ಸುಖ ಪಡಲಾದೀತು? ಚೇತನಾತ್ಮವು ಅಣುಮಾತ್ರದ್ದೇ ಆದರೂ ನಿಜವಾಗಿ ಸುಖವನ್ನು ಪಡೆಯುವ ಕಾರಭಾರಿ ಎಂದು ವೇದಗಳು ದೃಢಪಡಿಸುತ್ತವೆ. ಆತ್ಮವನ್ನು ಅಳೆಯಲು ಸಾಧ್ಯವಿಲ್ಲ. ಹೀಗೆಂದ ಮಾತ್ರಕ್ಕೆ ಅದಕ್ಕೆ ಅಳತೆಯೇ ಇಲ್ಲವೆಂದಲ್ಲ. ಒಂದು ವಸ್ತುವು ನಮ್ಮ ಕಣ್ಣಿಗೆ ಉದ್ದಗಲವಿಲ್ಲದ್ದಾಗಿ ಒಂದು ಚುಕ್ಕೆಯಂತೆ ಕಾಣಬಹುದು. ಅದಕ್ಕೆ ಉದ್ದಗಲಗಳಿಲ್ಲದಂತೆ ನಮಗೆ ತೋರಬಹುದು. ಆದರೆ ಅದೇ ವಸ್ತುವನ್ನು ನಾವು ಸೂಕ್ಷ್ಮದರ್ಶಕದಲ್ಲಿ ನೋಡಿದರೆ ಅದಕ್ಕೆ ಉದ್ದಗಲಗಳಿರುವುದು ಗೋಚರಿಸುತ್ತದೆ. ಇದೇ ರೀತಿ ಆತ್ಮಕ್ಕೂ ಅದರ ಅಳತೆಯಿದೆ. ಆದರೆ ನಾವದನ್ನು ಗ್ರಹಿಸಲಾರೆವು. ನಾವು ಒಂದು ವಸ್ತ್ರವನ್ನು ಕೊಂಡಾಗ ಅದನ್ನು ದೇಹಕ್ಕೆ ಅಳವಡುವಂತೆ ಮಾಡಲಾಗಿರುತ್ತದೆ. ಆಧ್ಯಾತ್ಮಿಕ ಕಿಡಿಗೆ ಒಂದು ರೂಪವಿರಲೇಬೇಕು. ಇಲ್ಲದಿದ್ದರೆ ಅದಕ್ಕೆ ತನ್ನಲ್ಲಿ ಸ್ಥಾನಕೊಟ್ಟು ಐಹಿಕ ದೇಹ ಹೇಗೆ ಬೆಳೆಯಿತು? ಇಲ್ಲಿನ ಮುಖ್ಯಾಂಶವೆಂದರೆ ಆಧ್ಯಾತ್ಮಿಕ ಕಿಡಿಯು ನಿರಾಕಾರವಲ್ಲ. ಅದು ವಾಸ್ತವವಾಗಿಯೂ ಒಬ್ಬ ವ್ಯಕ್ತಿ. ಭಗವಂತನು ವಾಸ್ತವವಾದ ಒಬ್ಬ ಪುರುಷ ಮತ್ತು ಆಧ್ಯಾತ್ಮಿಕ ಕಿಡಿಯು ಭಗವಂತನಿಂದ ಹೊರಟ ಒಂದು ಕಿಡಿಯಾದ್ದರಿಂದ ಅದು ಕೂಡ ಒಬ್ಬ ವ್ಯಕ್ತಿಯೇ. ತಂದೆಯಾದವನಿಗೆ ಒಂದು ವ್ಯಕ್ತಿತ್ವ ಹಾಗೂ ವೈಯಕ್ತಿಕತೆಗಳು ಇದ್ದುದಾದರೆ ಅವು ಅವನ ಮಗನಿಗೂ ಇರುತ್ತವೆ. ಮತ್ತು ಮಗನಿಗೆ ವ್ಯಕ್ತಿತ್ವ ವೈಯಕ್ತಿಕತೆಗಳಿವೆಯಾದರೆ ಅದು ಅವನ ತಂದೆಗೂ ಇದೆಯೆಂದು ನಾವು ನಿರ್ಣಯಿಸಬಹುದು. ಆದ್ದರಿಂದ ದೇವರ ಮಕ್ಕಳಾದ ನಾವು ನಮ್ಮ ವ್ಯಕ್ತಿತ್ವ ಮತ್ತು ವ್ಯಕ್ತಿ ವಿಶಿಷ್ಟತೆಯನ್ನು ತೋರಿ ಪರಮ ಪ್ರಭುವಾದ ನಮ್ಮ ತಂದೆಗೆ ಅದನ್ನು ನಿರಾಕರಿಸಬಹುದಾದ್ದು ಹೇಗೆ?





**ಅತೀಂದ್ರಿಯಮ್** ಎಂದರೆ ನಾವು ನಿಜವಾದ ಸುಖವನ್ನು ಗ್ರಹಿಸಲು ಸಾಧ್ಯವಾಗುವುದು, ಐಹಿಕ ಇಂದ್ರಿಯಗಳನ್ನು ಮೀರಿ ಮುನ್ನಡೆದಾಗ ಎಂದು ಅರ್ಥ. **ರಮಂತೇ ಯೋಗಿನೋ ನಂತೇ ಸತ್ಯಾನಂದ ಚಿದಾತ್ಮನಿ** : ಆಧ್ಯಾತ್ಮಿಕ ಬದುಕನ್ನು ಬಯಸುವ ಯೋಗಿಗಳಾದರೋ ತಮ್ಮೊಳಗಿನ ಪರಮಾತ್ಮನಲ್ಲಿ ಚಿತ್ತವನ್ನು ಕೇಂದ್ರೀಕರಿಸಿ ಸಂತೋಷಪಡುತ್ತಿರುತ್ತಾರೆ. ಸುಖಾನುಭವವನ್ನು ಆಸ್ವಾದಿಸಲಾಗದಿದ್ದಲ್ಲಿ ಇಂದ್ರಿಯಗಳನ್ನು ನಿಯಂತ್ರಿಸಿಕೊಳ್ಳಲು ಅಷ್ಟೆಲ್ಲಾ ಶ್ರಮ ಪಡಬೇಕಾದುದು ಏಕೆ? ಇಷ್ಟೆಲ್ಲ ಕಷ್ಟಪಟ್ಟು ಯೋಗಿಗಳು ಯಾವ ಸುಖವನ್ನು ಅನುಭವಿಸುತ್ತಿದ್ದಾರೆ? ಅವರು ಅನುಭವಿಸುತ್ತಿರುವುದು ಅನಂತ ಸುಖವನ್ನು, ಮುಗಿವಿಲ್ಲದ ಸುಖವನ್ನು. ಇದು ಹೇಗೆ ಸಾಧ್ಯ? ಚೇತನ ಶಾಶ್ವತವಾದದ್ದು ಮತ್ತು ಪರಮ ಪ್ರಭುವು ನಿರಂತರನು. ಆದ್ದರಿಂದ ಅವರ ನಡುವಿನ ಪ್ರೇಮ ವಿನಿಮಯವೂ ನಿರಂತರವೇ. ನಿಜವಾಗಿಯೂ ಬುದ್ಧಿವಂತನಾದವನು ಈ ಐಹಿಕ ದೇಹದ ಕ್ಷಣಭಂಗುರ ಇಂದ್ರಿಯ ಸುಖವನ್ನು ದೂರವಿರಿಸಿ ತನ್ನ ಸುಖವನ್ನು ಆಧ್ಯಾತ್ಮಿಕ ಬದುಕಿನಲ್ಲಿ ಕಂಡುಕೊಳ್ಳುತ್ತಾನೆ. ಭಗವಂತನೊಡನೆ ಸೇರಿ ವ್ಯಕ್ತಿಯು ಕೈಗೊಳ್ಳುವ ಆಧ್ಯಾತ್ಮಿಕ ಬದುಕನ್ನು ರಾಸಲೀಲೆ ಎಂದು ಕರೆಯುತ್ತಾರೆ.

## ರಾಸಲೀಲೆ

ವೃಂದಾವನದ ಗೋಪಿಕಾ ಸ್ತ್ರೀಯರೊಂದಿಗೆ ಕೃಷ್ಣನು ನಡೆಸಿದ ರಾಸಲೀಲೆಯ ಬಗೆಗೆ ನಾವು ಕೇಳಿದ್ದೇವೆ. ಅದು ಪ್ರಾಪಂಚಿಕ ದೇಹಗಳ ನಡುವಿನ ವಿನಿಮಯದಂತಲ್ಲ. ಪ್ರತಿಯಾಗಿ ಅದು ಆಧ್ಯಾತ್ಮಿಕ ದೇಹಗಳು ನಡೆಸಿದ ಭಾವನಾತ್ಮಕ ವ್ಯಾಪಾರ. ಈ ವಿಷಯವನ್ನು ಅರ್ಥ ಮಾಡಿಕೊಳ್ಳಲು ವ್ಯಕ್ತಿಯು ಸ್ವಲ್ಪ ಬುದ್ಧಿವಂತನಾಗಿರಬೇಕು. ಏಕೆಂದರೆ ನಿಜವಾದ ಸುಖವೆಂದರೇನೆಂಬುದನ್ನು ಅರಿಯದ ಮನುಷ್ಯನು ಈ ಐಹಿಕ ಪ್ರಪಂಚದಲ್ಲಿ ಸುಖವನ್ನು ಅರಸುತ್ತಾನೆ. ನಮ್ಮಲ್ಲಿ ಒಂದು ಕಥೆಯಿದೆ. ಕಬ್ಬು ಎಂದರೆ ಹೇಗಿರುತ್ತದೆಂದು ತಿಳಿಯದ ಒಬ್ಬ ವ್ಯಕ್ತಿಯಿದ್ದ. ಆದರೆ ಅದನ್ನು ಜಗಿದರೆ ತುಂಬ ಸಿಹಿಯಾಗಿರುತ್ತದೆಂದು ಅವನಿಗೆ ಯಾರೋ ಹೇಳಿದ್ದರು. "ಸರಿ ಕಬ್ಬು ಹೇಗಿರುತ್ತದೆ?" ಎಂದವನು ಪ್ರಶ್ನೆ ಕೇಳಿದ. "ಅದೊಂದು ಬಿದಿರಿನ ಗಳದ ತರಹ ಇರುತ್ತದೆ" ಎಂದು ಯಾರೋ ಅವನಿಗೆ ಹೇಳಿದರು. ಸರಿ, ಈ ಮೂರ್ಖ ಮನುಷ್ಯನು ಕೈಗೆ ಸಿಕ್ಕಿದ ಬೊಂಬಿನ ಗಳಗಳನ್ನೆಲ್ಲ ಜಗಿಯತೊಡಗಿದ. ಹೀಗೆ ಮಾಡಿ ಅವನು ಕಬ್ಬಿನ ಸಿಹಿ ರುಚಿಯನ್ನು ಅನುಭವಿಸಿದ್ದೆಂತು? ಇದೇ ರೀತಿ, ನಾವು ಸುಖ ಸಂತೋಷಗಳನ್ನು ಕಾಣಲು ಪ್ರಯತ್ನಿಸುತ್ತಿದ್ದೇವೆ. ಈ ಐಹಿಕ ದೇಹವನ್ನು ಜಗಿಯುವುದರ ಮೂಲಕ ಅಂಥ ಸುಖ ಸಂತೋಷಗಳನ್ನು ಅರಸುತ್ತಿದ್ದೇವೆ. ಆದ್ದರಿಂದ ಸುಖವಾಗಲಿ, ಸಂತೋಷವಾಗಲಿ ಇಲ್ಲದಾಗಿದೆ. ದೇಹದ ಮೂಲಕ ಬರುವ ಸುಖದಲ್ಲಿ ಕ್ಷಣಿಕ ಸಂತೋಷ ಒಂದಿಷ್ಟಿರಬಹುದು. ತತ್ಕಾಲದ್ದು ಎಂಬುದರ ಕಾರಣ ಅದು ನಿಜವಾದ ಸಂತೋಷವಲ್ಲ. ಅಂತಹ ಸುಖವು ಆಕಾಶದಲ್ಲಿ ಕಾಣುವ ಮಿಂಚಿನ ಬೆಳಕಿನಂತೆ. ಅದು ಕ್ಷಣಿಕವಾಗಿ ಬೆಳಕು ಚೆಲ್ಲಬಹುದು. ಆದರೆ ನಿಜವಾದ ಬೆಳಕು ಚೆಲ್ಲುವ ಮಿಂಚು ಇದಕ್ಕೆ ಅತೀತವಾಗಿದೆ. ನಿಜವಾದ ಸುಖ ಯಾವುದೆಂಬುದು ಮನುಷ್ಯನಿಗೆ ತಿಳಿದಿಲ್ಲವಾದ ಕಾರಣ ಅವನು ನೈಜ ಸುಖವನ್ನು ಬಿಟ್ಟು ಆಚೀಚೆ ಸರಿಯುತ್ತಾನೆ.

## ಕೃಷ್ಣಪ್ರಜ್ಞೆಯ ಪ್ರಕ್ರಿಯೆ

ವ್ಯಕ್ತಿಯು ತನ್ನನ್ನು ತಾನು ನೈಜ ಸುಖದಲ್ಲಿ ಸ್ಥಿತಗೊಳಿಸಿಕೊಳ್ಳುವ ಪ್ರಕ್ರಿಯೆಯೇ ಕೃಷ್ಣಪ್ರಜ್ಞೆ ಪ್ರಕ್ರಿಯೆ. ಕೃಷ್ಣಪ್ರಜ್ಞೆಯ ಮೂಲಕ ನಾವು ಕ್ರಮೇಣ ನಮ್ಮ ನಿಜವಾದ

ಬುದ್ಧಿಯನ್ನು ಬೆಳೆಸಿಕೊಂಡು ತನ್ಮೂಲಕ ಆಧ್ಯಾತ್ಮಿಕತೆಯ ಹಾದಿಯಲ್ಲಿ ಮುನ್ನಡೆಯುವಾಗ ಸ್ವಾಭಾವಿಕವಾದ ಆಧ್ಯಾತ್ಮಿಕ ಸುಖವನ್ನು ಸವಿಯಬಹುದು. ಆಧ್ಯಾತ್ಮಿಕ ಸುಖವನ್ನು ನಾವು ಸವಿಯುತ್ತಾ ಹೋದಂತೆಲ್ಲ ಆ ಪ್ರಮಾಣದ ಲೌಕಿಕ ಸುಖವನ್ನು ತ್ಯಜಿಸುತ್ತಾ ಹೋಗುತ್ತೇವೆ. ಪರಮ ಸತ್ಯವನ್ನು ತಿಳಿಯುವತ್ತ ನಾವು ಮುಂದುವರಿದಂತೆಲ್ಲ, ಸಹಜವಾಗಿಯೇ ನಾವು ಹುಸಿ ಸುಖದಿಂದ ಬಿಡುಗಡೆ ಹೊಂದುತ್ತೇವೆ. ಹೇಗೋ ಅಂತೂ ವ್ಯಕ್ತಿಯು ಕೃಷ್ಣಪ್ರಜ್ಞಾವಂತನಾಗುವ ಹಂತಕ್ಕೆ ತನ್ನನ್ನು ಎತ್ತರಿಸಿಕೊಂಡರೆ ಅದರ ಪರಿಣಾಮ ಹೇಗಿರುತ್ತದೆ?

**ಯಂ ಲಬ್ಧ್ವಾ ಚಾಪರಂ ಲಾಭಂ ಮನ್ಯತೇ ನಾಧಿಕಂ ತತಃ ।**
**ಯಸ್ಮಿನ್ ಸ್ಥಿತೋ ನ ದುಃಖೇನ ಗುರುಣಾಪಿವಿಚಾಲ್ಯತೇ ॥**

"ಇದನ್ನು ಸಾಧಿಸಿದ ಬಳಿಕ ಇದಕ್ಕಿಂತ ಹೆಚ್ಚಿನ ಸಾಧನೆ ಯಾವುದೂ ಇಲ್ಲವೆಂದು ವ್ಯಕ್ತಿಯು ಆಲೋಚಿಸುತ್ತಾನೆ. ಕೃಷ್ಣಪ್ರಜ್ಞೆಯ ಸ್ಥಾನದಲ್ಲಿ ಸ್ಥಿರನಾದಾಗ ವ್ಯಕ್ತಿಯು ಎಂತಹ ಆಪತ್ತಿನ ನಡುವೆಯೂ ವಿಚಲಿತನಾಗುವುದಿಲ್ಲ." (ಗೀತಾ 6.22)

## ಭವ ಸಾಗರದಿಂದಾಚೆ

ವ್ಯಕ್ತಿಯು ಈ ಘಟ್ಟವನ್ನು ತಲಪಿದಾಗ ಅವನ ಬೇರೆಲ್ಲ ಸಾಧನೆಗಳೂ ಕ್ಷುಲ್ಲಕವಾಗಿ ಕಾಣುತ್ತವೆ. ಈ ಮೂಲಕ ಪ್ರಪಂಚದಲ್ಲಿ ನಾವು ಸಂಪತ್ತು, ಹೆಣ್ಣು, ಕೀರ್ತಿ, ಸೌಂದರ್ಯ, ಜ್ಞಾನ – ಹೀಗೆ ಏನೆಲ್ಲವನ್ನೂ ಗಳಿಸಲು ಪ್ರಯತ್ನಿಸುತ್ತಿದ್ದೇವೆ. ಆದರೆ ನಾವು ಕೃಷ್ಣಪ್ರಜ್ಞೆಯಲ್ಲಿ ಸ್ಥಿತರಾದೊಡನೆ, "ಇದಕ್ಕಿಂತ ದೊಡ್ಡ ಸಾಧನೆ ಇನ್ನೊಂದಿಲ್ಲ" ಎಂದು ನಮಗನ್ನಿಸುತ್ತದೆ. ಕೃಷ್ಣಪ್ರಜ್ಞೆಯು ಎಷ್ಟು ಪ್ರಬಲವಾದದ್ದೆಂದರೆ ಅದನ್ನು ಒಂದು ರವೆಯಷ್ಟು ಸವಿದರೂ ಸಾಕು, ಅದು ವ್ಯಕ್ತಿಯನ್ನು ಭಾರಿ ಭಾರಿ ಅಪಾಯಗಳಿಂದ ರಕ್ಷಿಸಬಲ್ಲದು. ವ್ಯಕ್ತಿಯು ಕೃಷ್ಣಪ್ರಜ್ಞೆಯ ರುಚಿಯನ್ನು ಸವಿಯಲು ಪ್ರಾರಂಭಿಸಿದೊಡನೆ ಉಳಿದ ಸಂತೋಷಗಳು ಹಾಗೂ ಸಾಧನೆಗಳು ನೀರಸವಾಗಿಯೂ, ಬರಡಾಗಿಯೂ ಇರುವಂತೆ ತೋರಲು ಪ್ರಾರಂಭವಾಗುತ್ತದೆ. ಮತ್ತು ವ್ಯಕ್ತಿಯು ಕೃಷ್ಣಪ್ರಜ್ಞೆಯಲ್ಲಿ ಭದ್ರವಾಗಿ ಸ್ಥಿತನಾದಾಗ ಎಂತಹ ದೊಡ್ಡ ಅಪಾಯವೂ ಅವನನ್ನು ಬಾಧಿಸಲಾರದು. ಬದುಕಿನಲ್ಲಿ ಸಂಭವಿಸಬಹುದಾದ ಅಪಾಯಗಳು ಹಲವಾರು. ಏಕೆಂದರೆ ಈ ಐಹಿಕ ಜಗತ್ತೇ ಅಪಾಯದ ಸ್ಥಳ. ಇಂತಹ ಅಪಾಯಗಳಿಗೆ ಕುರುಡಾಗುವ ಪ್ರವೃತ್ತಿ ನಮ್ಮದಾಗಿದೆ ಮತ್ತು ನಾವು ಅವಿವೇಕಿಗಳಾದ್ದರಿಂದ ಈ ಅಪಾಯಗಳಿಗೆ ಹೊಂದಿಕೊಳ್ಳಲು ಪ್ರಯತ್ನಿಸುತ್ತೇವೆ. ನಮ್ಮ ಬದುಕಿನಲ್ಲಿ ನಮಗೆ ಅನೇಕ ಅಪಾಯದ ಕ್ಷಣಗಳು ಒದಗಿ ಬರಬಹುದು. ಆದರೆ ನಾವು ನಮ್ಮನ್ನು ಕೃಷ್ಣಪ್ರಜ್ಞೆಯ ಪ್ರಕ್ರಿಯೆಗಳಲ್ಲಿ ತರಬೇತು ಮಾಡಿಕೊಂಡು ಭಗವದ್ಧಾಮಕ್ಕೆ ಮರಳಲು ಸಿದ್ಧ ಮಾಡಿಕೊಂಡರೆ ಅಪಾಯಗಳನ್ನು ನಾವು ಲಕ್ಷಿಸಬೇಕಾದ್ದಿಲ್ಲ. "ಅಪಾಯಗಳು ಬರುತ್ತವೆ, ಹೋಗುತ್ತವೆ. ಬಂದು ಹೋಗಲಿ. ನಮಗೇನಾಗಬೇಕು" ಎನ್ನುವುದು ನಮ್ಮ ಧೋರಣೆಯಾಗುತ್ತದೆ. ನಾಶ ಹೊಂದತಕ್ಕ ಧಾತುಗಳಿಂದ ಮಾಡಲಾಗಿರುವ ಸ್ಥೂಲ ದೇಹದ ಜೊತೆ ನಮ್ಮನ್ನು ನಾವು ಗುರುತಿಸಿಕೊಂಡು ಹಾಗೂ ಐಹಿಕ ನೆಲೆಯಲ್ಲಿ ನಿಂತಿರುವ ತನಕ ಅಪಾಯಗಳನ್ನು ಲಕ್ಷಿಸದ ಈ ಮನೋಧರ್ಮವನ್ನು ಹೊಂದುವುದು ದುಸ್ತರ. ಆದರೆ ವ್ಯಕ್ತಿಯು ಕೃಷ್ಣಪ್ರಜ್ಞೆಯಲ್ಲಿ ಮುಂದು ಮುಂದಕ್ಕೆ ಹೋದಂತೆಲ್ಲಾ ಅವನು ದೇಹ ಸಂಬಂಧಿ ಉಪಾಗಳಿಂದ ಹೆಚ್ಚು ಹೆಚ್ಚು ಮುಕ್ತನಾಗುತ್ತಾನಲ್ಲದೆ, ಐಹಿಕ ಬಂಧನದಿಂದಲೂ ಬಿಡುಗಡೆ ಪಡೆಯುತ್ತಾನೆ.

ಶ್ರೀಮದ್ಭಾಗವತದಲ್ಲಿ ಐಹಿಕ ಜಗತ್ತನ್ನು ಸಾಗರಕ್ಕೆ ಹೋಲಿಸಲಾಗಿದೆ. ಈ ಐಹಿಕ ಬ್ರಹ್ಮಾಂಡದಲ್ಲಿ ಲಕ್ಷಗಟ್ಟಲೆ ಮಿಲಿಯಗಟ್ಟಲೆ ಗ್ರಹಲೋಕಗಳು ಆಕಾಶದಲ್ಲಿ ತೇಲಾಡುತ್ತಿವೆ. ಅಲ್ಲಿ ಎಷ್ಟು ಅಟ್ಲಾಂಟಿಕ್, ಪೆಸಿಫಿಕ್ ಮಹಾಸಾಗರಗಳು ಇರಬಹುದೆಂಬುದನ್ನು ನಾವು ಊಹಿಸಿಕೊಳ್ಳಬಹುದು. ವಾಸ್ತವವಾಗಿ ಇಡೀ ಬ್ರಹ್ಮಾಂಡವನ್ನು ದುಃಖದಿಂದ ತುಂಬಿದ, ಹುಟ್ಟು ಸಾವುಗಳಿಂದ ತುಂಬಿದ ಮಹಾಸಾಗರಕ್ಕೆ ಹೋಲಿಸಲಾಗಿದೆ. ಅಜ್ಞಾನವೆಂಬ ಈ ಮಹಾ ಶರಧಿಯನ್ನು ದಾಟಲು ಒಂದು ಶಕ್ತಿಯುತವಾದ ನಾವೆಯ ಅಗತ್ಯವಿದೆ. ಕೃಷ್ಣನ ಪಾದಾಂಬುಜಗಳೇ ಆ ನಾವೆ. ನಾವು ಈ ಕೂಡಲೇ ಆ ನಾವೆಯನ್ನೇರಬೇಕು. ಕೃಷ್ಣನ ಪಾದಕಮಲಗಳು ಬಹು ಚಿಕ್ಕವೆಂದು ಬಗೆದು ಅವನ ಪಾದಾಂಬುಜಗಳ ಆಶ್ರಯ ಪಡೆಯಲು ನಾವು ಹಿಂಜರಿಯಬಾರದು. ಕೃಷ್ಣನ ಪಾದಗಳ ಆಶ್ರಯ ಪಡೆದವನಿಗೆ ಈ ಐಹಿಕ ಬ್ರಹ್ಮಾಂಡವು ಕರುವಿನ ಹೆಜ್ಜೆ ಗುರುತಿನ ಹಳ್ಳದಲ್ಲಿ ನಿಂತ ನೀರಿಗಿಂತ ಹೆಚ್ಚಿನದಲ್ಲವೆಂದು ಹೇಳಲಾಗಿದೆ. ಕರುವಿನ ಹೆಜ್ಜೆ ಗುರುತಿನ ಸ್ಥಳದಲ್ಲಿ ನಿಂತ ನೀರನ್ನು ದಾಟಿ ಮುನ್ನಡೆಯುವುದು ಖಂಡಿತ ಕಷ್ಟವಲ್ಲ.

**ತಮ್ ವಿದ್ಯಾದ್ ದುಃಖ ಸಂಯೋಗ ।**
**ವಿಯೋಗಂ ಯೋಗ-ಸಂಜ್ಞಿತಮ್ ॥**

ಇದೀಗ ನಿಜವಾಗಿಯೂ ಐಹಿಕ ಸ್ಪರ್ಶದಿಂದ ಉಂಟಾದ ಎಲ್ಲ ಐಹಿಕ ಯಾತನೆಗಳಿಂದ ಮುಕ್ತಿ (ಗೀತಾ 6.23)

## ಯೋಗ ಇಂದ್ರಿಯ ಸಂಯಮ

ನಿಯಂತ್ರಣವಿಲ್ಲದ ಇಂದ್ರಿಯಗಳ ದೆಸೆಯಿಂದ ನಾವು ಈ ಜಗತ್ತಿಗೆ ಕಟ್ಟುಬಿದ್ದಿದ್ದೇವೆ. ಇಂದ್ರಿಯಗಳನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳುವ ಸಲುವಾಗಿ ಯೋಗ ಪ್ರಕ್ರಿಯೆಯಿದೆ. ಹೇಗೋ ಅಂತೂ ವ್ಯಕ್ತಿಯು ಇಂದ್ರಿಯಗಳನ್ನು ನಿಗ್ರಹಿಸಿಕೊಳ್ಳಲು ಸಮರ್ಥನಾದರೆ ನಾವು ನೈಜ ಸುಖದತ್ತ ಮುಖ ಮಾಡಬಹುದು ಮತ್ತು ಆ ಮೂಲಕ ನಮ್ಮ ಬದುಕನ್ನು ಯಶಸ್ವಿಗೊಳಿಸಿಕೊಳ್ಳಬಹುದು.

**ಸ ನಿಶ್ಚಯೇನ ಯೋಕ್ತವ್ಯೋ ಯೋಗೋಽನಿರ್ವಿಣ್ಣ ಚೇತಸಾ**
**ಸಂಕಲ್ಪ ಪ್ರಭವಾನ್ ಕಾಮಾಮ್ಸ್ ತ್ಯಕ್ತ್ವಾ ಸರ್ವಾನ್ ಅಶೇಷತಃ**
**ಮನಸೈವೇಂದ್ರಿಯ ಗ್ರಾಮಮ್ ವಿನಿಯಮ್ಯ ಸಮಂತತಃ**
**ಶನೈಃ ಶನೈರ್ ಉಪರಮೇದ್ ಬುದ್ಧ್ಯಾ ಧೃತಿ-ಗೃಹೀತಯಾ**
**ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಂಚಿದ್ ಅಪಿ ಚಿಂತಯೇತ್**



ಆದರೆ ಈ ಕಷ್ಟಗಳೆಲ್ಲವನ್ನೂ ಪರಿಹರಿಸಿಕೊಳ್ಳಬಹುದು.

ಮನಸ್ಸು ಕೃಷ್ಣನಲ್ಲಿ ನೆಲೆಗೊಳ್ಳದೆ ಕ್ಷೋಭಿತವಾಗಿರುವುದರ ಕಾರಣ ಅದು ಒಂದು ವಿಷಯವನ್ನು ಬಿಟ್ಟು ಇನ್ನೊಂದನ್ನು ಚಿಂತಿಸುತ್ತದೆ. ಉದಾಹರಣೆಗೆ ನಾವು ಕೆಲಸದಲ್ಲಿ ಮಗ್ನರಾಗಿರುವಾಗ, ಹತ್ತು, ಇಪ್ಪತ್ತು, ಮೂವತ್ತು ಅಥವಾ ನಲವತ್ತು ವರ್ಷಗಳ ಹಿಂದೆ ನಡೆದ ಘಟನೆಗಳು ನೆನಪಿಗೆ ಬರುತ್ತವೆ. ಎದ್ದು ಕಾಣುವ ಕಾರಣಗಳೇನೂ ಇಲ್ಲದಿದ್ದರೂ ಹೀಗಾಗುತ್ತದೆ. ಈ ಮರುಕಳಿಕೆಗಳು ನಮ್ಮ ಸುಪ್ತ ಪ್ರಜ್ಞೆಯಿಂದ ಹೊಮ್ಮುತ್ತವೆ ಮತ್ತು ಇಂತಹ ನೆನಪುಗಳು ನಮ್ಮ ಪ್ರಜ್ಞೆಯಿಂದ ಸದಾ ಪುಟಿಯುತ್ತಿರುತ್ತವಾದ್ದರಿಂದ ಮನಸ್ಸು ಸದಾ ಕ್ಷೋಭಿತವಾಗಿರುತ್ತದೆ. ನಾವು ಒಂದು ಸರೋವರವನ್ನೋ ಕೊಳವನ್ನೋ ಕಲಕಿದರೆ ಅವುಗಳ ತಳದಲ್ಲಿನ ಬಗ್ಗಡವು ಮೇಲಕ್ಕೆ ಬರುತ್ತದೆ. ಇದೇ ರೀತಿ ಮನಸ್ಸು ಉದ್ರಿಕ್ತವಾದಾಗ ಅಲ್ಲಿ ಬಹು ಕಾಲದಿಂದ ಸಂಚಯಿತವಾಗಿದ್ದ ಆಲೋಚನೆಗಳು ಮೇಲೆದ್ದು ಬರುತ್ತವೆ. ನಾವು ಕೊಳವನ್ನು ಕಲಕದೆ ಇದ್ದುಬಿಟ್ಟರೆ ಬಗ್ಗಡವು ತಳಕ್ಕೆ ಹೋಗುತ್ತದೆ. ಯೋಗವೆಂಬ ಪ್ರಕ್ರಿಯೆಯು ಮನಸ್ಸನ್ನು ಶಾಂತಗೊಳಿಸಿ ಎಲ್ಲ ಆಲೋಚನೆಗಳೂ ತಳ ಸೇರುವಂತೆ ಮಾಡುವ ಹಾದಿಯಾಗಿದೆ. ಈ ನಿಟ್ಟಿನಲ್ಲಿ ಮನಸ್ಸನ್ನು ಶಾಂತಗೊಳಿಸಲು ಪಾಲಿಸಬೇಕಾದ ನೀತಿ ನಿಯಮಗಳು ಹಲವಾರಿವೆ. ಆ ಎಲ್ಲ ನೀತಿ ನಿಯಮಗಳನ್ನೂ ನಾವು ಪಾಲಿಸಿದ್ದಾದರೆ ಮನಸ್ಸು ಕ್ರಮೇಣ ಹದ್ದಿಗೆ ಬರುತ್ತದೆ. 'ಹೀಗೆ ಮಾಡತಕ್ಕದ್ದು' 'ಹೀಗೆ ಮಾಡತಕ್ಕದ್ದಲ್ಲ' ಎಂದು ವಿಧಿಸುವ ಅನೇಕ ನಿಯಮ ನಿಷೇಧಗಳು ಯೋಗ ಪ್ರಕ್ರಿಯೆಗೆ ಅನ್ವಯವಾಗುತ್ತದೆ. ಮನಸ್ಸಿಗೆ ಶಿಕ್ಷಣ ಕೊಡುವಲ್ಲಿ ವ್ಯಕ್ತಿಗೆ ಗಂಭೀರ ಆಸಕ್ತಿ ಇದ್ದುದೇ ಆದರೆ ಅವನು ನಿಯಮ ನಿಷೇಧಗಳೆಲ್ಲವನ್ನೂ ಪಾಲಿಸಬೇಕು. ಅವನು ಹುಚ್ಚಾಪಟ್ಟೆ ವರ್ತಿಸಿದರೆ ಮನಸ್ಸು ಹದಕ್ಕೆ ಬರುವ ಸಂಭವವೆಷ್ಟಿದ್ದೀತು? ಕೃಷ್ಣನೊಬ್ಬನನ್ನಲ್ಲದೆ ಬೇರೊಂದನ್ನು ಕುರಿತು ಚಿಂತಿಸದ ಮಟ್ಟದ ತನಕ ಮನಸ್ಸಿಗೆ ಪೂರ್ವ ಶಿಕ್ಷಣ ಕೊಟ್ಟರೆ ಅದು ಶಾಂತಿಯನ್ನು ಗಳಿಸುತ್ತದೆ ಮತ್ತು ಸಮಸ್ಥಿತಿಯಲ್ಲಿರುತ್ತದೆ.

**ಯತೋ ಯತೋ ನಿಶ್ಚಲತಿ ಮನಸ್ ಚಂಚಲಂ ಅಸ್ಥಿರಮ್**
**ತತಸ್ ತತೋ ನಿಯಮ್ಯೈತದ್ ಆತ್ಮನ್ ಯೇವ ವಶಂ ನಯೇತ್**

"ಅಚಲ ಶ್ರದ್ಧಾ ವಿಶ್ವಾಸಗಳಿಂದ ಯೋಗಾಭ್ಯಾಸದಲ್ಲಿ ಮಗ್ನನಾಗಬೇಕು. ಮಿಥ್ಯಾಹಂಕಾರದಿಂದ ಜನಿಸಿದ ಎಲ್ಲ ಐಹಿಕ ಅಪೇಕ್ಷೆಗಳನ್ನೂ ಬುದ್ಧಿಪೂರ್ವಕವಾಗಿ ತೊರೆಯಬೇಕು." ಬಳಿಕ ಅವನು ಕ್ರಮಾಗತವಾಗಿ ಬುದ್ಧಿಯ ಸಹಾಯದಿಂದ ಮನಸ್ಸನ್ನು ಸಮಾಧಿ ಸ್ಥಾನದಲ್ಲಿ ಸ್ಥಾಪಿಸಬೇಕು. ಹೀಗೆ ಮನಸ್ಸು ಆತ್ಮವೊಂದನ್ನು ಕುರಿತು ಚಿಂತಿಸುವ ನೆಲೆಗೆ ಬಂದು ನಿಲ್ಲಬೇಕು. ಬೇರೊಂದರ ಗೊಡವೆ ಇರಬಾರದು. ಮನಸ್ಸು ತನ್ನ ಹೊಯ್ದಾಡುವ ಹಾಗೂ ಅಸ್ಥಿರ ಸ್ವಭಾವದ ಕಾರಣ ಎಲ್ಲೆಲ್ಲೋ ಅಲೆಯ ಹೋಗುತ್ತದೆ. ಅಂತಹ ಹೊತ್ತು ಮನಸ್ಸನ್ನು ಹಿಂದಕ್ಕೆ ಕರೆತಂದು ಆತ್ಮದಲ್ಲಿ ನೆಲೆಗೊಳಿಸಬೇಕು" (ಗೀತಾ 6.24-26)

## ಮನಸ್ಸಿನ ನಿಯಂತ್ರಣ

ಮನಸ್ಸು ಸದಾ ಕ್ಷೋಭಿತವಾಗಿರುತ್ತದೆ. ಕೆಲ ಸಲ ಅಲ್ಲಿ ಕೆಲ ಸಲ ಇಲ್ಲಿ ಅಲೆದಾಡುತ್ತಿರುತ್ತದೆ. ಯೋಗಾಭ್ಯಾಸದಿಂದ ನಾವು ವಸ್ತುಶಃ ಮನಸ್ಸನ್ನು ಕೃಷ್ಣಪ್ರಜ್ಞೆಯೆಡೆಗೆ ಎಳೆದು ತರುತ್ತೇವೆ. ಕೃಷ್ಣಪ್ರಜ್ಞೆಯನ್ನು ಬಿಟ್ಟು ಅದು ಬಾಹ್ಯ ವಸ್ತುಗಳತ್ತ ಅಲೆಯಲು ಹೋಗುತ್ತದೆ. ಏಕೆಂದರೆ ಅನಾದಿ ಕಾಲದಿಂದಲೂ, ಯುಗ-ಯುಗಗಳಲ್ಲೂ ಇದು ನಮಗೆ ರೂಢಿಯಾಗಿ ಹೋಗಿದೆ. ಈ ಕಾರಣಕ್ಕಾಗಿ ಪ್ರಾರಂಭದಲ್ಲಿ ಕೃಷ್ಣ ಪ್ರಜ್ಞೆಯಲ್ಲಿ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸುವಲ್ಲಿ ನಮಗೆ ತುಂಬ ಕಷ್ಟ ಕಾಣಬಹುದು.

**ಪ್ರಶಾಂತ-ಮನಸಂ ಹ್ಯೇನಂ ಯೋಗಿನಂ ಸುಖಂ ಉತ್ತಮಮ್**
**ಉಪೈತಿ ಶಾಂತರಜಸಂ ಬ್ರಹ್ಮಭೂತಮ್ ಅಕಲ್ಮಷಮ್**

"ಯಾವ ಯೋಗಿಯು ನನ್ನಲ್ಲಿ ಮನಸ್ಸನ್ನು ನೆಲೆಗೊಳಿಸುತ್ತಾನೋ ಅಂತಹವನು ಅತ್ಯುನ್ನತ ಮಟ್ಟದ



ಸುಖವನ್ನು ಗಳಿಸುತ್ತಾನೆ. ಅವನು ತನ್ನ ಮನಸ್ಸನ್ನು ಬ್ರಹ್ಮನ್‌ನೊಂದಿಗೆ ಸಮೀಕರಿಸಿಕೊಂಡದ್ದರ ಫಲವಾಗಿ ಅವನು ಮುಕ್ತ, ಶಾಂತ ಮನಸ್ಕ. ಅವನ ರಜೋಗುಣಗಳು ತಣ್ಣಗಾಗುತ್ತವೆ ಮತ್ತು ಅವನು ಪಾಪ ಮುಕ್ತನಾಗುತ್ತಾನೆ.
(ಗೀತಾ 6.27).

ಸುಖದ ಸಲುವಾಗಿ ಬೇಕಾಗುವ ವಸ್ತುಗಳನ್ನು ಮನಸ್ಸು ಸದಾ ಕಲ್ಪಿಸಿಕೊಳ್ಳುತ್ತಿರುತ್ತದೆ. "ನನಗೆ ಅದು ಸುಖವಾಗಿರುತ್ತದೆ", "ಹೀಗೆ ಮಾಡಿದರೆ ನಾನು ಸುಖ ಕಾಣುತ್ತೇನೆ. ಸುಖ ಅಲ್ಲಿದೆ" ಎಂದು ನಾವು ಚಿಂತಿಸುತ್ತಿರುತ್ತೇವೆ. ಹೀಗೆ ಮನಸ್ಸು ನಮ್ಮನ್ನು ಎಲ್ಲೆಲ್ಲಿಗೋ ಕರೆದೊಯ್ಯುತ್ತಿರುತ್ತದೆ. ಇದು ನಾವು ಲಗಾಮಿಲ್ಲದ ಕುದುರೆಯ ಗಾಡಿಯಲ್ಲಿ ಕುಳಿತು ಪ್ರಯಾಣ ಮಾಡಿದಂತೆಯೇ. ನಾವು ಎಲ್ಲಿಗೆ ಹೋಗುತ್ತಿದ್ದೇವೆ ಎಂದು ತಿಳಿಯುವ ಶಕ್ತಿಯೇ ಇಲ್ಲದೆ ಭಯದಿಂದ, ಅಸಹಾಯಕರಾಗಿ ಕುಳಿತಿರಬೇಕಾಗುತ್ತದೆ. ಆದರೆ ಯಾವಾಗ ನಮ್ಮ ಮನಸ್ಸು ಕೃಷ್ಣಪ್ರಜ್ಞೆಯ ಬಗೆಗೆ, ಅದರಲ್ಲೂ ಮುಖ್ಯವಾಗಿ **ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ** ಎಂಬ ಮಂತ್ರವನ್ನು ಜಪಿಸುವಲ್ಲಿ ತೊಡಗುತ್ತದೋ, ಆಗ ಮನಸ್ಸೆಂಬ ಲಂಗು ಲಗಾಮಿಲ್ಲದ ಕುದುರೆಯು ನಮ್ಮ ಹತೋಟಿಗೆ ಬರುತ್ತದೆ. ನಶ್ವರವಾದ ಈ ಭೌತಿಕ ಜಗತ್ತಿನಲ್ಲಿ ಸುಖಕ್ಕಾಗಿ ನಾವು ವಿಫಲಯತ್ನ ನಡೆಸುತ್ತಿರುವಾಗ ಅಶಾಂತ ಮತ್ತು ಕ್ಷೋಭಿತ ಮನಸ್ಸು ನಮ್ಮನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಎಳೆದೊಯ್ಯುವುದನ್ನು ತಪ್ಪಿಸಲು, ನಮ್ಮ ಜೀವನದ ಪ್ರತಿ ಕ್ಷಣವನ್ನು ನಾವು ಕೃಷ್ಣನ ಸೇವೆಗೆ ಮುಡಿಪಾಗಿಡಬೇಕು.

**ಯುಂಜನ್ ಏವಂ ಸದಾತ್ಮಾನಂ ಯೋಗಿ ವಿಗತ ಕಲ್ಮಷಃ |**
**ಸುಖೇನ ಬ್ರಹ್ಮ ಸಂಸ್ಪರ್ಶಂ ಅತ್ಯಂತಂ ಸುಖಂ ಅಶ್ನುತೇ ||**

ಪರಮ ಪ್ರಜ್ಞೆಯೊಡನೆ ಸಂಪರ್ಕ ಪಡೆದು, ಪರಮಾತ್ಮನಿಗೆ ನಿಷ್ಠನಾಗಿ ಭೌತಿಕವಾದ ಎಲ್ಲ ಕಲ್ಮಷಗಳಿಂದ ದೂರಾದ ಯೋಗಿಯು ಸುಖದ ಉತ್ಕೃಷ್ಟ ಘಟ್ಟವನ್ನು ತಲಪುತ್ತಾನೆ. (ಗೀತಾ 6.28)

ಕೃಷ್ಣನ ಬಗ್ಗೆ ಯಾರು ಭಕ್ತಿ ತೋರುತ್ತಾರೋ ಅವರನ್ನು ಕೃಷ್ಣನು ಪೋಷಿಸುತ್ತಾನೆ. ಯಾರಾದರೂ ಸಂಕಷ್ಟದಲ್ಲಿದ್ದಾಗ ಕೃಷ್ಣನು ಅವರನ್ನು ರಕ್ಷಿಸುತ್ತಾನೆ. ಭಗವದ್ಗೀತೆಯಲ್ಲಿ ಹೇಳಿರುವಂತೆ, ಅಸ್ತಿತ್ವವುಳ್ಳ ಪ್ರತಿ ಜೀವಿಗೂ ಕೃಷ್ಣನು ನಿಜವಾದ ಗೆಳೆಯ ಹಾಗೂ ನಾವು ಈ ಗೆಳೆತನವನ್ನು ಪುನರುಜ್ಜೀವಗೊಳಿಸಿಕೊಳ್ಳಬೇಕು. ಈ ಗೆಳೆತನದ ಪುನರುಜ್ಜೀವಕ್ಕೆ ದಾರಿಯೆಂದರೆ ಕೃಷ್ಣಪ್ರಜ್ಞಾ ಪ್ರಕ್ರಿಯೆಯಲ್ಲಿ ತೊಡಗುವುದು. ಕೃಷ್ಣಪ್ರಜ್ಞೆಯನ್ನು ಅಭ್ಯಸಿಸುವುದರಿಂದ, ಈ ಜಗತ್ತಿನ ಸಂಯಮರಹಿತ ಸಾಂಸಾರಿಕ ಬಯಕೆಗಳು ಇಲ್ಲವಾಗುತ್ತವೆ. ಈ ಸಂಯಮವಿಲ್ಲದ ಬಯಕೆಗಳು ನಮ್ಮನ್ನು ಕೃಷ್ಣನಿಂದ ದೂರವಿಡುತ್ತವೆ. ಕೃಷ್ಣನು ನಮ್ಮ ಒಳಗಡೆಯೇ ಇದ್ದಾನೆ ಮತ್ತು ನಾವು ಅವನತ್ತ ಹೋಗಲಿ ಎಂದು ಆತ ನಿರೀಕ್ಷಿಸುತ್ತಿದ್ದಾನೆ. ಭೌತಿಕ ಇಚ್ಛೆ ಎಂಬ ವೃಕ್ಷದ ಫಲಗಳನ್ನು ಅನುಭವಿಸುವ ಆಸೆಗಳಲ್ಲಿಯೇ ನಾವು ಅತಿಯಾಗಿ ಕಾರ್ಯನಿರತರಾಗಿದ್ದೇವೆ. ಹೀಗೆ ಸಂಯಮವಿಲ್ಲದೆ ಆ ಫಲಗಳನ್ನು ಭೋಗಿಸುವುದನ್ನು ನಿಲ್ಲಿಸಬೇಕು. ಮತ್ತು ಬ್ರಹ್ಮನ್ – ಶುದ್ಧಾತ್ಮ ಎಂದು ಗುರುತಿಸಲ್ಪಟ್ಟಿರುವ ನಾವು ಅದೇ ಸ್ಥಿತಿಯಲ್ಲಿಯೇ ಉಳಿದುಕೊಳ್ಳಬೇಕು. *

ಸುವರ್ಣಾವತಾರ



ಭಾಗ-126

# ಭಾವೋನ್ಮಾದದ ಪರಾಕಾಷ್ಠೆ

**ಆಕರ: ಶ್ರೀ ಚೈತನ್ಯ ಭಾಗವತ ಮತ್ತು ಚೈತನ್ಯ ಚರಿತಾಮೃತ**

ಇಲ್ಲಿಯವರೆಗೆ...

*ಚೈತನ್ಯ ಮಹಾಪ್ರಭು ತಮ್ಮ ಅಂತರಂಗದ ಭಕ್ತರೊಂದಿಗೆ ಏಕಾಂತ ಸ್ಥಳದಲ್ಲಿ ಕುಳಿತು ಸಂಭ್ರಮದಿಂದ ಕೃಷ್ಣನನ್ನು ಕುರಿತು ಮಾತನಾಡುತ್ತಿದ್ದರು. ಅಲ್ಲಿಗೆ ಬಂದ ಪ್ರಸಾದದ ಸವಿಯನ್ನು ಮತ್ತು ಸುವಾಸನೆಯನ್ನು ಎಲ್ಲರೂ ಅನುಭವಿಸುತ್ತಿದ್ದರು. ಆಗ ಮಹಾಪ್ರಭುಗಳು ಪ್ರಸಾದವನ್ನು ಕುರಿತಂತೆ ಮತ್ತು ಕೃಷ್ಣನ ಅಧರಾಮೃತವು ಅದರಲ್ಲಿ ಹೇಗೆ ಮಿಶ್ರಣವಾಗಿದೆ ಎನ್ನುವುದನ್ನು ವಿವರಿಸಿದರು. ಆಗ ಅವರು ಶ್ರೀಮತಿ ರಾಧಾರಾಣಿ ಪಠಿಸಿದ್ದ ಶ್ಲೋಕಗಳನ್ನು ವಿವರಿಸಿದರು. ಶ್ರೀ ಚೈತನ್ಯರೆಂದರು, ಕೃಷ್ಣನ ಈ ಅಧರಾಮೃತವನ್ನು ಪಡೆಯುವುದು ಕಷ್ಟ. ಆದರೆ ಯಾರಾದರೊಬ್ಬರು ಅದನ್ನು ಪಡೆದುಕೊಂಡರೆ ಅವರ ಜೀವನ ಸಫಲವಾಗುತ್ತದೆ. ...ಮುಂದೆ ಓದಿ*

ದೈವೋನ್ಮಾದ ಪ್ರೇಮದ ಮತ್ತಿನಲ್ಲಿ, ಶ್ರೀ ಚೈತನ್ಯ ಮಹಾಪ್ರಭು ಅವರು, ಹಗಲು ಮತ್ತು ರಾತ್ರಿ, ಒಬ್ಬ ಉನ್ಮತ್ತನಂತೆ ನಡೆದುಕೊಳ್ಳುತ್ತಿದ್ದರು ಮತ್ತು ಮಾತನಾಡುತ್ತಿದ್ದರು.

ಸ್ವರೂಪ ದಾಮೋದರ ಗೋಸ್ವಾಮಿ ಮತ್ತು ರಾಮಾನಂದ ರಾಯ ಅವರ ಜೊತೆಯಲ್ಲಿ, ಒಂದು ದಿವಸ ಶ್ರೀ ಚೈತನ್ಯ ಮಹಾಪ್ರಭು ಅವರು ಇಡೀ ಅರ್ಧ ರಾತ್ರಿಯನ್ನು ಕೃಷ್ಣ ಲೀಲೆಗಳನ್ನು ಕುರಿತು ಮಾತನಾಡುವುದರಲ್ಲಿಯೇ ಕಳೆದರು.

ಅವರೆಲ್ಲ ಕೃಷ್ಣನನ್ನು ಕುರಿತು ಮಾತನಾಡುತ್ತಿದ್ದಂತೆಯೇ ಸ್ವರೂಪ ದಾಮೋದರ ಗೋಸ್ವಾಮಿ ಅವರು, ಶ್ರೀಚೈತನ್ಯ ಮಹಾಪ್ರಭು ಅವರ ದಿವ್ಯ ಭಾವನೆಗಳನ್ನು ಸ್ಪಷ್ಟವಾಗಿ ಉದ್ದೀಪನಗೊಳಿಸುವ ಹಾಗೆ ಸರಿಯಾಗಿ ಹಾಡುತ್ತಿದ್ದರು.

ಶ್ರೀ ಚೈತನ್ಯ ಮಹಾಪ್ರಭು ಅವರ ದೈವೋನ್ಮಾದಗಳಿಗೆ ಪೂರಕವಾಗುವ ಹಾಗೆ, ರಾಮಾನಂದ ರಾಯ ಅವರು ವಿದ್ಯಾಪತಿ ಮತ್ತು ಚಂಡೀದಾಸ ಅವರ ಪುಸ್ತಕಗಳಿಂದಲೂ ಮತ್ತು ಮುಖ್ಯವಾಗಿ ಜಯದೇವ ಗೋಸ್ವಾಮಿ ಅವರ ಗೀತ ಗೋವಿಂದ ಕೃತಿಯಿಂದ ಶ್ಲೋಕಗಳನ್ನು ಹೇಳುತ್ತಿದ್ದರು.

ಮಧ್ಯೆ ಮಧ್ಯೆ ಶ್ರೀ ಚೈತನ್ಯ ಮಹಾಪ್ರಭು ಅವರು ಸಹ ಒಂದು ಶ್ಲೋಕವನ್ನು ಹೇಳುತ್ತಿದ್ದರು. ಅನಂತರ ಅತ್ಯಂತ ಕಳಕಳಿಯಿಂದ ಅದನ್ನವರು ವಿವರಿಸುತ್ತಿದ್ದರು.

ಈ ರೀತಿಯಾಗಿ ಶ್ರೀ ಚೈತನ್ಯ ಮಹಾಪ್ರಭು ಅವರು ವಿವಿಧ ಭಾವೋನ್ಮಾದಗಳನ್ನು ಅನುಭವಿಸುತ್ತ ಅರ್ಧರಾತ್ರಿಯನ್ನು ಕಳೆದರು. ಕೊನೆಗೆ, ಅವರನ್ನು ಮಂಚದ ಮೇಲೆ ಮಲಗಲು ಹೇಳಿ; ಸ್ವರೂಪ ದಾಮೋದರ ಮತ್ತು ರಾಮಾನಂದ ರಾಯ ತಮ್ಮ ಮನೆಗಳಿಗೆ ಹಿಂತಿರುಗಿದರು.

ಶ್ರೀ ಚೈತನ್ಯ ಮಹಾಪ್ರಭು ಅವರ ಅಂತರಂಗ ಸೇವಕ, ಗೋವಿಂದ, ಅವರ ಕೊಠಡಿಯ ಬಾಗಿಲಲ್ಲಿ ಮಲಗಿದ ಮತ್ತು ಶ್ರೀ ಚೈತನ್ಯರು ಎತ್ತರಿಸಿದ ದನಿಯಲ್ಲಿ ಹರೇಕೃಷ್ಣ ಮಹಾಮಂತ್ರವನ್ನು ಇಡೀ ರಾತ್ರಿ ಉಚ್ಚರಿಸುತ್ತಿದ್ದರು.

ಇದ್ದಕ್ಕಿದ್ದ ಹಾಗೆಯೇ, ಶ್ರೀ ಚೈತನ್ಯ ಮಹಾಪ್ರಭು ಅವರು ಕೃಷ್ಣನ ಕೊಳಲಿನ ಸ್ಪಂದನವನ್ನು ಕೇಳಿದರು. ಆಮೇಲೆ, ದೈವೋನ್ಮಾದದಲ್ಲಿ, ಶ್ರೀ ಕೃಷ್ಣನನ್ನು ನೋಡಲು ಹೊರಟು ಬಿಟ್ಟರು.

ಎಲ್ಲ ಮೂರು ಬಾಗಿಲುಗಳನ್ನು ಎಂದಿನಂತೆ ಭದ್ರಪಡಿಸಲಾಗಿತ್ತು, ಆದರೆ, ಶ್ರೀ ಚೈತನ್ಯ ಮಹಾಪ್ರಭು ಅವರು ಅಪಾರ ದೈವೋನ್ಮಾದ ಭಾವಾವೇಶದಲ್ಲಿ ಕೊಠಡಿಯಿಂದ ಹೊರಬಂದರು ಮತ್ತು ಮನೆಯಾಚೆಗೆ ನಡೆದರು.

ಅವರು ದಕ್ಷಿಣ ಭಾಗದ ಸಿಂಹದ್ವಾರದಲ್ಲಿದ್ದ ಗೋಶಾಲೆಗೆ ಬಂದರು. ಅಲ್ಲಿ ತೈಲಂಗಾ ಜಿಲ್ಲೆಗೆ ಸೇರಿದ ಹಸುಗಳ ನಡುವೆ ಪ್ರಜ್ಞೆ ತಪ್ಪಿ ಬಿದ್ದರು.

ಅಷ್ಟರಲ್ಲಿ, ಶ್ರೀ ಚೈತನ್ಯ ಮಹಾಪ್ರಭು ಅವರಿಂದ ಏನೂ ಸದ್ದುಗಳನ್ನು ಕೇಳದೆ, ಗೋವಿಂದ ಕೂಡಲೇ ಸ್ವರೂಪ ದಾಮೋದರ ಅವರಿಗೆ ಹೇಳಿ ಕಳುಹಿಸಿದ ಮತ್ತು ಬಾಗಿಲುಗಳನ್ನು ತೆರೆದ.

ಅನಂತರ ಸ್ವರೂಪ ದಾಮೋದರ ಗೋಸ್ವಾಮಿ ಒಂದು ದೀಪ ಹಚ್ಚಿದರು ಮತ್ತು ಎಲ್ಲ ಭಕ್ತರೊಂದಿಗೆ ಶ್ರೀ ಚೈತನ್ಯ ಮಹಾಪ್ರಭು ಅವರನ್ನು ಹುಡುಕಿಕೊಂಡು ಹೊರಟರು.

ಅಲ್ಲಿ ಇಲ್ಲಿ ಹುಡುಕಿಯಾದ ಮೇಲೆ, ಕೊನೆಗೆ ಅವರು

ಸಿಂಹದ್ವಾರದಲ್ಲಿರುವ ಗೋಶಾಲೆಯ ಬಳಿಗೆ ಬಂದರು, ಅಲ್ಲಿ ಅವರು ಹಸುಗಳ ನಡುವೆ ಶ್ರೀ ಚೈತನ್ಯ ಮಹಾಪ್ರಭು ಅವರು ಪ್ರಜ್ಞೆ ತಪ್ಪಿ ಬಿದ್ದಿರುವುದನ್ನು ನೋಡಿದರು.

ಅವರ ಕೈಗಳು ಮತ್ತು ಕಾಲುಗಳು ಅವರ ದೇಹದ ಹೊಟ್ಟೆ ಭಾಗವನ್ನು ನಿಕರವಾಗಿ ಒಂದು ಆಮೆಯ ರೀತಿಯಲ್ಲಿ, ಸೇರಿಕೊಂಡಿದ್ದವು, ಅವರ ಬಾಯಿಯಿಂದ ನೊರೆ ಚಿಮ್ಮುತ್ತಿತ್ತು, ಅವರ ಶರೀರದ ಮೇಲೆ ಗುಳ್ಳೆಗಳೆದ್ದಿದ್ದವು ಮತ್ತು ಅವರ ಕಣ್ಣುಗಳಿಂದ ಜಲಧಾರೆ ಇಳಿಯುತ್ತಿತ್ತು.

ಶ್ರೀ ಚೈತನ್ಯರು ಅಲ್ಲಿ ಪ್ರಜ್ಞೆಯಿಲ್ಲದೆ ಮಲಗಿದ್ದಾಗ, ಅವರ ದೇಹ ಒಂದು ದೊಡ್ಡ ಕುಂಬಳಕಾಯಿಯ ಹಾಗೆ ಕಂಡಿತು. ಅವರು ಸಂಪೂರ್ಣವಾಗಿ ನಿಶ್ಚಲವಾಗಿದ್ದರು, ಆದರೆ ಅಂತರ್ಯದಲ್ಲಿ ಅವರು ದಿವ್ಯಾನಂದದ ಸುಖವನ್ನನುಭವಿಸುತ್ತಿದ್ದರು.

ಶ್ರೀ ಚೈತನ್ಯರ ಸುತ್ತ ಮುತ್ತಲಿದ್ದ ಹಸುಗಳೆಲ್ಲವೂ ಅವರ ದಿವ್ಯ ದೇಹವನ್ನು ಮೂಸಿ ನೋಡುತ್ತಿದ್ದವು. ಭಕ್ತರು ಅವನ್ನು ಸರಿಸಲು ಪ್ರಯತ್ನಿಸಿದಾಗ, ಅವು ಶ್ರೀ ಚೈತನ್ಯ ಮಹಾಪ್ರಭು ಅವರ ದಿವ್ಯದೇಹದ ಸಹವಾಸವನ್ನು ಬಿಡಲು ನಿರಾಕರಿಸಿದವು.

ಭಕ್ತರೆಲ್ಲರೂ ಸೇರಿ ಶ್ರೀ ಚೈತನ್ಯರನ್ನು ಎಚ್ಚರಗೊಳಿಸಲು ನಾನಾ ಪ್ರಯತ್ನಗಳನ್ನು ಮಾಡಿದರು, ಆದರೆ ಅವರ ಪ್ರಜ್ಞೆ ಮರಳಲಿಲ್ಲ. ಆದ್ದರಿಂದ ಅವರೆಲ್ಲರೂ ಸೇರಿ ಅವರನ್ನೆತ್ತಿಕೊಂಡು, ಮನೆಗೆ ವಾಪಸ್ಸು ತಂದರು.

ಎಲ್ಲ ಭಕ್ತರೂ ಶ್ರೀ ಚೈತನ್ಯರ ಕಿವಿಯಲ್ಲಿ, ಹರೇಕೃಷ್ಣ ಮಂತ್ರವನ್ನು ಜೋರಾಗಿ ಪಠಿಸಲು ಪ್ರಾರಂಭಿಸಿದರು ಮತ್ತು ಸಾಕಷ್ಟು ಹೊತ್ತಾದ ಮೇಲೆ ಶ್ರೀ ಚೈತನ್ಯ ಮಹಾಪ್ರಭು ಅವರು ಪ್ರಜ್ಞೆಗೆ ಹಿಂತಿರುಗಿದರು.

ಅವರು ಪ್ರಜ್ಞೆ ಮರಳಿ ಪಡೆದಾಗ, ಅವರ ಕೈಕಾಲುಗಳು ಅವರ ದೇಹದೊಳಗಿನಿಂದ ಹೊರಗೆ ಬಂದವು ಮತ್ತು ಅವರ ಇಡೀ ದೇಹ ಯಥಾಸ್ಥಿತಿಗೆ ಬಂದಿತು.

ಶ್ರೀ ಚೈತನ್ಯ ಮಹಾಪ್ರಭು ಎದ್ದು ನಿಂತರು ಮತ್ತು ಅನಂತರ ಮತ್ತೆ ಕುಳಿತುಕೊಂಡು ಅತ್ತ ಇತ್ತ ನೋಡಿದರು. ಸ್ವರೂಪ ದಾಮೋದರರನ್ನು ವಿಚಾರಿಸಿದರು. “ನೀನು ನನ್ನನ್ನು ಎಲ್ಲಿಗೆ ಕರೆ ತಂದಿದ್ದೀರಿ ?

“ಕೊಳಲಿನ ನಿನಾದವನ್ನು ಕೇಳಿದ ಮೇಲೆ, ನಾನು ವೃಂದಾವನಕ್ಕೆ ಹೋದೆ ಮತ್ತು ಅಲ್ಲಿ ಮಹಾರಾಜ ನಂದನ ಮಗ ಕೃಷ್ಣ ಗೋಮಾಳದಲ್ಲಿ ಕೊಳಲು ನುಡಿಸುತ್ತಿರುವುದನ್ನು ಕಂಡೆ.

“ತನ್ನ ಕೊಳಲಿನ ನಿನಾದದ ಸಂಕೇತದಿಂದ ಅವನು ಶ್ರೀಮತಿ ರಾಧಾರಾಣಿಯನ್ನು ಲತಾ ಮಂಟಪದೊಳಗೆ ಬರುವಂತೆ ಮಾಡಿದ. ಆಮೇಲೆ ಅವನು, ಅವಳೊಂದಿಗೆ ಲೀಲೆಗಳನ್ನಾಡಲು ಆ ಲತಾ ಮಂಟಪದೊಳಗೆ ಪ್ರವೇಶಿಸಿದ.

“ನಾನು ಕೃಷ್ಣನ ಹಿಂದೆಯೇ ಲತಾ ಗೃಹದೊಳಗೆ ಪ್ರವೇಶಿಸಿದೆ, ನನ್ನ ಕಿವಿಗಳು ಅವನ ಆಭರಣಗಳ ಸದ್ದಿಗೆ ಸಮ್ಮೋಹನಗೊಂಡವು.



“ಕೃಷ್ಣ ಮತ್ತು ಗೋಪಿಯರು ನಗುತ್ತ ಮತ್ತು ಪರಸ್ಪರ ಹಾಸ್ಯ ಮಾಡುತ್ತ ಎಲ್ಲ ರೀತಿ ಲೀಲೆಗಳನ್ನಾಡುವುದನ್ನು ನಾನು ನೋಡಿದೆ. ಅವರ ಕಂಠಧ್ವನಿಯ ಉಲಿಗಳನ್ನು ಕೇಳುವುದು ನನ್ನ ಕಿವಿಗಳ ಉಲ್ಲಾಸವನ್ನು ಹೆಚ್ಚಿಸಿತು.

“ಅಷ್ಟರಲ್ಲಿ ನೀವೆಲ್ಲರೂ ಕೋಲಾಹಲ ಸದ್ದುಗಳನ್ನು ಮಾಡಿದಿರಿ ಮತ್ತು ನನ್ನನ್ನು ಬಲವಂತವಾಗಿ ಇಲ್ಲಿಗೆ ಕರೆ ತಂದಿರಿ.

“ನೀವೆಲ್ಲ ನನ್ನನ್ನು ಇಲ್ಲಿಗೆ ವಾಪಸ್ಸು ತಂದದ್ದರಿಂದ, ಕೃಷ್ಣ ಮತ್ತು ಗೋಪಿಯರ ಅಮೃತಮಯ ದನಿಗಳನ್ನು ಮತ್ತಷ್ಟು ನನ್ನಿಂದ ಕೇಳಲಾಗಲಿಲ್ಲ. ಅಷ್ಟೇ ಅಲ್ಲದೆ, ಅವರ ಆಭರಣಗಳ ಅಥವಾ ಕೊಳಲಿನ ದನಿಗಳನ್ನಾಗಲೀ ನಾನು ಕೇಳಲಾಗಲಿಲ್ಲ.”

ಅಪಾರವಾದ ದೈವೋನ್ಮಾದದಲ್ಲಿ, ಶ್ರೀ ಚೈತನ್ಯ ಮಹಾಪ್ರಭು ಅವರು ಗದ್ಗದ ದನಿಯಲ್ಲಿ ಸ್ವರೂಪ ದಾಮೋದರ ಅವರಿಗೆ ಹೇಳಿದರು, “ನನ್ನ ಕಿವಿಗಳು ತೃಷೆಯಿಂದ ಜೀವಹೋದಂತಾಗಿವೆ. ದಯವಿಟ್ಟು ನನ್ನ ಈ ತೃಷೆಯನ್ನು ತಣಿಸುವಂತಹದ್ದೇನನ್ನಾದರೂ ಹೇಳಿ, ನಾನದನ್ನು ಕೇಳುವಂತಾಗಲಿ.”

ಶ್ರೀ ಚೈತನ್ಯ ಮಹಾಪ್ರಭು ಅವರ ದೈವೋನ್ಮಾದ ಭಾವೋದ್ರೇಕಗಳನ್ನು ಅರ್ಥ ಮಾಡಿಕೊಂಡು, ಸ್ವರೂಪ ದಾಮೋದರ, ಮಧುರ ದನಿಯಲ್ಲಿ ಮುಂದೆ ಕಾಣಿಸಿರುವ ಶ್ರೀಮದ್ಭಾಗವತದ ಒಂದು ಶ್ಲೋಕವನ್ನು ಪಠಿಸಿದರು.

“(ಗೋಪಿಯರು ಹೇಳಿದರು) ‘ನಮ್ಮ ಪ್ರಿಯ ಶ್ರೀಕೃಷ್ಣ, ನಿನ್ನ ಅದ್ಭುತವಾದ ಕೊಳಲಿನಿಂದ ಹೊರ ಹೊಮ್ಮುವ ಮಧುರ ಗೀತೆಗಳ ಸ್ವರ ತರಂಗಗಳಿಗೆ ಮನ ಸೋಲದ ಒಬ್ಬ ಹೆಂಗಸು ಈ ಮೂರು ಲೋಕಗಳಲ್ಲಿದ್ದಾಳೆಯೇ? ಹೀಗಿದ್ದಾಗ ಶೀಲದ ಹಾದಿಯಿಂದ ಕೆಳಗೆ ಜಾರದವರು ಯಾರಾದರೂ ಇದ್ದಾರೆಯೇ? ನಿನ್ನ ಸೌಂದರ್ಯ ಈ ಮೂರು ಲೋಕಗಳಲ್ಲೇ ಅತ್ಯಂತ ಅಮೋಘವಾದಂಥದ್ದು. ನಿನ್ನ ಈ ಸೌಂದರ್ಯವನ್ನು ನೋಡಿದ ಮೇಲೆ ಹಸುಗಳು, ಪಕ್ಷಿಗಳು, ಮೃಗಗಳು ಮತ್ತು ಅರಣ್ಯದ ವೃಕ್ಷಗಳು ಕೂಡ ಆನಂದ ಚಕಿತವಾಗುತ್ತವೆ.’ ”

ಈ ಶ್ಲೋಕವನ್ನು ಕೇಳಿದ ಮೇಲೆ, ಗೋಪಿಯರ ದೈವೋನ್ಮಾದದಿಂದ ಭಾವ ಪರವಶರಾದ ಶ್ರೀ ಚೈತನ್ಯ ಮಹಾಪ್ರಭು ಅವರು, ಅದನ್ನು ವಿವರಿಸಲು ಪ್ರಾರಂಭಿಸಿದರು.

ಶ್ರೀ ಚೈತನ್ಯ ಮಹಾ ಪ್ರಭು ಹೇಳಿದರು, “ಗೋಪಿಯರು ದೈವೋನ್ಮಾದದಲ್ಲಿ ಆ ರಾಸಲೀಲಾ ಕಣವನ್ನು ಪ್ರವೇಶಿಸಿದರು, ಆದರೆ ಕೃಷ್ಣನ ಉಪೇಕ್ಷೆಯ ಮತ್ತು ಅಗಲುವಿಕೆಯ ಮಾತುಗಳನ್ನು ಕೇಳಿದ ಮೇಲೆ, ತಮ್ಮನ್ನೆಲ್ಲ ಅವನು ಬಿಟ್ಟು ಹೋಗುತ್ತಿದ್ದಾನೆಂದು ಅವರಿಗೆ ತಿಳಿಯಿತು, ಆಗವರು ರೋಷದಿಂದ ಅವನನ್ನು ದಂಡಿಸತೊಡಗಿದರು.

“ ‘ನನ್ನ ಪ್ರಿಯ ಪ್ರೇಮಿಯೇ’, ಅವರು ಹೇಳಿದರು, ‘ದಯವಿಟ್ಟು ಬರೀ ಒಂದು ಪ್ರಶ್ನೆಗೆ ಉತ್ತರ ಕೊಡು. ಈ ಪ್ರಪಂಚದೊಳಗೆ ನಿನ್ನ ಕೊಳಲಿನ ನಿನಾದಕ್ಕೆ ಆಕರ್ಷಿತರಾಗದಂತಹವರು ಯುವತಿಯರಲ್ಲಿ ಯಾರಾದರೂ ಇದ್ದಾರೆಯೇ?’

“ ‘ನೀನು ನಿನ್ನ ಕೊಳಲನ್ನು ಊದಿದಾಗ, ಅದು ಮಂತ್ರಗಳನ್ನು ಪಠಿಸುವ ಕಲೆಯಲ್ಲಿ ಪರಿಣತಳಾಗಿರುವ ಯೋಗಿನಿಯೊಬ್ಬಳ ರೂಪದಲ್ಲಿರುವ ದೂತಿಯ ಹಾಗೆ ಸ್ಪಂದಿಸುತ್ತದೆ. ಈ ದೂತಿ ಪ್ರಪಂಚದ ಎಲ್ಲ ಹೆಂಗಸರನ್ನು ಮೋಹದೊಳಗೆ ಸೆಳೆಯುತ್ತಾಳೆ ಮತ್ತು ಅವರನ್ನು ನಿನ್ನತ್ತ ಆಕರ್ಷಿತರಾಗಿಸುತ್ತಾಳೆ. ಅನಂತರ ಅವಳು ಅವರಲ್ಲಿರುವ ದೊಡ್ಡ ಆತಂಕವನ್ನು ಇನ್ನೂ ಹೆಚ್ಚಿಸುತ್ತಾಳೆ ಮತ್ತು ಹಿರಿಯರಿಗೆ ವಿಧೇಯತೆ ತೋರುವ ಸಾಂಪ್ರದಾಯಿಕ ನಿಯಮಗಳನ್ನು ಬಿಟ್ಟು ಬಿಡುವಂತೆ ಪ್ರೇರೇಪಿಸುತ್ತಾಳೆ. ಅಂತಿಮವಾಗಿ ಅವಳು ಪ್ರೇಮದೊಂದಿಗೆ ನಿನ್ನಲ್ಲಿ ಶರಣಾಗಲು ಬಲವಂತವಾಗಿ ಅವರನ್ನು ಕರೆತರುತ್ತಾಳೆ.’

“ ‘ನಿನ್ನ ಕೊಳಲಿನ ಸ್ಪಂದನ, ಜೊತೆಗೆ ಮೋಹದ ಬಾಣದೊಂದಿಗೆ ನಮ್ಮನ್ನು ಭೇದಿಸುವಂತಹ ನಿನ್ನ ಕಣ್ಣಿನ ನೋಟ, ಇವೆಲ್ಲ ನಮ್ಮನ್ನು ಧಾರ್ಮಿಕ ಜೀವನದ ಧರ್ಮವನ್ನು ಬದಿಗೆ ತಳ್ಳುವಂತೆ ಮಾಡುತ್ತಿವೆ. ನಾವೆಲ್ಲ ಹೀಗೆ ಮೋಹಗೊಂಡು ಉನ್ಮತ್ತರಾಗುತ್ತೇವೆ ಮತ್ತು ಎಲ್ಲ ಅವಮಾನ, ಹೆದರಿಕೆಗಳನ್ನು ಬಿಟ್ಟು ನಿನ್ನಲ್ಲಿಗೆ ಬರುತ್ತೇವೆ. ಆದರೆ, ಈಗ ನೀನು ನಮ್ಮ ಮೇಲೆಯೇ ಕೋಪಗೊಂಡಿದ್ದೀಯ. ಧರ್ಮವನ್ನು ಪಾಲಿಸುವುದಕ್ಕಾಗಿ ಮತ್ತು ನಮ್ಮ ಮನೆಗಳನ್ನು ಗಂಡಂದಿರನ್ನು ಬಿಟ್ಟು ಬಂದಿರುವುದಕ್ಕೆ ನೀನು ನಮ್ಮಲ್ಲಿ ಲೋಪವನ್ನು ಕಂಡು ಹಿಡಿಯುತ್ತಿದ್ದೀಯ ಮತ್ತು ನೀನು ನಮಗೆ ಧರ್ಮವನ್ನು ಬೋಧಿಸಲು ಪ್ರಾರಂಭಿಸಿದಾಗ, ನಾವು ಅಸಹಾಯಕರಾಗುತ್ತೇವೆ.’

“ ‘ಇವೆಲ್ಲ ಚೆನ್ನಾಗಿ ಯೋಜಿಸಿ ಮಾಡಿದ ತಂತ್ರ ಎಂದು ನಮಗೆ ಗೊತ್ತು. ಹೆಂಗಸರನ್ನು ಸರ್ವನಾಶ ಮಾಡುವಂತಹ ವಿನೋದಗಳನ್ನು ಮಾಡುವುದು ಹೇಗೆ ಎಂದು ನಿನಗೆ ಗೊತ್ತು. ಆದರೆ, ನಿನ್ನ ನಿಜವಾದ ಮನಸ್ಸು, ಮಾತುಗಳು ಮತ್ತು ನಡವಳಿಕೆ ಬೇರೆ ಬೇರೆಯೇ ಆಗಿದೆ ಎಂದು ನಮಗೆ ಅರ್ಥ ಮಾಡಿಕೊಳ್ಳಲು ಆಗುತ್ತದೆ. ಆದ್ದರಿಂದ ದಯವಿಟ್ಟು ಇಂತಹ ಜಾಣತನದ ತಂತ್ರಗಳನ್ನು ಬಿಟ್ಟು ಬಿಡು.’

“ ‘ನಿನ್ನ ಕೊಳಲಿನ ನಿನಾದ ಸ್ಪಂದನದ ಕಡೆದ ಮೊಸರಿನ ಅಮೃತ, ನಿನ್ನ ಸಿಹಿ ಮಾತುಗಳ ಅಮೃತ ಮತ್ತು ನಿನ್ನ ಆಭರಣಗಳ ಅಮೃತ ಧ್ವನಿಗಳು, ಇವೆಲ್ಲ ಒಟ್ಟಾಗಿ ಸೇರಿ ನಮ್ಮ ಕಿವಿಗಳನ್ನು ಮನಸ್ಸನ್ನು ಮತ್ತು ಪ್ರಾಣವನ್ನು ಸೆಳೆಯುತ್ತಿವೆ. ಈ ರೀತಿಯಾಗಿ ನೀನು ನಮ್ಮನ್ನು ಸಾಯಿಸುತ್ತಿದ್ದೀಯ.’

ಶ್ರೀ ಚೈತನ್ಯ ಮಹಾಪ್ರಭು ಅವರು, ದೈವೋನ್ಮಾದ

ಪ್ರೇಮದ ಅಲೆಗಳಲ್ಲಿ ತೇಲಾಡುತ್ತಾ, ಅಸಮಾಧಾನದಿಂದ ಈ ಮಾತುಗಳನ್ನಾಡಿದರು. ಒಂದು ಆತಂಕ ಸಾಗರದಲ್ಲಿ ಮುಳುಗಿ ಅವರು, ಶ್ರೀಮತಿ ರಾಧಾರಾಣಿ, ಇಂತಹದ್ದೇ ಅಸಮಾಧಾನದ ಭಾವನೆಗಳಿಂದ ಆಡಿದ ಶ್ಲೋಕವೊಂದನ್ನು ಪಠಿಸಿದರು. ಅನಂತರ ಅವರೇ ಸ್ವತಃ ಆ ಶ್ಲೋಕವನ್ನು ವಿವರಿಸಿ ಕೃಷ್ಣ ಮಾಧುರ್ಯವನ್ನು ಸವಿದರು.

ಶ್ರೀ ಚೈತನ್ಯ ಮಹಾಪ್ರಭು ಮುಂದುವರಿಸಿದರು: " 'ನನ್ನ ಪ್ರಿಯ ಮಿತ್ರ, ದೇವೋತ್ತಮ ಪರಮ ಪುರುಷ ಕೃಷ್ಣನಿಗೆ ಮೋಡಗಳು ಪ್ರತಿಧ್ವನಿಸುವಂತಹ ಆಳವಾದದ್ದೊಂದು ಧ್ವನಿಯಿದೆ. ಅವನ ಆಭರಣಗಳ ಕಿಣಿಕಿಣಿಯಿಂದ ಅವನು ಗೋಪಿಯರ ಕಿವಿಗಳನ್ನು ಸೆಳೆಯುತ್ತಾನೆ ಮತ್ತು ತನ್ನ ಕೊಳಲಿನ ಮಧುರ ನಿನಾದದಿಂದ ಐಶ್ವರ್ಯ ದೇವತೆಯನ್ನು ಕೂಡ ಮತ್ತು ಇತರ ಸುಂದರ ಹೆಂಗಳೆಯರನ್ನೂ ಅವನು ಸೆಳೆಯುತ್ತಾನೆ. ಅನೇಕ ಅರ್ಥಗಳು ಮತ್ತು ಆಳವಾದ ಸಂಕೇತಗಳು ಒಳಗೊಂಡಿರುವ, ದೇವೋತ್ತಮ ಪುರುಷನ ವಿನೋದದ ಮಾತುಗಳು ನನ್ನ ಕಿವಿಗಳ ಪ್ರೇಮಾಭಿಲಾಷೆಗಳನ್ನು ಹೆಚ್ಚಿಸುತ್ತಿವೆ.'

"ಕೃಷ್ಣನ ಆಳವಾದ ಧ್ವನಿ, ಹೊಸದಾಗಿ ಆವರಿಸಿಕೊಂಡು ಮೋಡಗಳಿಗಿಂತಲೂ ಅನುರಣನಕಾರಕ ಮತ್ತು ಅವನ ಮಧುರ ಧ್ವನಿ ಕೋಗಿಲೆಯ ಸವಿದನಿಯನ್ನೂ ಸೋಲಿಸುತ್ತದೆ. ನಿಜವಾಗಲೂ ಅವನ ಹಾಡು ಎಷ್ಟು ಸಿಹಿಯಾಗಿದೆಯೆಂದರೆ, ಆ ಸದ್ದಿನದೊಂದು ಕಣವು ಕೂಡ ಇಡೀ ಪ್ರಪಂಚವನ್ನು ಮುಳುಗಿಸಬಲ್ಲದು. ಇಂತಹದೊಂದು ಸದ್ದಿನ ಕಣ ಯಾರದಾದರೂ ಕಿವಿಯನ್ನು ಪ್ರವೇಶಿಸಿದರೆ, ಅಂತಹವರಿಗೆ ಬೇರೆ ಎಲ್ಲ ರೀತಿಯ ಕೇಳುವಿಕೆಗಳು ಕೂಡಲೇ ಇಲ್ಲವಾಗಿ ಹೋಗುತ್ತವೆ.

"ನನ್ನ ಪ್ರಿಯ ಸ್ನೇಹಿತ, ಏನು ಮಾಡಬೇಕೆಂದು ದಯವಿಟ್ಟು ನನಗೆ ಹೇಳು, ನನ್ನ ಕಿವಿಗಳನ್ನು ಕೃಷ್ಣ ಗುಣಗಳ ಶಬ್ದಗಳು ಮೊಳಗುತ್ತಿವೆ. ಈಗ, ಹೀಗಿದ್ದರೂ, ನಾನವನ ದಿವ್ಯ ಶಬ್ದಗಳನ್ನು ಕೇಳಲಾಗುತ್ತಿಲ್ಲ ಮತ್ತು ಅದಕ್ಕಾಗಿ ನಾನೀಗ ಬಹುಪಾಲು ಸತ್ತು ಹೋಗಿದ್ದೇನೆ.

"ಕೃಷ್ಣನ ಕಾಲಂದಿಗೆ ಗೆಜ್ಜೆಯ ಕಿಣಿ ಕಿಣಿ ಸದ್ದು, ಹಂಸದ ಮತ್ತು ಕೊಕ್ಕರೆಯ ಹಾಡುಗಳನ್ನು ಕೂಡ ಹಿಂದೆ ಹಾಕುತ್ತದೆ ಮತ್ತು ಅವನ ಕಡಗಗಳ ದನಿಗಳು ಚಟಕ ಪಕ್ಷಿಯನ್ನೂ ನಾಚಿಕೆಗೊಳ್ಳುವಂತೆ ಮಾಡುತ್ತವೆ. ಈ ದನಿಗಳನ್ನು ಒಂದು ಸಲ ತಮ್ಮ ಕಿವಿಗಳಲ್ಲಿ ಪ್ರವೇಶಿಸುವಂತೆ ಮಾಡಿದ ಯಾರೂ ಬೇರೆ ಯಾವ ದನಿಯನ್ನೂ ಕೇಳಲು ಸಹಿಸುವುದಿಲ್ಲ.

"ಕೃಷ್ಣನ ಮಾತುಗಳು ಅಮೃತಕ್ಕಿಂತಲೂ ಸಿಹಿಯಾದದ್ದು. ಅವನ ಪ್ರತಿಯೊಂದು ಆನಂದಭರಿತ ಮಾತುಗಳೂ ಅರ್ಥಪೂರ್ಣವಾಗಿರುತ್ತದೆ ಮತ್ತು ಅವನ ಮಾತುಗಳು ಕರ್ಪೂರದಂತಹ ಅವನ ಮುಗುಳು ನಗೆಯೊಂದಿಗೆ ಬೆರೆತಾಗ, ಅದರ ಫಲವಾದ ಶಬ್ದಗಳು ಮತ್ತು ಕೃಷ್ಣನ ಮಾತುಗಳ ಆಳವಾದ ಅರ್ಥ ವಿವಿಧ ದಿವ್ಯ ರಸಗಳನ್ನು ಉತ್ಪತ್ತಿಮಾಡುತ್ತವೆ.

"ಆ ದಿವ್ಯ, ಆನಂದಮಯ ಅಮೃತದ ಒಂದು ಬಿಂದು, ಆ ಅಮೃತವನ್ನು ರುಚಿ ನೋಡುವ ನಂಬಿಕೆಯಲ್ಲಿ ಬದುಕುವ ಚಕೋರ ಪಕ್ಷಿಯ ಹಾಗೆ, ಕಿವಿಯ ಪ್ರಾಣ ಮತ್ತು ಆತ್ಮ. ಕೆಲವೊಮ್ಮೆ, ಅದೃಷ್ಟವಶಾತ್, ಆ ಪಕ್ಷಿ ಅದರ ಸವಿ ನೋಡಬಹುದು, ಆದರೆ ಉಳಿದ ಸಮಯಗಳಲ್ಲಿ ದುರದೃಷ್ಟವಶಾತ್ ಸವಿಯದೇ ಹೋಗಬಹುದು ಮತ್ತು ಇದರಿಂದ ಅದು ಬಾಯಾರಿಕೆಯಿಂದ ಬಹು ಪಾಲು ಸಾಯುತ್ತದೆ.

(ಮುಂದುವರಿಯುವುದು)

## ಹಬ್ಬ ಹರಿದಿನ

**13-10-2024, ಭಾನುವಾರ, ದಶಮಿ**
ರಾಮಚಂದ್ರ ವಿಜಯೋತ್ಸವ
ಶ್ರೀ ಮಧ್ವಾಚಾರ್ಯ ಆವಿರ್ಭಾವ

**14-10-2024, ಸೋಮವಾರ, ಏಕಾದಶೀ**
ಪಾಶಾಂಕುಶ ಏಕಾದಶೀ ಪ್ರಯುಕ್ತ ಉಪವಾಸ

**15-10-2024, ಮಂಗಳವಾರ, ತ್ರಯೋದಶಿ**
ಶ್ರೀಲ ರಘುನಾಥ ದಾಸ ಗೋಸ್ವಾಮಿ,
ಶ್ರೀಲ ರಘುನಾಥ ಭಟ್ಟ ಗೋಸ್ವಾಮಿ,
ಶ್ರೀಲ ಕೃಷ್ಣದಾಸ ಕವಿರಾಜ ಗೋಸ್ವಾಮಿ ಪುಣ್ಯತಿಥಿ

**17-10-2024, ಗುರುವಾರ, ಪೂರ್ಣಿಮೆ**
ಕೃಷ್ಣ ಶರದಿಯ ರಾಸ-ಯಾತ್ರೆ
ಶ್ರೀ ಮುರಾರಿ ಗುಪ್ತ ಪುಣ್ಯತಿಥಿ
ಊರ್ಜ ವ್ರತ, ಕಾರ್ತಿಕ ವ್ರತ
ದಾಮೋದರ ವ್ರತ ಪ್ರಾರಂಭ
ಚಾತುರ್ಮಾಸ್ಯ ವ್ರತದ 4ನೇ ತಿಂಗಳು ಪ್ರಾರಂಭ
(ಒಂದು ತಿಂಗಳವರೆಗೆ ಉದ್ದಿನಬೇಳೆ ವರ್ಜ್ಯ)

**23-10-2024, ಬುಧವಾರ, ಸಪ್ತಮಿ**
ಶ್ರೀಲ ನರೋತ್ತಮ ದಾಸ ಠಾಕುರ ಪುಣ್ಯತಿಥಿ

**24-10-2024, ಗುರುವಾರ, ಅಷ್ಟಮಿ**
ಶ್ರೀ ರಾಧಾಕುಂಡ ಆವಿರ್ಭಾವ, ಬಹುಳಾಷ್ಟಮಿ

**28-10-2024, ಸೋಮವಾರ, ಏಕಾದಶೀ**
ರಮಾ ಏಕಾದಶೀ ಪ್ರಯುಕ್ತ ಉಪವಾಸ





# ಭೇದ - ನಿಯಮಗಳನ್ನು ಮೀರಿ

*ಶ್ರೀ ಶ್ರೀಮದ್ ಎ.ಸಿ. ಭಕ್ತಿವೇದಾಂತ ಸ್ವಾಮಿ ಪ್ರಭುಪಾದರು ಮತ್ತು ಪತ್ರಿಕಾ ವರದಿಗಾರನೊಬ್ಬನ ನಡುವೆ 1975ರ ಜುಲೈನಲ್ಲಿ ಫಿಲಿಡೆಲ್ಫಿಯಾದಲ್ಲಿ ನಡೆದ ಸಂವಾದ.*

**ವರದಿಗಾರ:** ನೀವು ಕೆಲವು ಗುಣಗಳನ್ನು ಸ್ತ್ರೀಯರ ಮೇಲೆ ಆರೋಪಿಸಿರುವ ಕಾರಣ ಕೃಷ್ಣಪ್ರಜ್ಞಾ ಅಭಿಯಾನ ಲಿಂಗಭೇದ ಭಾವದಿಂದ ಕೂಡಿದೆ; ನನಗೆ ಸ್ಪಷ್ಟ ಅರಿವಿಲ್ಲ. ಕೆಲವು ವೇದ ಶಾಸ್ತ್ರಾಧ್ಯಾಯಿಗಳು ಇದರ ವ್ಯಾಖ್ಯೆ ನೀಡಿದ್ದಾರೆ; ಹಾಗಾಗಿ ಈ ಬಗ್ಗೆ ತಮ್ಮ ಪ್ರತಿಕ್ರಿಯೆ ಕೋರುತ್ತಿದ್ದೇನೆ. ಕೃಷ್ಣಪ್ರಜ್ಞಾ ಪ್ರಚಾರ ಸ್ತ್ರೀವಿರೋಧಿ ಎಂದು ಆರೋಪಿಸಿಲ್ಲವಾದರೂ, ಸಹಜವಾದ ಲಕ್ಷಣಗಳ ಕಾರಣ ಅವರ ಪಾತ್ರವನ್ನು ಸಂಕುಚಿತಗೊಳಿಸಲಾಗಿದೆ.

**ಶ್ರೀಲ ಪ್ರಭುಪಾದ:** ಆಧ್ಯಾತ್ಮಿಕವಾಗಿ ಸಮಾನಾವಕಾಶ ಕಲ್ಪಿಸಿಕೊಡುತ್ತೇವೆ. ಭೌತಿಕವಾಗಿ ಒಬ್ಬಾತ, ಸಹಾಯಕ, ಮತ್ತೊಬ್ಬ ನಿರ್ವಾಹಕ. ಅದನ್ನು ಕೈಬಿಡುವುದು ಹೇಗೆ? ಪ್ರತಿಯೊಬ್ಬರೂ ಆಡಳಿತ ನಿರ್ವಾಹಕನಾಗಲು ಸಾಧ್ಯವೇ? ಲೌಕಿಕದಲ್ಲಿ ಇದು ಸಾಧ್ಯವೆ? ಭೌತಿಕವಾಗಿ ಪರಿಭಾವಿಸುವಾಗ ಒಬ್ಬರು ತಂದೆ, ಇನ್ನೊಂದು ಮಗು. ಒಬ್ಬರು ಸಹಾಯಕರು, ಮತ್ತೊಬ್ಬರು ಆಡಳಿತ ನಿರ್ವಾಹಕ. ಒಬ್ಬರು ಮಹಿಳೆ ಮತ್ತೊಬ್ಬರು ಪುರುಷ. ಇದನ್ನು ನೀವು ಹೇಗೆ ತಡೆಯುತ್ತೀರಿ? ಆದರೆ ಆಧ್ಯಾತ್ಮಿಕವಾಗಿ ಎಲ್ಲರೂ ಒಂದೇ.

**ವರದಿಗಾರ:** ಲೌಕಿಕವಾಗಿ ಏನು ನಡೆಯುತ್ತಿದೆ ಎಂಬುದು ಅಮುಖ್ಯವೆ?

**ಶ್ರೀಲ ಪ್ರಭುಪಾದ:** ವಿಷಯವೇನೆಂದರೆ, ನೀವು ಅಧ್ಯಾತ್ಮ ಭೂಮಿಕೆಯಲ್ಲಿ ಕಾಲಿಟ್ಟಾಗ ಪ್ರತಿಯೊಬ್ಬರಲ್ಲೂ ಚೇತನರನ್ನು, ಆತ್ಮನನ್ನು ಕಂಡಾಗ ಅಲ್ಲಿಗೆ ಅದೇ ಸಮಾನತೆ. ಉದಾಹರಣೆಗೆ ನೀವು ವಿಭಿನ್ನ ರೀತಿಯಲ್ಲಿ ಉಡುಗೆ ತೊಟ್ಟಿದ್ದೀರಿ. ಕೆಂಪು ರವಿಕೆ ಧರಿಸಿದ್ದೀರಿ, ಆದರೆ ನನ್ನ ಪೋಷಾಕೆ ಬೇರೆ. ಈ ವ್ಯತ್ಯಾಸ ಇರಲೇಬೇಕು. ಇಲ್ಲಿ ಅನೇಕ ಸ್ತ್ರೀ ಪುರುಷರಿದ್ದಾರೆ - ಅವರೆಲ್ಲರೂ ಬೇರೆ ಬೇರೆ ಬಟ್ಟೆಗಳನ್ನು ಧರಿಸಿದ್ದಾರೆ. ಉಡುಗೆಯ ಆಧಾರದ ಮೇಲೆ ಎಲ್ಲರೂ ಸಮಾನರೆನ್ನಲಾಗದು.

ಆದರೆ ಈ ಪೋಷಾಕಿನ ಒಳಗಡೆ ಆಧ್ಯಾತ್ಮಿಕ ಚೇತನರಾಗಿ ಎಲ್ಲರೂ ಒಂದೇ. ಭಗವದ್ಗೀತೆಯಲ್ಲಿ ಕೃಷ್ಣ ಹೇಳಿದ್ದಾನೆ - "ಆಧ್ಯಾತ್ಮಿಕ ದೃಷ್ಟಿಕೋನದಿಂದ ನಾವು ಜ್ಞಾನಿಯನ್ನು, ಒಂದು ಹಸು, ಆನೆ, ನಾಯಿ, ನಾಯಿಭಕ್ಷಕರೂ ಸಹ ಎಲ್ಲರೂ ಸಮಾನರೆ ಎಂದು ಕಾಣಬಹುದು. ಆದರೆ ಭೌತಿಕವಾಗಿ ಅವರು ಹೇಗೆ ಸಮಾನರು?

ನಾನೊಬ್ಬ ವಿದ್ವಾಂಸನನ್ನು ಆಮಂತ್ರಿಸಿ - "ಈ ನಾಯಿಯ ಪಕ್ಕ ಕೂರಿ" ಎಂದರೆ ಅವರಿಗೆ ಸಮಾಧಾನ ತರುತ್ತದೆಯೇ? ಆತ ಅವಮಾನಿತರಾಗುತ್ತಾರೆ. ನಾನು "ನಾಯಿಯೊಳಗೆ ಒಂದು ಆತ್ಮನನ್ನು ಕಾಣಬಹುದು; ಮತ್ತು ಜ್ಞಾನಿಯೊಳಗೂ ಒಂದು ಜೀವಾತ್ಮನನ್ನು ಕಾಣಬಹುದು. ಆದರೆ - ನೀವು ಪರಮಜ್ಞಾನಿಯೆಂಬ ಭಾವನೆ ನಿಮಗಿರಬಹುದು, ನಾಯಿ ನಿಮಗೆ ಯಃಕಶ್ಚಿತ್ ಎಂದು ತೋರಬಹುದು. ಆದರೆ ನನ್ನ ದೃಷ್ಟಿಯಲ್ಲಿ ನೀವಿಬ್ಬರೂ ಒಂದೇ." ಎಂದರೆ ಅದು ಅವಮಾನಕರ. ಆದುದರಿಂದ ಭೌತಿಕ ವ್ಯವಸ್ಥೆಯ ವೈವಿಧ್ಯವನ್ನು ನಾವು ಕದಲಿಸಬಾರದು. ಅದೇ ವೇಳೆ ಆಧ್ಯಾತ್ಮಿಕ ಸ್ತರದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಬೇಕು. ಕೃತಕವಾಗಿ ಭೌತಿಕ ಶರೀರದ ವೇದಿಕೆಯ ಮೇಲೆ ನೀವು ಸ್ತ್ರೀಪುರುಷರನ್ನು ಸಮಾನರಂತೆ ಕಂಡರಿಸಬಹುದು. ಆದರೆ ಅದು ನಿಜವಲ್ಲ.

ಭಗವದ್ಗೀತೆಯಲ್ಲಿ ಒಂದೆಡೆ, ಪರಮಪುರುಷ ಭಗವಂತ, ಆಧ್ಯಾತ್ಮಿಕ ದೃಷ್ಟಿಕೋನದಿಂದ ಎಲ್ಲರನ್ನು ಸಮಾನಭಾವದಿಂದ ಕಾಣಬಹುದೆಂದು ಹೇಳುತ್ತಾನೆ. ಮತ್ತೊಂದೆಡೆ (ಶ್ರೀಕೃಷ್ಣ) ಹೇಳುತ್ತಾನೆ - **ಸ್ತ್ರೀಷು ದುಷ್ಟಾಸು ವಾರ್ಷ್ಣೇಯ ಜಾಯತೇ ವರ್ಣಸಙ್ಕರಃ** ನೀವು ಸ್ತ್ರೀಯರನ್ನು ಸಂರಕ್ಷಿಸಬೇಕು. ಇಲ್ಲವಾದಲ್ಲಿ ಕೆಳವರ್ಗದ ಜನರು ಶೀಲಭಂಗಕ್ಕೆ ಯತ್ನಿಸುತ್ತಾರೆ. ಸಮಾಜದಲ್ಲಿ ಅನಪೇಕ್ಷಿತ ಶಿಶುಗಳ ಜನನದಿಂದ ಹೊರೆಯಾಗುತ್ತದೆ. 'ನೀವು ಸ್ತ್ರೀ ವಿಮೋಚನಾ ಆಂದೋಳನವನ್ನು ಗಮನಿಸಿ' ಇದು ಪುರುಷರ ಹುನ್ನಾರ. ಈಗ ಪುರುಷರಿಗೆ ಪುಕ್ಕಟೆ ವೇಶ್ಯೆಯರು ಸಿಗುತ್ತಾರೆ; ಅಷ್ಟೆ. ಒಮ್ಮೆ ಒಬ್ಬಾತ, ಒಬ್ಬಾಕೆಯನ್ನು ಗರ್ಭಿಣಿಯನ್ನಾಗಿ ಮಾಡಿದರಾಯಿತು, ಆತ ಕೈಕೊಟ್ಟು ಹೋಗುತ್ತಾನೆ. ಆ ಹೆಣ್ಣಿಗೆ ಇರುವುದು ಎರಡೇ ಆಯ್ಕೆ: ಸರ್ಕಾರಿ ಸವಲತ್ತುಗಳಿಗೆ ಕೈಯೊಡ್ಡುವುದು, ಇಲ್ಲವೆ ಆ ಮಗುವನ್ನು ಕೊಲ್ಲುವುದು.... ಗರ್ಭಪಾತ. ನಿಮಗೆ ಅದನ್ನು ಕೇಳಲಿಷ್ಟವಿಲ್ಲ, ಆದರೆ 'ಸ್ತ್ರೀವಿಮೋಚನಾ ಚಳವಳಿ' ಎಂದರೆ, ಪುರುಷರು ನಿಮ್ಮ ಮೇಲೆ ಬಲೆ ಬೀಸಿದ್ದಾರೆಂದು ಅರ್ಥ. ಹೀಗಾಗಿ ನಮ್ಮ ಅಧ್ಯಾತ್ಮ ಗುರಿಸಾಧನೆಗಾಗಿ, ನಾವು ಭೌತಿಕ ಸ್ತರದಲ್ಲಿ ಕೆಲವೊಂದು ಲಘುವಾದ ಲೌಕಿಕ ಭೇದವನ್ನು ಮಾಡಬೇಕಾಗುತ್ತದೆ. ಸ್ತ್ರೀಯರನ್ನು ರಕ್ಷಿಸುವ ಉದ್ದೇಶದಿಂದ.

ನಾವು ಹಾಗೆ ಭೇದವೆಣಿಸುವವರೆ ಆಗಿದ್ದರೆ, ನಮ್ಮ ಮಂದಿರದಲ್ಲಿ ನಾವೆಲ್ಲರೂ ಒಟ್ಟಿಗೆ ಸುಖವನ್ನು ಅನುಭವಿಸುತ್ತಿರುವೆವು. ಇದು ಹೇಗೆ? ನಾವು ಸಮಾನರೀತಿಯಲ್ಲಿ ಸುಖಸವಲತ್ತುಗಳನ್ನು ಅನುಭವಿಸುತ್ತಿರುವುದೇಕೆಂದರೆ ನಾವೆಲ್ಲರೂ ಸಮಾನರು - ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಸಮಾನರು. 'ನೀನು ಮಹಿಳೆ, ನೀನು ಭಕ್ತೆಯಾಗಲಾರೆ' ಎಂದು ನಾವು ಹೇಳಲಾರೆವು. ಇಲ್ಲ. ನಾವು ಎಲ್ಲರನ್ನು ಸ್ವಾಗತಿಸುತ್ತೇವೆ. ಎಲ್ಲರನ್ನು ಕೇಳುತ್ತೇವೆ.




"ಆಧ್ಯಾತ್ಮಿಕ ನೆಲೆಗೆ ಬನ್ನಿ. ಎಲ್ಲವೂ ಇಲ್ಲಿ ಚೆನ್ನು". ಒಬ್ಬ ವ್ಯಕ್ತಿಗೆ ಆಧ್ಯಾತ್ಮಿಕ ಅನುಭವವಾಗುತ್ತಿದ್ದಂತೆ, ತನಗೂ ಮಿಕ್ಕವರಿಗೂ ವ್ಯತ್ಯಾಸವಿಲ್ಲ ಎಂಬುದನ್ನು ತಿಳಿಯುತ್ತಾನೆ. ಹಾಗಾಗಿ, ಅವನು ಸುಖಿ. ಭೌತಿಕ ಪರಿಕಲ್ಪನೆಯಲ್ಲಿ ಒಬ್ಬ ಮತ್ತೊಬ್ಬನ ಸ್ಥಾನವನ್ನು ಆಕ್ರಮಿಸಿಕೊಳ್ಳಬಯಸುತ್ತಾನೆ. ಅಧ್ಯಾತ್ಮದಲ್ಲಿ ಹಾತೊರೆತಕ್ಕೆ ಕೊರಗಿಗೆ ಆಸ್ಪದವಿಲ್ಲ. ನಾವೆಲ್ಲರೂ ಆಧ್ಯಾತ್ಮಿಕವಾಗಿ ಸಮಾನರೆ ಎಂಬುದು ಅವನಿಗೆ ಅರಿವಾಗುತ್ತದೆ.

ನೀವು ನಮ್ಮ ದೇವಮಂದಿರದಲ್ಲಿ ಕಣ್ಣಾರೆ ಕಾಣಬಹುದು. ಹುಡುಗ ನರ್ತಿಸುತ್ತಿದ್ದಾನೆ. ತಂದೆ ನರ್ತಿಸುತ್ತಾರೆ, ಕರಿಯ ಕುಣಿಯುತ್ತಾನೆ, ಬಿಳಿಯನೂ ಕುಣಿಯುತ್ತಾನೆ, ಅಂತೆಯೇ ವೃದ್ಧರೂ ಸಹ. ಅವರೇನೂ ಕೃತಕ ನರ್ತನ ಮಾಡುತ್ತಿಲ್ಲ – ನಾಯಿಗಳಂತೆ. ಅವರಿಗೆ ಭಗವದ್ಧ್ಯಾನದ ಭಾವಾತಿರೇಕ. ಇದು ಆಧ್ಯಾತ್ಮಿಕ ವೇದಿಕೆ; "ನೃತ್ಯರಂಗ". ಅವರು ಸ್ವಭಾವತಃ ನರ್ತಿಸುತ್ತಿದ್ದಾರೆ, ಏಕಾಏಕಿ ಭಾವೋತ್ಪೂರಿತರಾಗಿ; ಏಕೆಂದರೆ ಅವರಿಗೆ ಭಗವತ್ ಸಾಕ್ಷಾತ್ಕಾರವಾಗುತ್ತಿದೆ. ಭಗವಂತನೊಡನೆ ತಾದಾತ್ಮ್ಯ ಹೊಂದಿದ್ದಾರೆ. "ನಾವೆಲ್ಲ ಕೃಷ್ಣದಾಸ"ರೆಂಬ ಭಾವೋನ್ಮಾದ.

ಮತ್ತೆ ಇದು ಎಲ್ಲ ಭೌತಿಕ ತಾರತಮ್ಯಗಳ ನಡುವೆ ಕಾಣುವ ನೋಟ. ಪುರುಷರ ದೇಹದ ಅಂಗರಚನೆ, ಸ್ತ್ರೀಯದೇಹದ ಅಂಗರಚನೆ ಎರಡೂ ಪರಸ್ಪರ ಭಿನ್ನ. ಅವೆರಡೂ ಒಂದೇ ಎಂದು ಹೇಗೆ ಹೇಳುವಿರಿ? ಭೌತಿಕವಾಗಿ ಇಬ್ಬರೂ ಒಂದೇ ಆಗಿದ್ದರೆ, ಪುರುಷರು ಯಾಕೆ ಗರ್ಭ ಧರಿಸುವುದಿಲ್ಲ? ಇದು ಪ್ರಾಕೃತಿಕ ಭೇದ. ಕೆಲವೊಮ್ಮೆ ನಾನು ಭೇದವೆಣಿಸುತ್ತಿದ್ದೇನೆ ಎಂದು ಜನರ ಭಾವನೆ. ಆದರೆ ಆ ಭೇದ ಆಗಲೆ ಜನ್ಮತಃ ಕಾಣಿಸಿಕೊಂಡಿದೆ. ಹೀಗಿದ್ದರೂ ಸಹ ಕೃಷ್ಣನೊಡನೆ ಸಂಬಂಧದ ವಿಷಯ ಬಂದಾಗ – "ನಾನು ಜೀವಾತ್ಮ, ನನ್ನ ಕರ್ತವ್ಯ ಭಗವತ್ ಸೇವೆ" – ಎಂದು ಯೋಚಿಸಿದಾಗ ಇಬ್ಬರೂ ಒಂದೆ.

ನಾವು ಕೃತಕವಾಗಿ ಸಮಾನತೆ ಕಲ್ಪಿಸಬಾರದು ಎಂಬುದು ನಮ್ಮ ಪ್ರಸ್ತಾವ. ಹಾಗೆ ಮಾಡಿದರೆ ಅದು ವಿಫಲವಾಗುತ್ತದೆ. ಈಗಾಗಲೇ ವಿಫಲಗೊಂಡಿದೆ. ಉದಾಹರಣೆಗೆ, ಲಂಡನ್‌ನಲ್ಲಿ ನಾನೊಬ್ಬ ಮಹಿಳಾ ಪೊಲೀಸ್ ಅಧಿಕಾರಿಯನ್ನು ನೋಡಿದೆ. ನಾನು ಆಕೆಗೆ ವಿನೋದಕ್ಕಾಗಿ ಹೇಳಿದೆ – 'ನಾನು ನಿನ್ನ ಕೈ ಹಿಡಿದೊಯ್ದರೆ – ನೀನೇನು ಮಾಡುವೆ? ಸುಮ್ಮನೆ ಅಳುತ್ತೀಯಷ್ಟೆ. ನೀನು ಪೊಲೀಸ್ ಅಧಿಕಾರಿಯಾಗಿದ್ದು ಪ್ರಯೋಜನವೇನು?" ಒಬ್ಬ ಪೊಲೀಸ್ ಅಧಿಕಾರಿಗೆ ಬೇಕಿರುವುದು ದೇಹದಾರ್ಢ್ಯ. ಎಲ್ಲಾದರೂ ದೊಂಬಿ, ಗೂಂಡಾಗಿರಿ ಆದರೆ ಆತ ಆ ರೌಡಿಯ ಕೆನ್ನೆಗೆ ಬಾರಿಸಿ, ಹಿಡಿತರಬಹುದು. ಆದರೆ ಮಹಿಳೆ ಅಲ್ಲಿ ಮಾಡುವುದೇನು? ಆದುದರಿಂದ ನಾವು – 'ವಾಸ್ತವಕ್ಕೆ ಬನ್ನಿ' ಎನ್ನುತ್ತೇವೆ. ಕೃತಕ ಸಮಾನತೆ ಬಹಳಕಾಲ ಉಳಿಯದು.

ನಾವೆಲ್ಲರೂ ಒಂದೇ; ನಿಸ್ಸಂದೇಹವಾಗಿ. ಏಕೆಂದರೆ ನಾವೆಲ್ಲರೂ ಚೇತನಾತ್ಮರು **'ಅಸ್ಮಿನ್ ದೇಹೇ'**. ಪ್ರತಿಯೊಬ್ಬರ ಭೌತಿಕ ಶರೀರದೊಳಗೂ ಒಂದು ಆತ್ಮವಿದೆ. ಅದನ್ನು ಮೊದಲು ನಾವು ತಿಳಿಯಬೇಕು. ಅದನ್ನು ನಾವು ಅದೇ ನೆಲೆಗಟ್ಟಿನ ಮೇಲೆ ರೂಢಿಸಿ, ನಮ್ಮೊಳಗೆ ಅದರ ಬಗ್ಗೆ ಜ್ಞಾನಪ್ರಾಪ್ತಿಯಾಗಬೇಕು; ಆಗ ನಾವೆಲ್ಲರೂ ಒಂದೆ. ಅಲ್ಲಿ ತಲ್ಲಣಕ್ಕೆ ಎಡೆಯಿಲ್ಲ. ಇದು ಬೇಕು. ನಾವು ಅದನ್ನು ಒತ್ತಿ ಹೇಳುತ್ತಿದ್ದೇವೆ –ಕೃತಕರಾಗಿ ನಾವು ಎಲ್ಲರೂ ಒಂದೇ ಎಂದು ಹೇಳುವುದಾದರೆ, ಅದು ಪರಿಣಾಮಕಾರಿಯಾಗದು. ನಾವೆಲ್ಲರೂ ಆಧ್ಯಾತ್ಮಿಕವಾಗಿ ಸಮಾನರು ಎಂಬುದನ್ನು ತಿಳಿಯಿರಿ. ಅದು ಪ್ರಯೋಜನಕಾರಿ. ಅದು ವಿಶ್ವದ ಎಲ್ಲೆಡೆ ಶಾಂತಿ, ಸೌಖ್ಯವನ್ನು ನೆಲೆಗೊಳಿಸುತ್ತದೆ. *

# ಶ್ರೀ ತೊರವೆ ಲಕ್ಷ್ಮೀ ನರಸಿಂಹ ದೇವಾಲಯ

ಚಿತ್ರ ಲೇಖನ : ಡಾ॥ ಬಿ.ಆರ್. ಸುಹಾಸ್

ವಿಷ್ಣುವಿನ ಅವತಾರಗಳಲ್ಲಿ ಬಹಳ ರೋಮಾಂಚಕರವಾದುದೂ ವಿಸ್ಮಯಕರವಾದುದೂ ಆದ ಅವತಾರವೆಂದರೆ ಶ್ರೀ ನರಸಿಂಹಾವತಾರ. ಅಂತೆಯೇ ಶ್ರೀ ನರಸಿಂಹದೇವರ ದೇವಾಲಯಗಳೂ ವಿಸ್ಮಯಕರವಾಗಿರುತ್ತವೆ. ಅಂಥ ಒಂದು ನರಸಿಂಹ ದೇವಾಲಯವೇ ನಮ್ಮ ಕರ್ನಾಟಕದ ಬಿಜಾಪುರ ಜಿಲ್ಲೆಯ ತೊರವೆ ನರಸಿಂಹ ದೇವಾಲಯ. ಇದು ಬಿಜಾಪುರದಿಂದ ಪಶ್ಚಿಮಕ್ಕೆ ನಾಲ್ಕು ಮೈಲು ದೂರದಲ್ಲಿ ಅಥಣಿ ರಸ್ತೆಯ ಮೇಲಿರುವ ತೊರವೆ ಗ್ರಾಮದಲ್ಲಿದೆ. ತೊರವೆ ಮತ್ತು ನವರಸಪುರ ಎಂಬ ಗ್ರಾಮಗಳು ಒಂದಕ್ಕೊಂದು ಹೊಂದಿಕೊಂಡಿವೆ.

ಈ ದೇವಾಲಯವು ಒಂದು ಗುಹಾಂತರ ದೇವಾಲಯವಾಗಿದ್ದು, ಹೊರಗಡೆ ಒಂದು ಫಲಕವಿರುವ ಗೋಡೆಯಂತಹ ಕಟ್ಟಡ ಬಿಟ್ಟರೆ ಗೋಪುರ ಮೊದಲಾದ ಏನೂ ಇಲ್ಲ. ಗುಹೆಯು, ನೆಲಮಾಳಿಗೆಯಲ್ಲಿದ್ದು ಅಲ್ಲಿಗೆ ಹೋಗಲು ಮೆಟ್ಟಿಲುಗಳಿವೆ. ಗುಹೆಯಲ್ಲಿ ಗರ್ಭಗುಡಿಯಿದ್ದು, ಅಲ್ಲಿ ಶ್ರೀ ನರಸಿಂಹದೇವರ ಸುಂದರ ಮೂರ್ತಿಯಿದೆ. ಎದುರಿನ ಒಂದು ಕಟ್ಟೆಯ ಮೇಲೆ ಭೀಮಾಶಂಕರ ಎಂಬ ಶಿವಲಿಂಗವೂ ಇದೆ. ಭಗವಂತನು ಎಡಗಾಲನ್ನು ಮಡಚಿ, ಬಲಗಾಲನ್ನು ಕೆಳಗೆ ಬಿಟ್ಟು, ತನ್ನ ತೊಡೆಯ ಮೇಲೆ ದಾನವ ಹಿರಣ್ಯಕಶಿಪುವನ್ನು ತನ್ನೆರಡು ಕೈಗಳಿಂದ ಸೀಳುತ್ತಾ ಅವನ ಕರುಳುಗಳನ್ನು ಮೇಲಕ್ಕೆಳೆದಿರುವಂತಿದೆ. ನರಸಿಂಹದೇವರು ಒಟ್ಟು ಅಷ್ಟಭುಜಗಳನ್ನು ಹೊಂದಿದ್ದು, ಉಳಿದ ಕೈಗಳಲ್ಲಿ ಶಂಖಚಕ್ರಾದಿ ಆಯುಧಗಳನ್ನು ಧರಿಸಿದ್ದಾನೆ. ಪೀಠದ ಪ್ರಭಾವಳಿಯಲ್ಲಿ ಬಲಗಡೆ ಲಕ್ಷ್ಮೀದೇವಿಯ ಹಾಗೂ ಎಡಗಡೆ ಪ್ರಹ್ಲಾದ ಕುಮಾರನ ಮೂರ್ತಿಗಳಿವೆ. ಮೇಲೆ ಸುತ್ತಲೂ ಮತ್ಸ್ಯ, ಕೂರ್ಮಾದಿ ದಶಾವತಾರಗಳ ಚಿತ್ರಣವಿದೆ. ಹಿಂಭಾಗದಲ್ಲಿ ದೊಡ್ಡ ಚಕ್ರವಿದೆ. ಹಾಗಾಗಿ ವಿಗ್ರಹವು ಸಾಲಿಗ್ರಾಮ ಶಿಲೆಯೆಂದು ಹೇಳಲಾಗಿದೆ.



ಹೀಗೆ ಶ್ರೀ ಲಕ್ಷ್ಮೀ ನರಸಿಂಹ ವಿಗ್ರಹವು ಬಹಳ ಸುಂದರವಾಗಿದ್ದು ಭಕ್ತಿಭಾವವನ್ನೂ ರೋಮಾಂಚನವನ್ನೂ ಉಂಟುಮಾಡುತ್ತದೆ.

ಗುಹೆಯೊಳಗೆ ಇನ್ನೊಂದು ಸುರಂಗ ಮಾರ್ಗವಿದ್ದು ಅದು ಸ್ವಲ್ಪ ದೂರದಲ್ಲಿರುವ ಶ್ರೀ ನರಸಿಂಹ ತೀರ್ಥಕ್ಕೆ ದಾರಿಯಾಗಿರಬಹುದೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಗುಹೆಯನ್ನು ಬಂಡೆಗಲ್ಲಿನಿಂದ ಮುಚ್ಚುವಂತಿದ್ದು, ತುರ್ತು ಪರಿಸ್ಥಿತಿಗಳಲ್ಲಿ ಹಾಗೆ ಮಾಡಿ. ಅರ್ಚಕರು ನರಸಿಂಹತೀರ್ಥದ ಮಾರ್ಗದಿಂದ ಗುಹೆಯೊಳಗೆ ಬಂದು ಪೂಜೆ ಮಾಡಿಕೊಂಡು ಹೋಗುತ್ತಿದ್ದಿರಬಹುದು ಎಂದೂ ಅಭಿಪ್ರಾಯಪಡುತ್ತಾರೆ. ಈ ದೇವಾಲಯ ಬಹಳ ಪ್ರಾಚೀನವಾದುದಾಗಿದ್ದು, ಇಲ್ಲಿ ಮುಸಲ್ಮಾನರ ಆಳ್ವಿಕೆಯಿದ್ದಾಗ, ದೇವಾಲಯವನ್ನು ಅವರಿಂದ ರಕ್ಷಿಸಲು ಅದು ಹೀಗೆ ಇರುವುದು ತಿಳಿಯದಂತೆ ಮಾಡುತ್ತಿದ್ದರೆಂದು ಹೇಳಲಾಗಿದೆ. ಎಷ್ಟೋ ಕಡೆ, ಈ ರೀತಿಯ ರಕ್ಷಣಾತ್ಮಕ ವಿಧಾನಗಳನ್ನನುಸರಿಸುವುದು ಕಂಡುಬರುತ್ತದೆ. ಹೀಗಾಗಿ, ಇದೊಂದು ವಿಸ್ಮಯಕರ ದೇವಾಲಯವಾಗಿದೆ.

## ಸ್ಥಳೀಯ ಐತಿಹ್ಯಗಳು

ತೊರವೆ ಅಥವಾ ತೊರವಿ ಎಂದು ಕರೆಯಲಾಗುವ ಈ ಗ್ರಾಮದ ಹೆಸರು, ಸಂಸ್ಕೃತದ ತ್ವರಿತಾಲಯ ಎಂಬ ಪದದಿಂದ ಬಂದಿದೆ. ತ್ವರಿತಾಲಯ ಎಂದರೆ ತ್ವರಿತವಾಗಿ ಅಥವಾ ಬೇಗನೆ ಪೊರೆಯುವ ದೇವರ ಆಲಯ ಎಂದು ಅರ್ಥ. ಹೀಗೆ ಕರೆದಿರುವ ಒಂದು ಚಿಕ್ಕ ಸಂಸ್ಕೃತ ಗದ್ಯ ಭಾಗವಷ್ಟೇ ಲಭ್ಯವಿದೆ. ಪುರಾಣ ಕಾಲದಲ್ಲಿ ಹೀಗೆ ತ್ವರಿತಾಲಯ ಕ್ಷೇತ್ರವೆಂದು ಕರೆಯಲ್ಪಡುತ್ತಿದ್ದ ಈ ಗ್ರಾಮವೇ ಮುಂದೆ ಜನರ ಆಡು ಮಾತಿನಲ್ಲಿ ತೊರವಿ, ತೊರವೆ ಎಂದೆಲ್ಲ ಕರೆಯಲ್ಪಡತೊಡಗಿತು. ಮುಸ್ಲಿಮರ ಆಳ್ವಿಕೆಯ ಕಾಲದಲ್ಲಿ ನೌಲಾಖಪುರ ಎಂದು ಕರೆಯಲ್ಪಟ್ಟಿತು. ಆದಿಲ್‌ಶಾಹಿ ರಾಜರ ಕಾಲದಲ್ಲಿ ಇದು ಅವರ ರಾಜಧಾನಿಯೂ ಆಗಿದ್ದು ಅದರ ಕುರುಹುಗಳು ಈಗಲೂ ಕಂಡುಬರುತ್ತವೆ. ಈಗ ತೊರವಿ ಮತ್ತು ನವರಸ ಎರಡೂ ಗ್ರಾಮಗಳು ಒಟ್ಟಿಗೆ ತೊರವಿ ಎಂದೇ ಕರೆಯಲ್ಪಡುತ್ತವೆ. ಆದಿಲ್‌ಶಾಹಿ ರಾಜರಲ್ಲೊಬ್ಬನು ತೊರವೆ ನರಸಿಂಹನ ಭಕ್ತನಾಗಿದ್ದನೆಂದು ಹೇಳುತ್ತಾರೆ.

ಮೊದಲಿಗೆ ಈ ಗುಹಾಲಯದಲ್ಲಿ ಶ್ರೀ ನರಸಿಂಹದೇವರ ಮೂರ್ತಿಯಿರದೇ ದೊಡ್ಡದಾದ ನರಸಿಂಹ ಸಾಲಿಗ್ರಾಮ ಶಿಲೆಯಿತ್ತೆಂದು ಹೇಳುತ್ತಾರೆ. ಆಗ ದೇವರಿಗೆ ದೊಡ್ಡ ಪ್ರಮಾಣದಲ್ಲಿ ಬಹಳ ಭಕ್ತಿಯಿಂದ ಹಯಗ್ರೀವ ನೈವೇದ್ಯವನ್ನು ಅರ್ಪಿಸಲಾಗುತ್ತಿತ್ತು. ಆದರೆ ಬರುಬರುತ್ತಾ ಕಲಿಪ್ರಭಾವ ಹೆಚ್ಚಾಗುತ್ತಾ ವಿಧಿವಿಧಾನಗಳನ್ನು ನಡೆಸುವುದು ಕಷ್ಟವಾಗುವುದೆಂಬಂತೆ ನರಸಿಂಹದೇವರು ಅರ್ಚಕರ ಕನಸಿನಲ್ಲಿ ಕಾಣಿಸಿಕೊಂಡು ತಾನಿನ್ನು ಅಲ್ಲಿ ಇರುವುದಿಲ್ಲವೆಂದೂ ಕೃಷ್ಣಾ ನದಿಯಲ್ಲಿ

ತನ್ನನ್ನು ವಿಸರ್ಜಿಸಬೇಕೆಂದೂ ಹೇಳಿದನಂತೆ. ಮುಂದಿನ ಪೂಜೆ ಹೇಗೆಂದು ಅರ್ಚಕರು ಕೇಳಲು ದೇವರು ಅವರಿಗೆ ದಕ್ಷಿಣಕ್ಕೆ ಹೋಗಿ ಕೃಷ್ಣಾನದಿಯ ದಡದುದ್ದಕ್ಕೂ ಹಸಿಹುಲ್ಲನ್ನು ಹಾಕುತ್ತಾ ಹೋಗಬೇಕೆಂದೂ, ಯಾವ ಸ್ಥಳದಲ್ಲಿ ಆ ಹುಲ್ಲು ಬಿದ್ದಾಗ ಜ್ವಲಿಸುವುದೋ ಅಲ್ಲಿ ಅಗೆದರೆ ತನ್ನ ಮೂರ್ತಿ ಸಿಗುವುದೆಂದೂ ಆ ಮೂರ್ತಿಯನ್ನು ತಂದು ಗುಹೆಯಲ್ಲಿ ಪ್ರತಿಷ್ಠಾಪಿಸಿ ಇನ್ನು ಮುಂದೆ ಪೂಜಿಸಬೇಕೆಂದೂ ಹೇಳಿದನು. ಅದರಂತೆ ಅವರು ದಕ್ಷಿಣಕ್ಕೆ ಹೋಗಿ ಕೃಷ್ಣಾ ನದಿಯ ದಂಡೆಯುದ್ದಕ್ಕೂ ಹಾಗೆ ಹುಲ್ಲು ಹಾಕುತ್ತಾ ಹೋಗಲು, ಈಗಿನ ಬಾಗೇವಾಡಿ ತಾಲ್ಲೂಕಿನ ಚಿಮ್ಮಲಗಿ ಗ್ರಾಮದಲ್ಲಿ ಅದು ಜ್ವಲಿಸಿತು. ಅಲ್ಲಿ ಅಗೆದಾಗ ಅಷ್ಟಭುಜದ ನರಸಿಂಹ ಮೂರ್ತಿ ಸಿಕ್ಕಿತು. ಅಲ್ಲದೇ ಆಗಷ್ಟೇ ಅದನ್ನು ಪೂಜೆ ಮಾಡಿದಂತೆ ಗಂಧಾಕ್ಷತೆ, ತುಳಸಿಪುಷ್ಪಾದಿಗಳು ಅದರ ಮೇಲಿದ್ದವಂತೆ. ಇದಕ್ಕೆ ಇನ್ನೊಂದು ಕಥೆ ಹೇಳುತ್ತಾರೆ. ಶ್ರೀ ನರಸಿಂಹದೇವರು ಹೀಗೆ ಗುಪ್ತವಾಗಿದ್ದಾಗ, ದೂರ್ವಾಸ ಮುನಿಗಳು ಯಾವುದೋ ಒಂದು ರೂಪದಲ್ಲಿ ಬಂದು ಪೂಜೆ ಮಾಡುತ್ತಿದ್ದರಂತೆ. ದೂರ್ವಾಸರು ರುದ್ರಾಂಶಸಂಭೂತರಾದ್ದರಿಂದ, ಇವರ ಸಂಕೇತವಾಗಿ ಗರ್ಭಗುಡಿಯಲ್ಲಿ ಶ್ರೀ ನರಸಿಂಹ ವಿಗ್ರಹಕ್ಕೆ ಎದುರಿಗೆ ಭೀಮಾಶಂಕರ ಎಂಬ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.

ಚಿಮ್ಮಲಗಿ ಗ್ರಾಮದಿಂದ ಶ್ರೀ ನರಸಿಂಹನ ಮೂರ್ತಿಯನ್ನು ತೊರವೆಗೆ ಸಾಗಿಸಹೊರಟಾಗ ಅಲ್ಲಿನ ಜನರು ಬಿಡದೇ ತಾವೇ ಅಲ್ಲಿಯೇ ಪ್ರತಿಷ್ಠಾಪಿಸಿ ಪೂಜಿಸುವೆವೆಂದು ಹಟಹಿಡಿದರು. ಆಗ ದೇವರು ಅವರಿಗೂ ಕನಸಿನಲ್ಲಿ ಕಾಣಿಸಿಕೊಂಡು ಹಾಗೆ ಮಾಡಬಾರದೆಂದೂ ತಾನು ತೊರವೆಗೆ ಹೋಗಬೇಕೆಂದೂ ಅವರೆಲ್ಲರೂ ಅಲ್ಲಿಗೇ ಬಂದು ಸೇವೆ ಸಲ್ಲಿಸಬೇಕೆಂದೂ ಹೇಳಿದನಂತೆ. ಆಗ ಆ ಜನರೆಲ್ಲರೂ ಸೇರಿ ಮೂರ್ತಿಯನ್ನು ವೈಭವದಿಂದ ತೊರವೆಗೆ ತಂದು ಗುಹೆಯಲ್ಲಿ ಪ್ರತಿಷ್ಠಾಪನೆ ಮಾಡಿದರು. ಇದರಲ್ಲಿ ವಿಶೇಷವಾಗಿ ಭಾಗವಹಿಸಿದ ಒಬ್ಬ ರೈತನ ಮನೆತನವನ್ನು ನರಸೀನವರ ಮನೆತನ ಎಂದು ಕರೆಯುತ್ತಾರೆ ಹಾಗೂ ಅವರು ಈಗಲೂ ತೊರವೆಯಲ್ಲಿ ಚೆನ್ನಾಗಿದ್ದಾರೆ. ಅಂತೆಯೇ, ಚಿಮ್ಮಲಗಿ ಗ್ರಾಮದ ಅನೇಕ ಜನರು ತೊರವೆ ನರಸಿಂಹ ಸ್ವಾಮಿಯನ್ನು ತಮ್ಮ ಕುಲದೇವರನ್ನಾಗಿ ಮಾಡಿಕೊಂಡಿದ್ದು ತೊರವೆಗೆ ಬಂದು ಸೇವೆ ಸಲ್ಲಿಸುತ್ತಿದ್ದಾರೆ. ಇವರಲ್ಲಿ ದೇಶಪಾಂಡೆ ಮನೆತನದವರು ಪ್ರಮುಖರು. ಇದರಂತೆ ಈ ದೇವರನ್ನು ಕುಲದೇವರನ್ನಾಗಿ ಮಾಡಿಕೊಂಡವರು ಹುಬ್ಬಳ್ಳಿ, ಧಾರವಾಡ, ಮೈಸೂರು, ಮೊದಲಾದ ಕಡೆಗಳಲ್ಲೂ ಇದ್ದಾರೆ.

ಆದಿಲ್‌ಶಾಹಿ ರಾಜನೊಬ್ಬ ತೊರವೆ ನರಸಿಂಹದೇವರ ಭಕ್ತನಾಗಿದ್ದನೆಂದು ನೋಡಿದೆವಷ್ಟೆ. ಇವನು ನವರಸಪುರವನ್ನು ಬಿಟ್ಟು ಬಿಜಾಪುರವನ್ನೇ ರಾಜಧಾನಿಯಾಗಿ ಮಾಡಿಕೊಳ್ಳಬೇಕಾಗಿ ಬಂದಾಗ, ದೇವರ ದರ್ಶನಕ್ಕೆ ಕಷ್ಟವಾಗುವುದೆಂದು ಚಿಂತಿತವಾದನಂತೆ. ಆಗ ದೇವರು ರಾಜವಾಡೆಯ ಸಮೀಪ, ಅಶ್ವತ್ಥನಾರಾಯಣ ವೃಕ್ಷದ ಬುಡದಲ್ಲಿ ತನ್ನ ದರ್ಶನ ಪಡೆಯಲು ಹೇಳಿದಂತಾಯಿತಂತೆ. ಈಗಲೂ ರಾಜವಾಡೆಯು ನ್ಯಾಯಾಲಯವಾಗಿದ್ದರೂ ಅಲ್ಲಿ ಅಶ್ವತ್ಥವೃಕ್ಷ ಮತ್ತು ನರಸಿಂಹಾಲಯ ಇವೆ. ಅಂತೆಯೇ ಬಿಜಾಪುರದ ಕಾಖಂಡಕಿ ಗ್ರಾಮದ ಮಹೀಪತಿದಾಸರ ಭಕ್ತಿಗೆ ಮೆಚ್ಚಿ ಅಲ್ಲಿಯೇ ಅಶ್ವತ್ಥ



ವೃಕ್ಷದ ಬುಡದಲ್ಲಿ ಈ ದೇವರು ಪ್ರಕಟನಾದನಂತೆ. ಹೀಗೆಯೇ ಇನ್ನೂ ಕೆಲವು ಭಕ್ತರ ವಿಷಯದಲ್ಲಾಗಿದೆಯಂತೆ.

ಚಿಮ್ಮಲಗಿ ಗ್ರಾಮದಿಂದ ಶ್ರೀ ನರಸಿಂಹಮೂರ್ತಿಯನ್ನು ತೊರವೆಗೆ ತಂದು ಪ್ರತಿಷ್ಠಾಪಿಸಿದ ಅನಂತರ, ಅರ್ಚಕರು ಮೊದಲಿದ್ದ ಸಾಲಿಗ್ರಾಮ ಶಿಲೆಯನ್ನು ಶ್ರೀ ನರಸಿಂಹತೀರ್ಥದಲ್ಲಿ ವಿಸರ್ಜಿಸಿದರಂತೆ. ಆಗ ಪುನಃ ದೇವರು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು ತೀರ್ಥದ ನೀರು ಕಡಮೆಯಾದರೆ ತಾನು ಪುನಃ ಪ್ರಕಟವಾಗಬೇಕಾಗುವುದು, ಆದರೆ ತಾನು ಮತ್ತೆಂದೂ ಪ್ರಕಟವಾಗುವುದಿಲ್ಲ, ಆದ್ದರಿಂದ ತನ್ನನ್ನು ಕೃಷ್ಣಾನದಿಯಲ್ಲಿಯೇ ವಿಸರ್ಜಿಸಬೇಕೆಂದು ಹೇಳಿದನಂತೆ. ಅಂತೆಯೇ ಅರ್ಚಕರು ಸಾಲಿಗ್ರಾಮ ಶಿಲೆಯನ್ನು ಅಲ್ಲಿಂದ ತೆಗೆದು ಕೃಷ್ಣಾನದಿಯಲ್ಲಿ ವಿಸರ್ಜಿಸಿದರು.

ತೊರವೆಯು ಇನ್ನೊಂದು ವಿಷಯಕ್ಕೆ ಪ್ರಸಿದ್ಧವಾಗಿರುವುದು ಅದೆಂದರೆ, ಕನ್ನಡದ ಪ್ರಸಿದ್ಧ ತೊರವೆ ರಾಮಾಯಣ ರಚನೆಗೊಂಡದ್ದು ಇಲ್ಲಿಯೇ. ನರಹರಿಯೆಂಬ ಬ್ರಾಹ್ಮಣ ಕವಿ, 1500ನೇ ಇಸವಿಯಲ್ಲಿ ಈ ಗುಹೆಯಲ್ಲಿ ಶ್ರೀ ನರಸಿಂಹದೇವರ ಎದುರಿನಲ್ಲಿಯೇ ಕುಳಿತು ರಚಿಸಿದ. ಇವನನ್ನು ಕುಮಾರವಾಲ್ಮೀಕಿಯೆಂದು ಕರೆಯುತ್ತಾರೆ. ಗ್ರಂಥದ ಆರಂಭ ಮತ್ತು ಅಂತ್ಯದಲ್ಲಿ ತೊರವೆ ನರಸಿಂಹದೇವರನ್ನು ಸ್ತುತಿಸಿದ್ದಾನೆ, ಹಾಗೂ ಇದರ ಕಥಾ ನಾಯಕ ತೊರವೆಯ ಶ್ರೀ ನರಹರಿಯೆಂದೂ ಕರ್ತೃ, ಕುಮಾರವಾಲ್ಮೀಕಿಯೆಂದೂ ಹೇಳಿದ್ದಾನೆ.

ಹೀಗೆ, ವಿಸ್ಮಯಕರವಾದ ಮತ್ತು ಅನೇಕ ಐತಿಹ್ಯಗಳಿಂದ ಕೂಡಿರುವ ತೊರವೆ ನರಸಿಂಹ ದೇವಾಲಯ ನೋಡಲೇಬೇಕಾದುದಾಗಿದೆ. *

**(ಆಧಾರ: ಶ್ರೀ ತೊರವಿ ಕ್ಷೇತ್ರದರ್ಶನ)**

# ರುಚಿಕರ ರೋಲ್ಸ್

ರೋಲ್ ಎಂದರೆ ಒಳಗಡೆ ಸ್ಟಫಿಂಗ್ ತುಂಬಿ ಸುರುಳಿ ಸುತ್ತಿ ಮಾಡಿರುವ ತೆಳ್ಳಗಿನ ರೊಟ್ಟಿ. ಸ್ಟಫಿಂಗ್‌ಗೆ ಬೇರೆ ಬೇರೆ ತರಹದ ಪದಾರ್ಥಗಳನ್ನು ಬಳಸಿ ಮಾಡಬಹುದು. ರೋಲ್‌ಗೆ ಬಳಸುವ ತೆಳ್ಳಗೆ ಲಟ್ಟಿಸಿದ ಮೈದಾ ಪದರಗಳು ಸೂಪರ್ ಮಾರ್ಕೆಟ್‌ಗಳಲ್ಲಿ ಸಾಮಾನ್ಯವಾಗಿ ಸಿಗುತ್ತವೆ. ಇಲ್ಲವೇ ಈ ಪದರಗಳನ್ನು ಮನೆಯಲ್ಲೇ ತಯಾರಿಸಬಹುದು. ಇದನ್ನು ಮೈದಾ ಅಥವಾ ಗೋಧಿಹಿಟ್ಟಿನಿಂದ ತಯಾರಿಸಬಹುದು. ಈ ಕ್ರಿಸ್ಪಿ ರೋಲ್‌ಗಳನ್ನು ಮಕ್ಕಳ ಊಟದ ಡಬ್ಬಿಗೆ ಹಾಕಿಕೊಟ್ಟರೆ ಬಹಳ ಇಷ್ಟಪಟ್ಟು ತಿನ್ನುತ್ತಾರೆ. ಇದೇ ಸ್ಟಫಿಂಗ್ ಅನ್ನು ಚಪಾತಿ ಒಳಗೆ ಹಾಕಿ ರೋಲ್ ಮಾಡಿ ಅದನ್ನು ಸಿಲ್ವರ್ ಫಾಯಿಲ್‌ನಲ್ಲಿ ಸುತ್ತಿದರೆ ಚಪಾತಿ ರೋಲ್ ಸಿದ್ಧ. ಭಕ್ತಿವೇದಾಂತ ದರ್ಶನದ ಓದುಗರಿಗೆ ಈ ಸಂಚಿಕೆಯಲ್ಲಿ ರುಚಿಕರ ರೋಲ್‌ಗಳನ್ನು ಮಾಡುವ ವಿಧಾನವನ್ನು ತಿಳಿಸಿದ್ದೇವೆ. ಇವೆಲ್ಲವನ್ನು ಶ್ರದ್ಧೆಯಿಂದ ತಯಾರಿಸಿ ಶ್ರೀ ರಾಧಾಕೃಷ್ಣರಿಗೆ ಅರ್ಪಿಸಿ ಮನೆಯವರೊಂದಿಗೆ ಸೇವಿಸಿ.

## ವೆಜಿಟೆಬಲ್ ರೋಲ್



**ಬೇಕಾಗುವ ಪದಾರ್ಥಗಳು :**

**ಸ್ಟಫಿಂಗ್‌ಗೆ –**

ತೆಳ್ಳಗೆ ಉದ್ದುದ್ದವಾಗಿ ಹೆಚ್ಚಿದ್ದು : ಕ್ಯಾಬೇಜ್ – 1 ಕಪ್, ಕ್ಯಾರೆಟ್ – 1 ಕಪ್, ಬೀನ್ಸ್ – 1/2 ಕಪ್

ಹಸಿಮೆಣಸಿನಕಾಯಿ – 3

ಕೊತ್ತಂಬರಿ ಸೊಪ್ಪು – ಸ್ವಲ್ಪ

ಚಿಲ್ಲಿ ಪೌಡರ್ – 1/2 ಚಮಚ

ಉಪ್ಪು – ರುಚಿಗೆ ತಕ್ಕಷ್ಟು

ಎಣ್ಣೆ – ಕರಿಯಲು

**ರೋಲ್ ಮಾಡುವ ವಿಧಾನ (ಪದರಗಳು):**

ಮೈದಾ – 2 ಕಪ್

ಉಪ್ಪು – 2 ಚಿಟಿಕೆ

ಮೈದಾಹಿಟ್ಟಿಗೆ ಉಪ್ಪು ಸೇರಿಸಿ ಮಿಕ್ಸ್ ಮಾಡಿಕೊಂಡು ಸ್ವಲ್ಪ ನೀರು ಸೇರಿಸಿ ಚಪಾತಿ ಹಿಟ್ಟಿಗಿಂತ ಗಟ್ಟಿಯಾಗಿ ಕಲಸಿಕೊಳ್ಳಿ. ಕಲಸಿದ ಹಿಟ್ಟನ್ನು 30 ನಿಮಿಷ ನೆನೆಯಲು ಬಿಡಿ. ಅನಂತರ ಇದರಿಂದ ಒಂದೇ ಗಾತ್ರದ ಉಂಡೆಗಳನ್ನು ಮಾಡಿಕೊಂಡು ತೆಳುವಾದ ಪದರಗಳನ್ನು ಲಟ್ಟಿಸಿ. ಲಟ್ಟಿಸುವಾಗ ಮೈದಾವನ್ನು ಎಷ್ಟು ಬೇಕಾದರು ಬಳಸಿ. ಹೀಗೆ ಮಾಡಿದರೆ ರೋಲ್‌ಗಳು ಗರಿಗರಿಯಾಗಿ ಇರುತ್ತದೆ.

ಒಂದು ಪಾತ್ರೆಯಲ್ಲಿ ಸ್ವಲ್ಪ ಎಣ್ಣೆ ಹಾಕಿ ಕಾಯಲು ಇಡಿ. ಕಾದ ಎಣ್ಣೆಗೆ ಕತ್ತರಿಸಿದ ತರಕಾರಿಗಳನ್ನು ಹಾಕಿ ಬಾಡಿಸಿಕೊಳ್ಳಿ. ಸ್ವಲ್ಪ ಬೆಂದ ಅನಂತರ ಇದಕ್ಕೆ ಹೆಚ್ಚಿದ ಹಸಿಮೆಣಸಿನಕಾಯಿ, ಚಿಲ್ಲಿ ಪೌಡರ್, ಕೊತ್ತಂಬರಿ ಸೊಪ್ಪು, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಮಿಕ್ಸ್ ಮಾಡಿ ಇಳಿಸಿದರೆ ಸ್ಟಫಿಂಗ್ ಸಿದ್ಧ. ಇದು ಸ್ವಲ್ಪ ಆರಿ ತಣ್ಣಗಾದ ಮೇಲೆ ತೆಳುವಾಗಿ ಲಟ್ಟಿಸಿರುವ ಪದರದ ಒಳಗೆ ಮೂರು ಚಮಚ ತರಕಾರಿ ಮಿಶ್ರಣವನ್ನು ಹಾಕಿ ಸುರುಳಿ ಸುತ್ತಿ. ಸುರುಳಿಯ ಪಕ್ಕದ ಎರಡು ಕೊನೆಗಳನ್ನು ಒಳಗೆ ಬರುವಂತೆ ಮಡಚಿ ಪ್ರೆಸ್ ಮಾಡಿ. ಒಂದು ಚಮಚದಷ್ಟು ಮೈದಾಹಿಟ್ಟನ್ನು ಸ್ವಲ್ಪ ನೀರಿನೊಂದಿಗೆ ಕಲೆಸಿ ದಪ್ಪಗೆ ಪೇಸ್ಟ್‌ನಂತೆ ಮಾಡಿಕೊಳ್ಳಿ. ಅಂಚುಗಳಿಗೆ ಮೈದಾ ಪೇಸ್ಟ್ ಸವರಿಕೊಂಡು ಪೂರ್ತಿ ಸುರುಳಿ ಸುತ್ತಿ ಕೊನೆಗಳನ್ನು ಒತ್ತಿ. ಅನಂತರ ಎಣ್ಣೆಯನ್ನು ಹದವಾಗಿ ಕಾಯಿಸಿ ವೆಜಿಟೆಬಲ್ ರೋಲ್‌ಗಳನ್ನು ಮುಕ್ಕಾಲು ಭಾಗ ಕರಿದು, ಎಣ್ಣೆಯಿಂದ ತೆಗೆದು, ತಣ್ಣಗಾದ ಅನಂತರ ಪುನಃ ಎಣ್ಣೆಯಲ್ಲಿ ಹಾಕಿ ಕೆಂಪಗೆ ಕರಿದು ತೆಗೆಯಿರಿ. ಹೀಗೆ ಮಾಡುವುದರಿಂದ ರೋಲ್ ಗರಿ ಗರಿಯಾಗುವುದಲ್ಲದೆ ಒಳ್ಳೆಯ ಬಣ್ಣವು ಬರುತ್ತದೆ. ಕರಿದ ರೋಲ್‌ಗಳನ್ನು ಒಂದು ಟಿಶ್ಯೂ ಪೇಪರ್ ಮೇಲೆ ಹಾಕಿ ಎಣ್ಣೆ ಹೀರುವಂತೆ ಮಾಡಿ. ಇದನ್ನು ಬಿಸಿಯಿರುವಾಗಲೇ ಪುದೀನಾ ಚಟ್ನಿಯೊಂದಿಗೆ ಸವಿಯಿರಿ.

## ಬ್ರೆಡ್ ರೋಲ್



**ಬೇಕಾಗುವ ಪದಾರ್ಥಗಳು :**
ಬ್ರೆಡ್ ಸ್ಲೈಸ್ – 8
ಬೇಯಿಸಿದ ಆಲೂಗಡ್ಡೆ – 3
ಹಸಿಮೆಣಸಿನಕಾಯಿ – 4
ಕೊತ್ತಂಬರಿ ಸೊಪ್ಪು – ಸ್ವಲ್ಪ
ಟೊಮೆಟೊ ಸಾಸ್ – 1/2 ಚಮಚ
ಸಕ್ಕರೆ – 1/2 ಚಮಚ
ಉಪ್ಪು – ರುಚಿಗೆ ತಕ್ಕಷ್ಟು
ಎಣ್ಣೆ – ಕರಿಯಲು

**ಮಾಡುವ ವಿಧಾನ :** ಬೇಯಿಸಿದ ಆಲೂಗಡ್ಡೆಯ ಸಿಪ್ಪೆ ತೆಗೆದು ಪುಡಿಮಾಡಿ. ಇದಕ್ಕೆ ಸಣ್ಣದಾಗಿ ಕತ್ತರಿಸಿದ ಹಸಿಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಟೊಮೆಟೊ ಸಾಸ್, ಸಕ್ಕರೆ, ಉಪ್ಪು ಹಾಕಿ ಕಲೆಸಿ, ಬಾಣಲೆಯಲ್ಲಿ ಎಣ್ಣೆ ಕಾಯಲು ಇಡಿ. ಬ್ರೆಡ್ ಸ್ಲೈಸ್‌ನ ಅಂಚನ್ನು ತೆಗೆದು ಬಿಳಿಭಾಗವನ್ನು ಮಾತ್ರ ಉಳಿಸಿಕೊಳ್ಳಿ. ಬ್ರೆಡ್ ಸ್ಲೈಸ್ ಅನ್ನು ನೀರಿನಲ್ಲಿ ಅದ್ದಿ, ಕೈಯಿಂದ ನೀರನ್ನು ಒತ್ತಿ ತೆಗೆದು ಅದರಲ್ಲಿ ಆಲೂಗಡ್ಡೆ ಮಿಶ್ರಣವನ್ನು ತುಂಬಿ ರೋಲ್ ಮಾಡಿ ಕಾದ ಎಣ್ಣೆಯಲ್ಲಿ ಹೊಂಬಣ್ಣ ಬರುವವರೆಗೂ ಕರಿದರೆ ರುಚಿಯಾದ ಬ್ರೆಡ್ ರೋಲ್ ಸವಿಯಲು ಸಿದ್ಧ.

## ಪನ್ನೀರ್ ಕ್ಯಾಪ್ಸಿಕಂ ರೋಲ್



**ಬೇಕಾಗುವ ಪದಾರ್ಥಗಳು :**
ಪನ್ನೀರ್ – 1 ಕಪ್
ಸಣ್ಣಗೆ ಹೆಚ್ಚಿದ ಕ್ಯಾಪ್ಸಿಕಂ – 1/2 ಕಪ್
ಚಿಲ್ಲಿ ಪೌಡರ್ – 1 ಚಮಚ
ಧನಿಯಾ ಪೌಡರ್ – 1/2 ಚಮಚ
ಗರಂ ಮಸಾಲ – 1/4 ಚಮಚ
ಕೊತ್ತಂಬರಿ ಸೊಪ್ಪು – ಸ್ವಲ್ಪ
ಉಪ್ಪು – ರುಚಿಗೆ ತಕ್ಕಷ್ಟು
ಎಣ್ಣೆ – ಕರಿಯಲು

**ಮಾಡುವ ವಿಧಾನ :** ಮೊದಲು ಬಾಣಲೆಯಲ್ಲಿ ಸ್ವಲ್ಪ ಎಣ್ಣೆ ಹಾಕಿ ಕಾಯಲು ಇಡಿ. ಕಾದ ಎಣ್ಣೆಗೆ ಕತ್ತರಿಸಿದ ಕ್ಯಾಪ್ಸಿಕಂ ಹಾಕಿ ಸ್ವಲ್ಪ ಹೊತ್ತು ಬಾಡಿಸಿ. ಅನಂತರ ಇದಕ್ಕೆ ಪುಡಿ ಮಾಡಿದ ಪನ್ನೀರ್, ಚಿಲ್ಲಿ ಪೌಡರ್, ಧನಿಯಾ ಪೌಡರ್, ಗರಂಮಸಾಲ, ಕತ್ತರಿಸಿದ ಕೊತ್ತಂಬರಿ ಸೊಪ್ಪು, ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ಮಿಕ್ಸ್ ಮಾಡಿ ಕೆಳಗಿಳಿಸಿ. ಆರಿದ ಅನಂತರ ಇದನ್ನು ಮೈದಾ ಪದರದ ಮೇಲೆ ಹರಡಿ ಸುರುಳಿ ಸುತ್ತಿ ಅಂಚನ್ನು ಸರಿಯಾಗಿ ಒತ್ತಿ. ಕಾದ ಎಣ್ಣೆಯಲ್ಲಿ ಹೊಂಬಣ್ಣ ಬರುವವರೆಗೆ ಕರಿದರೆ ರುಚಿಯಾದ ಪನ್ನೀರ್, ಕ್ಯಾಪ್ಸಿಕಂ ರೋಲ್ ಸಿದ್ಧ. ಇದನ್ನು ಟೊಮೆಟೊ ಸಾಸ್ ಜೊತೆ ಸವಿಯಬಹುದು.

## ಸೋಯಾ ರೋಲ್



**ಬೇಕಾಗುವ ಪದಾರ್ಥಗಳು :**
ಸೋಯಾ ಫ್ಲೇಕ್ಸ್ – 1 ಕಪ್
ಶುಂಠಿ ಪೇಸ್ಟ್ – 1/4 ಚಮಚ
ಹಸಿಮೆಣಸಿನಕಾಯಿ – 3
ಚಿಲ್ಲಿ ಪೌಡರ್ – 1/2 ಚಮಚ
ಧನಿಯಾ ಪೌಡರ್ – 1/2 ಚಮಚ
ಗರಂ ಮಸಾಲ – 1/2 ಚಮಚ
ಕೊತ್ತಂಬರಿ ಸೊಪ್ಪು – ಸ್ವಲ್ಪ
ಉಪ್ಪು – ರುಚಿಗೆ ತಕ್ಕಷ್ಟು
ಎಣ್ಣೆ – ಕರಿಯಲು

**ಮಾಡುವ ವಿಧಾನ :** ಮೊದಲು ಸೋಯಾ ಫ್ಲೇಕ್ಸ್ ಅನ್ನು ಚೆನ್ನಾಗಿ ತೊಳೆದು ಅದನ್ನು ಕುಕ್ಕರಿನಲ್ಲಿ ಸ್ವಲ್ಪ ನೀರು, ಉಪ್ಪು ಹಾಕಿ ಎರಡು ಸೀಟಿ ಬರುವಂತೆ ಬೇಯಿಸಿಕೊಳ್ಳಿ. ಒಂದು ಬಾಣಲೆಯಲ್ಲಿ ಎರಡು ಚಮಚ ಎಣ್ಣೆ ಹಾಕಿ ಬಿಸಿಮಾಡಿ. ಕಾದ ಎಣ್ಣೆಗೆ ಕತ್ತರಿಸಿದ ಹಸಿಮೆಣಸಿನಕಾಯಿ, ಶುಂಠಿ ಪೇಸ್ಟ್ ಹಾಕಿ ಬಾಡಿಸಿ. ಅನಂತರ ಚಿಲ್ಲಿ ಪೌಡರ್, ಧನಿಯಾ ಪೌಡರ್, ಗರಂಮಸಾಲ ಸೇರಿಸಿ. ಬೇಯಿಸಿದ ಸೋಯಾ ಫ್ಲೇಕ್ಸ್ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಚೆನ್ನಾಗಿ ಕಲೆಸಿ ಬೇಯಿಸಿ. ಕೊನೆಯದಾಗಿ ಕತ್ತರಿಸಿದ ಕೊತ್ತಂಬರಿ ಸೊಪ್ಪು ಹಾಕಿ ಇಳಿಸಿ. ತಣ್ಣಗಾಗಲು ಬಿಡಿ. ಆರಿದ ಅನಂತರ ಇದನ್ನು ಲಟ್ಟಿಸಿದ ಮೈದಾ ಪದರದ ಮೇಲೆ ಹರಡಿ ಸುರುಳಿ ಸುತ್ತಿ ಕಾದ ಎಣ್ಣೆಯಲ್ಲಿ ಬೇಯಿಸಿದರೆ ರುಚಿಯಾದ ಸೋಯಾಫ್ಲೇಕ್ಸ್ ರೋಲ್ ತಿನ್ನಲು ಸಿದ್ಧ. ಇದನ್ನು ಚಿಲ್ಲಿ ಮತ್ತು ಟೊಮೆಟೊ ಸಾಸ್‌ನೊಂದಿಗೆ ಸವಿಯಬಹುದು. ಇದು ಸ್ವಲ್ಪ ಖಾರವಾಗಿದ್ದರೆ ತಿನ್ನಲು ತುಂಬ ಚೆನ್ನಾಗಿರುತ್ತದೆ. *

# ನೋವು ನಿವಾರಕ ವಿದ್ಯೆ

ಮಾನವ ಜೀವಿಗಳಿಗೆ ಯಾವುದಾದರೂ ಒಂದು ರೀತಿಯ ಶಿಕ್ಷಣದ ಅಗತ್ಯವಿದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ವಿದ್ಯಾರ್ಥಿಗಳನ್ನು ಉದ್ಯೋಗಕ್ಕಾಗಿ ಸಿದ್ಧಪಡಿಸಬೇಕೆಂದು ಕೆಲವು ಶಿಕ್ಷಕರು ಹೇಳುತ್ತಾರೆ. ಜ್ಞಾನದ ಅನ್ವೇಷಣೆಯೇ ಶಿಕ್ಷಣವನ್ನು ಸಾಕಷ್ಟು ಸಮರ್ಥಿಸುತ್ತದೆ ಎಂದು ಇತರರು ಪ್ರತಿಪಾದಿಸುತ್ತಾರೆ. ವ್ಯಕ್ತಿಯ ಔದ್ಯೋಗಿಕ ಶಿಕ್ಷಣ ಅಥವಾ ಜ್ಞಾನ ಶೋಧನೆಯು ಅವನ ಪರಿಚಯವನ್ನು, ಜೀವನದ ಉದ್ದೇಶ, ಭಗವಂತ ಮತ್ತು ವಿಶ್ವದೊಂದಿಗೆ ಅವನ ಬಾಂಧವ್ಯ ಹಾಗೂ ಲೌಕಿಕ ಸಂಕಟಗಳಿಂದ ಮುಕ್ತಿ ಪಡೆಯುವ ಮಾರ್ಗವನ್ನು ತೋರದಿದ್ದರೆ ಅವನು ಇನ್ನು ಏನೇ ಕಲಿತರೂ ಅದು ಸಮಯ ವ್ಯರ್ಥವಷ್ಟೆ.

## ವಿದ್ವಾಂಸ – ಅಂಬಿಗ

ಅನುಚಿತ ಗರ್ವ ತೋರಿದ ವಿದ್ವಾಂಸ ಮತ್ತು ಅಂಬಿಗನ ಘಟನೆಯು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ. ಒಮ್ಮೆ ಒಬ್ಬ ವಿದ್ವಾಂಸನು ನದಿಯನ್ನು ದಾಟಲು ಒಬ್ಬ ದೋಣಿ ನಡೆಸುವವನನ್ನು ನಿಯೋಜಿಸಿಕೊಂಡನು. ಅಂಬಿಗನು ಅಶಿಕ್ಷಿತ ಎನ್ನುವುದನ್ನು ಗಮನಿಸಿದ ಆ ವಿದ್ವಾಂಸನು ತನ್ನ ಜ್ಞಾನವನ್ನು ಪ್ರದರ್ಶಿಸಲಾರಂಭಿಸಿದ ಮತ್ತು ಅದೇ ವೇಳೆ ಅಂಬಿಗನನ್ನು ಟೀಕಿಸತೊಡಗಿದ.

ಆ ವಿದ್ವಾಂಸನು ಹೇಳಿದ, “ಅಂಬಿಗನೇ, ನೋಡು, ಆಕಾಶದಲ್ಲಿ ಮೊದಲ ತಾರೆಗಳು ಕಾಣತೊಡಗಿವೆ. ಗ್ರಹಗಳು ಮತ್ತು ತಾರೆಗಳು ಒಂದು ಪ್ರಮಾಣದಲ್ಲಿ ಅಕ್ಕಪಕ್ಕ ಬರುವ ಅದ್ಭುತವಾದ ದೃಶ್ಯವನ್ನು ನಾವು ನೋಡಬಹುದು. ನಿನಗೆ ಖಗೋಳ ವಿಜ್ಞಾನ ಗೊತ್ತೇ?”



ಅಂಬಿಗನು ಉತ್ತರಿಸಿದ, “ಇಲ್ಲ, ಸ್ವಾಮಿ.” ತನಗೆ ದೋಣಿ ನಡೆಸುವುದನ್ನು ಬಿಟ್ಟು ಬೇರೇನೂ ತಿಳಿಯದು ಎಂದು ಅವನು ಹೇಳಿದ.

ವಿದ್ವಾಂಸ ಆಶ್ಚರ್ಯದಿಂದ ಹೇಳಿದ, “ಏನು, ನಿನಗೆ ಖಗೋಳ ವಿಜ್ಞಾನ ಗೊತ್ತಿಲ್ಲವೇ? ಅದೃಷ್ಟಹೀನನೇ! ನಿನ್ನ ಬದುಕು ಶೇಕಡ 25ರಷ್ಟು ವ್ಯರ್ಥವಾಗಿ ಹೋಯಿತು.”

ಸ್ವಲ್ಪ ಸಮಯ ಕಳೆಯಿತು. ವಿದ್ವಾಂಸನು ತನ್ನ ಸುತ್ತಮುತ್ತಲಿನ ಭೂಮಿಯನ್ನು ಕುರಿತು ಮಾತನಾಡಲಾರಂಭಿಸಿದ. ತನಗೆ ಭೂ ವಿಜ್ಞಾನ ಚೆನ್ನಾಗಿ ಗೊತ್ತು ಎಂದು ಅವನು ಜಂಭದಿಂದ ನುಡಿದ. “ನಿನಗೆ ಭೂ ವಿಜ್ಞಾನ ಗೊತ್ತೇ?” ಎಂದು ವಿದ್ವಾಂಸನು ಕೇಳಿದಾಗ ಅಂಬಿಗನು ತನಗೆ ತಿಳಿಯದೆಂದು ಉತ್ತರಿಸಿದ. “ಹಾಗಾದರೆ ನಿನ್ನ ಬದುಕಿನ ಶೇಕಡ 50 ಭಾಗ ವ್ಯರ್ಥವಾಗಿ ಹೋಯಿತು” ಎಂದು ವಿದ್ವಾಂಸನು ಘೋಷಿಸಿದ. ಅನಂತರ ವಿದ್ವಾಂಸನು ಮನೋ ವಿಜ್ಞಾನದ ಬಗೆಗೆ ಮಾತನಾಡಿದ. ಅದರ ಬಗೆಗೆ ತನಗೇನೂ ತಿಳಿಯದೆಂದು ಅಂಬಿಗನು ಹೇಳಿದಾಗ, ವಿದ್ವಾಂಸನು, “ನಿನ್ನ ಬದುಕಿನ ಶೇಕಡ 75 ಭಾಗ ವ್ಯರ್ಥವಾಯಿತು” ಎಂದು ಸಾರಿದ.

ದಿಢೀರನೆ ಕಪ್ಪು ಮೋಡಗಳು ಮಳೆಯನ್ನು ಸುರಿಸಲಾರಂಭಿಸಿದವು. ಅನಂತರ ಬಿರುಗಾಳಿಯು ಸಣ್ಣ ದೋಣಿಯನ್ನು ಅಲ್ಲಾಡಿಸಿತು. ಕೆಲವೇ ನಿಮಿಷಗಳಲ್ಲಿ ಬಿರುಗಾಳಿಯು ಎಷ್ಟು ತೀವ್ರವಾಯಿತೆಂದರೆ ಅಲೆಗಳು ದೋಣಿಯ ಎರಡೂ ಬದಿಗಳಲ್ಲಿ ಅಪ್ಪಳಿಸಿದವು. ತಾವು ದೋಣಿಯನ್ನು ಬಿಟ್ಟು ಹೊರಡಬೇಕೆಂದು ಅಂಬಿಗನಿಗೆ ಅರಿವಾಯಿತು. ಅವನು ವಿದ್ವಾಂಸನತ್ತ ತಿರುಗಿ ಹೇಳಿದ, “ಸ್ವಾಮಿ, ಈ ದೋಣಿಯಲ್ಲಿ ಇನ್ನು ಸಾಗಲಾಗದು. ನಾವು ಈಜಿಕೊಂಡು ಹೋಗಬೇಕು. ನಿಮಗೆ ಈಜಲು ಬರುತ್ತದೆಯೇ?”

ಆದರೆ ವಿದ್ವಾಂಸನು ಉತ್ತರಿಸಿದ, “ನನಗೆ ಈಜಲು ಬರುವುದಿಲ್ಲ.”

ಅಂಬಿಗನು ನುಡಿದ, “ಸ್ವಾಮಿ, ನಿಮ್ಮ ಬದುಕಿನ ಶೇಕಡ 100 ಭಾಗ ವ್ಯರ್ಥವಾಯಿತು!” ಅನಂತರ ಅವನು ನದಿಗೆ ಹಾರಿದ ಮತ್ತು ಈಜಿಕೊಂಡು ಹೋದ. ಆದರೆ ವಿದ್ವಾಂಸನು ನದಿಯಲ್ಲಿ ಮುಳುಗಿಹೋದ.

ಈ ರೀತಿ ಒಬ್ಬನು ತಾನು ವಿದ್ಯಾವಂತನೆಂದು ನಟಿಸಿದರೂ ಬದುಕಿನ ಸಂಕಟಗಳಿಂದ ಮತ್ತು ಕೊನೆಗೆ ಸಾವಿನಿಂದ ತನ್ನನ್ನು

ಕಾಪಾಡಿಕೊಳ್ಳುವುದು ಸಾಧ್ಯವಾಗದಿದ್ದರೆ ಅವನ ಶಿಕ್ಷಣವು ವ್ಯರ್ಥ. ತನ್ನ ಬದುಕಿನ ಗೊಂದಲ, ನೋವುಗಳನ್ನು ನಿವಾರಿಸಿಕೊಳ್ಳಲು ತನ್ನ ಮಾನವ ಜೀವನವನ್ನು ಬಳಸಿಕೊಳ್ಳದ ಕೃಪಣ ಅಥವಾ ಜಿಪುಣ ಮಾನವ ಜೀವಿಯ ಬಗೆಗೆ ವೈದಿಕ ಸಾಹಿತ್ಯವು ಪ್ರಸ್ತಾಪಿಸುತ್ತದೆ. ಗರ್ಗ ಉಪನಿಷತ್ ಹೇಳುತ್ತದೆ, "ಅವನು ಬದುಕಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳದೆ ಮತ್ತು ಆತ್ಮ ಸಾಕ್ಷಾತ್ಕಾರ ವಿಜ್ಞಾನವನ್ನು ಅರ್ಥಮಾಡಿಕೊಳ್ಳದೆ ಬೆಕ್ಕು ಮತ್ತು ನಾಯಿಗಳಂತೆ ಈ ಲೋಕವನ್ನು ತ್ಯಜಿಸುವ ಜಿಪುಣ." ಜ್ಞಾನೋದಯವಾಗುವುದರಲ್ಲಿ ಮತ್ತು ಬದುಕಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದರಲ್ಲಿ ನಿಜವಾದ ಸಂಪತ್ತು ಅಡಗಿದೆ. ಈ ಅವಕಾಶವನ್ನು ಕಳೆದುಕೊಳ್ಳುವ ಅಥವಾ ನಿರ್ಲಕ್ಷಿಸುವ ಶಿಕ್ಷಣವನ್ನು ಮಾನವ ಜಾತಿಗಿಂತ ಕೀಳು ಎಂದು ಪರಿಗಣಿಸಬೇಕು.



## ಸಮಸ್ಯೆ ಎದುರಿಸುವುದು

ಹಾಗಾದರೆ ಅಸ್ತಿತ್ವದ ಸಮಸ್ಯೆಗಳಾವುವು? ಮೊದಲನೆಯದಾಗಿ ನಾಲ್ಕು ಸುತ್ತಿನ ಸಂಕಟಗಳಿವೆ: ಹುಟ್ಟು, ಸಾವು, ರೋಗ ಮತ್ತು ವೃದ್ಧಾಪ್ಯ. ಕ್ರಿಮಿ ಕೀಟಗಳು ಮತ್ತು ಮಾನವ ಶತ್ರುಗಳಂತಹ ಇತರ ಜೀವಿಗಳಿಂದ ಉಂಟಾಗುವ ನೋವು; ಮಾನಸಿಕ ಆತಂಕ, ಅಜೀರ್ಣ ಮತ್ತು ಅವಯವಗಳ ಮುರಿಯುವಿಕೆಯಂತಹ ನಮ್ಮ ದೇಹ ಪ್ರಕೃತಿಯಿಂದ ಉಂಟಾಗುವ ನೋವು; ಭೂಕಂಪನ, ಬರ ಮತ್ತು ಪ್ರವಾಹಗಳಂತಹ ಮಾನವ ಹತೋಟಿಯನ್ನು ಮೀರಿದ ನೈಸರ್ಗಿಕ ವಿಪತ್ತುಗಳಿಂದ ಉಂಟಾಗುವ ನೋವು. ನಮ್ಮ ಶಿಕ್ಷಣವು ಫಲಪ್ರದವಾಗಬೇಕಾದರೆ, ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಅದು ನಮಗೆ ಸಹಾಯ ಮಾಡಬೇಕು.

ಮಾನವ ಜೀವನವು ನೋವುಗಳಿಂದ ಮುಕ್ತವಾಗಿರಬೇಕು ಎನ್ನುವ ನಮ್ಮ ಕಲ್ಪನೆಯನ್ನು ಕೆಲವರು ಆಕ್ಷೇಪಿಸುತ್ತಾರೆ. ಸಂಕಷ್ಟಗಳು ಮಾನವನಿಗೆ ಸಹಜವಾದವು ಎಂದು ಹೇಳುವ ಕೆಲವರು, ನಾವು ನೋವು ಅನುಭವಿಸಲೆಂದೇ ಇರುವುದು ಎಂದು ವಾದಿಸುತ್ತಾರೆ. ಏನಾದರಾಗಲಿ, ಎಲ್ಲ ಜಾತಿ, ವರ್ಗಗಳ ಜೀವಿಗಳಿಗೆ ನೋವನ್ನು ತಪ್ಪಿಸಿಕೊಂಡು ಸುಖವಾಗಿರಬೇಕು ಎನ್ನುವ ಅಪೇಕ್ಷೆ ಉಂಟು. ಯಾರೂ ಕೂಡ ಸಂಕಷ್ಟವನ್ನು ಸಹಜವಾಗಿ ಸ್ವೀಕರಿಸುವುದಿಲ್ಲ. ನೋವು ಅನಿವಾರ್ಯ ಇರಬಹುದು, ಆದರೂ ತತ್ತ್ವಜ್ಞಾನಿಗಳು, ಮಾನವತಾವಾದಿಗಳು ಮತ್ತು ರಾಜಕಾರಣಿಗಳು ಇದಕ್ಕೆ ಪರಿಹಾರವನ್ನು ಹುಡುಕುತ್ತಾರೆ. ಮಾನವ ಜೀವಿಗಳಷ್ಟೇ ಅಲ್ಲ, ಇರುವೆ ಕೂಡ ಹತ್ಯೆಯನ್ನು ಪ್ರತಿರೋಧಿಸುತ್ತದೆ. ವೃದ್ಧಾಪ್ಯದೊಂದಿಗೆ ಹೀನಸ್ಥಿತಿಗೆ ಬರಲು ಕಾತರದಿಂದ ಇರುವಿರಾ ಎಂದು ಯಾರನ್ನಾದರೂ ಕೇಳಿ. ಪ್ರಾಮಾಣಿಕವಾಗಿ ಹೇಳಬೇಕೆಂದರೆ, ಯಾರೂ ಕೂಡ ಇಲ್ಲ ಎನ್ನಬೇಕು. ರೋಗ ಅಥವಾ ಸಾವಿನ ಕುರಿತು ಏನು? ಈ ಕ್ಷಣದಲ್ಲಿ ಸಾಯಲು ಯಾರಿಗಾದರೂ ಇಷ್ಟವಿರುತ್ತದೆಯೇ? "ಇಲ್ಲ, ವಂದನೆಗಳು." ಕೆಲವು ಬಾರಿ ಜನರು ಇಂದ್ರಿಯ ಸುಖದ ಮೂಲಕ ನೋವಿಗೆ ತಡೆಹಾಕಲು ಪ್ರಯತ್ನಿಸುತ್ತಾರೆ. ಉದಾಹರಣೆಗೆ, ಮಾದಕ ದ್ರವ್ಯ ಅಥವಾ ಮದ್ಯದ ಮೂಲಕ ತಮ್ಮ ಆತಂಕಗಳನ್ನು ತಾತ್ಕಾಲಿಕವಾಗಿ ಮರೆಯಲು ಪ್ರಯತ್ನಿಸುತ್ತಾರೆ. ಆದರೆ ಅಮಲು ಇಳಿದ ಮೇಲೆ ಆತಂಕಗಳು ಮರಳುತ್ತವೆ.

ಹುಟ್ಟು, ಸಾವು ವೃದ್ಧಾಪ್ಯ ಮತ್ತು ರೋಗಗಳ ನೋವನ್ನು ಜಯಿಸದ ವ್ಯಕ್ತಿಯು ತಾನು ಸುಖವಾಗಿದ್ದೇನೆ ಮತ್ತು ತೃಪ್ತನಾಗಿದ್ದೇನೆ ಎಂದು ಹೇಳಿಕೊಂಡರೆ ಅದು ಆತ್ಮ ವಂಚನೆಯಷ್ಟೆ. ಉದಾಹರಣೆಗೆ, ಆಸ್ಪತ್ರೆಯಲ್ಲಿರುವ ಸ್ನೇಹಿತನನ್ನು ನೋಡಲು ನಾವು ಹೋಗುತ್ತೇವೆ. ಅವನ ಕಾಲನ್ನು ಮೇಲಕ್ಕೆ ಎತ್ತಿ ಕಟ್ಟಿರುತ್ತಾರೆ, ನರ್ಸ್ ಬೆಡ್ ಪ್ಯಾನ್ ತರದಿದ್ದರೆ ಅವನಿಗೆ ಮೂತ್ರ ವಿಸರ್ಜನೆ ಕೂಡ ಕಷ್ಟ, ಅವನಿಗೆ ಕ್ರಮವಾಗಿ ಚುಚ್ಚು ಮದ್ದುಗಳನ್ನು ನೀಡಬೇಕು ಮತ್ತು ಅವನಿಗೆ ಗಟ್ಟಿ ಆಹಾರ ಸೇವನೆ ಕಷ್ಟವಾಗಿರುತ್ತದೆ. ಅವನು ಹೇಗಿದ್ದಾನೆಂದು ಕೇಳಿದಾಗ "ನಾನು ಚೆನ್ನಾಗಿದ್ದೇನೆ" ಎಂದು ಅವನು ಉತ್ತರಿಸುತ್ತಾನೆ. "ಚೆನ್ನಾಗಿದ್ದೇನೆ" ಎಂದರೆ ಏನು ಎಂದು ನಾವು ಕೇಳಬಹುದು. ಅಷ್ಟೊಂದು ನೋವುಗಳ ಮಧ್ಯೆ ಅವನು ತಾನು ಚೆನ್ನಾಗಿದ್ದೇನೆ ಎಂದು ಹೇಗೆ ಭಾವಿಸುವುದು ಸಾಧ್ಯ? ಯೋಗ ಕ್ಷೇಮ ಮತ್ತು ತೃಪ್ತಿಯ ಅಂತಹ ಭ್ರಮೆಯು ಕೆಳ ವರ್ಗದ ಪ್ರಾಣಿಗಳಲ್ಲಿ ಸಾಮಾನ್ಯ. ಉದಾಹರಣೆಗೆ, ಪಶು ಮತ್ತು ಕೋಳಿಗಳ ಮಾಲೀಕನು ಅವುಗಳನ್ನು ವಧಿಸಲೆಂದೇ ಆಹಾರ ಪೂರೈಸಿದರೂ ಅವು ಸಂತೃಪ್ತವಾಗಿ ಹುಲ್ಲು ಮತ್ತು ಕಾಳುಗಳನ್ನು ತಿನ್ನುತ್ತವೆ. ಆದರೆ ಮಾನವ ಜೀವಿಯು ಸಂಕಟವಾಗುವುದನ್ನು ಸಹಿಸಿಕೊಳ್ಳುವುದಿಲ್ಲ. ಅವನು ಪ್ರತಿಭಟಿಸುತ್ತಾನೆ ಅಥವಾ ಪರಿಹಾರ ಹುಡುಕುತ್ತಾನೆ.

ನೋವನ್ನು ಕುರಿತು ಚಿಂತಿಸುವುದಲ್ಲ, ಇಂದ್ರಿಯ

ಸುಖವನ್ನು ಅನುಭವಿಸುತ್ತ ಹೋಗುವುದೇ ಪರಿಹಾರ ಎಂದು ಭೋಗವಾದಿಗಳು ಹೇಳುತ್ತಾರೆ. ಆದರೆ ದುರದೃಷ್ಟವಶಾತ್ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅವರ ಸುಖಕ್ಕೆ ಅಡಚಣೆ ಉಂಟಾಗುತ್ತದೆ. ತಿನ್ನಲು ಸ್ವಾದಿಷ್ಟವಾದ ಆಹಾರವಿರಬಹುದು. ಆದರೆ ಅದಕ್ಕೆ ಮರಳು ಬೆರೆಸಿದ್ದರೆ ಆ ತಿನಿಸನ್ನು ಆನಂದಿಸುವುದು ಸಾಧ್ಯವಿಲ್ಲ. ಆ ತಿನಿಸಿನ ರುಚಿ ಹಾಗೇ ಇದ್ದರೂ ಮರಳು ಹಲ್ಲುಗಳಲ್ಲಿ ಅಂಟಿಕೊಂಡು ಆನಂದವನ್ನು ತಡೆಯುತ್ತದೆ. ಅದೇ ರೀತಿ ಭೌತಿಕ ಲೋಕದ ಎಲ್ಲ ಸುಖವನ್ನೂ ಲೌಕಿಕ ಜೀವನದ ನೋವುಗಳು ತಡೆಯುತ್ತವೆ. ಆದರೆ ಎಲ್ಲ ಸಂಕಷ್ಟಗಳಿದ್ದರೂ ವ್ಯಕ್ತಿಯು ಲೌಕಿಕ ಸುಖವನ್ನು ಅನುಭವಿಸಲು, ಮರಳು ಮಿಶ್ರಿತ ಸಿಹಿ ತಿನಿಸನ್ನು ತಿನ್ನಲು ನಿರ್ಧರಿಸಿದ್ದರೆ ಆಗಲೂ ಕೂಡ ಅದು ಸಾಧ್ಯವಿಲ್ಲ. ಯಾರಿಗೂ ಇಲ್ಲೇ ಇರಲು ಅವಕಾಶವಿಲ್ಲ. ಇಲ್ಲೇ ಮನೆ ಮಾಡಿ ಕೊಂಡು ಸುಖವಾಗಿರಲು ನಮಗೆ ಇಷ್ಟವಿದ್ದರೂ ಸಾವು ನಮ್ಮನ್ನು ಇಲ್ಲಿಂದ ಓಡಿಸುತ್ತದೆ. ಇದಕ್ಕೆ ಯಾವುದೇ ವಿನಾಯಿತಿಗಳಿಲ್ಲ. ಪ್ರತಿಯೊಬ್ಬರೂ ನಿರ್ಗಮಿಸುವುದು ಕಡ್ಡಾಯ.

ಆದುದರಿಂದ ಮಾನವ ಜೀವನದ ಸೌಲಭ್ಯಗಳಿಂದ ವ್ಯಕ್ತಿಯು ತನ್ನ ನೋವುಗಳಿಗೆ ಅಂತಿಮ ಪರಿಹಾರ ಕಂಡುಕೊಳ್ಳಬೇಕು. ಆದರೂ ನೋವನ್ನು ತಡೆಯುವುದು ಸಾಧ್ಯವೇ ಇಲ್ಲ ಎಂದು ಯಾರಾದರೂ ಆಕ್ಷೇಪಿಸಬಹುದು. ಖ್ಯಾತ ಚಿತ್ರ ಕಲಾವಿದ ವ್ಯಾನ್ ಗೋ ಒಮ್ಮೆ ಪತ್ರವೊಂದರಲ್ಲಿ ಬರೆದಿದ್ದರು, "ನೋವು ಶಾಶ್ವತ." ನಾವು ಇಲ್ಲಿ ವಿವರಿಸುವಂತೆ ಸಮಸ್ಯೆಗೆ ಪರಿಹಾರ ನಮ್ಮ ಕೈಯಲ್ಲೇ ಇದೆ. ಅದಕ್ಕಾಗಿ ನಾವು ಸಮಸ್ಯೆ ನಿವಾರಣೆಗೆ ಕೈಹಾಕಬೇಕು ಮತ್ತು ಸೂಕ್ತವಾದ ಶಿಕ್ಷಣವನ್ನು ಪಡೆಯಬೇಕು.

## ಗಣ್ಯರಿಂದ ಭ್ರಮ ನಿರಸನ

ಶ್ರೇಷ್ಠ ಲೇಖಕರ, ವಿಜ್ಞಾನಿಗಳ ಮತ್ತು ಕಲಾವಿದರ ಕೃತಿ ಅಥವಾ ಕಾರ್ಯಗಳನ್ನು ನಾವು ಪರಿಶೀಲಿಸಿದರೆ, ಈ ಸಂಕಷ್ಟಗಳನ್ನು ಗೆಲ್ಲಲು ನಮಗೆ ಅವರು ಸಹಾಯ ಮಾಡುತ್ತಾರೆ ಎಂದು ನಾವು ಯೋಚಿಸಬೇಕು. ಆದರೆ ನಾವು ನಮ್ಮ ಶ್ರೇಷ್ಠ ಚಿಂತಕರನ್ನು ವಿಚಾರಿಸುತ್ತಿದ್ದಂತೆಯೇ ಅವರ ಬಳಿ ಪರಿಹಾರವಿಲ್ಲ ಎನ್ನುವುದನ್ನು ನಾವು ಕಂಡುಕೊಳ್ಳುತ್ತೇವೆ. ಸೊಕ್ರೆಟೀಸ್, ಶೇಕ್ಸ್‌ಪಿಯರ್, ಫ್ರಾಯ್ಡ್ ಅಥವಾ ಇತ್ತೀಚಿನ ನೊಬೆಲ್ ಬಹುಮಾನಿತರು ತಮ್ಮ ಕ್ಷೇತ್ರಗಳಲ್ಲಿ ದಿಗ್ಗಜರಾಗಿರಬಹುದು, ಆದರೆ ಅವರ ಕೃತಿಗಳನ್ನು ಓದುವುದರಿಂದ ಯಾರನ್ನೂ ವೃದ್ಧಾಪ್ಯ ಅಥವಾ ಸಾವಿನಿಂದ ಮುಕ್ತಗೊಳಿಸುವುದು ಸಾಧ್ಯವಿಲ್ಲ. ನಿಜ, ಭವಿಷ್ಯದಲ್ಲಿ ತಾವೇನು ಮಾಡಬಹುದೆನ್ನುವುದಕ್ಕೆ ವಿಜ್ಞಾನಿಗಳು ಪ್ರಸಿದ್ಧರು. ವೃದ್ಧಾಪ್ಯ ತಜ್ಞರೆಂದು ಕರೆಯಲ್ಪಡುವವರು ವೃದ್ಧಾಪ್ಯ ಮತ್ತು ಸಾವನ್ನು ಹೇಗೆ ತಡೆಯಬಹುದು ಎನ್ನುವುದನ್ನು ಕಂಡುಹಿಡಿಯುವ ಸಮೀಪದಲ್ಲಿದ್ದೇವೆ, ಅಂಚಿನಲ್ಲಿದ್ದೇವೆ ಎಂದು ಪ್ರಕಟಿಸುತ್ತಾರೆ. ಆದರೆ ನ್ಯೂಸ್‌ವೀಕ್‌ನ ವರದಿಯ ಪ್ರಕಾರ "ಅವರು ಯೌವನದ ಪರಮೌಷಧವನ್ನು ಹೋಲುವ ಯಾವುದನ್ನೂ ಕೂಡ ಇನ್ನೂ ಕಂಡುಹಿಡಿದಿಲ್ಲ." ಏನೇ ಆಗಲಿ, ಯಾರಾದರೂ ಸಾಹಸಿ ವಿಜ್ಞಾನಿಯು ನಮ್ಮನ್ನು ನಮ್ಮ ಸಮಸ್ಯೆಗಳಿಂದ ಪಾರುಮಾಡಿದರೂ ಹುಟ್ಟು, ಸಾವು, ವೃದ್ಧಾಪ್ಯ ಮತ್ತು ರೋಗಗಳ ಸಂಕಷ್ಟಗಳಿಗೆ ಪರಿಹಾರವೇ ಇಲ್ಲ. ಯಾರಿಗೂ ಅದು ಬೇಕಾಗಿಲ್ಲ. ಆದರೆ ಯಾರೂ ಕೂಡ ಅದರಿಂದ ಮುಕ್ತರಲ್ಲ.

ಈ ಭೌತಿಕ ಲೋಕದಲ್ಲಿ ಹುಟ್ಟಿರುವ ಎಲ್ಲರೂ ನಾಲ್ಕು ಮೂಲ ಅಪರಿಪೂರ್ಣತೆಗಳಿಗೆ ಒಳಪಟ್ಟಿರುವುದರಿಂದ ಮಾನವ ಕುಲದ ಶ್ರೇಷ್ಠ ವಿಜ್ಞಾನಿಗಳು ಮತ್ತು ತತ್ತ್ವಜ್ಞಾನಿಗಳೂ ಕೂಡ ಬದುಕಿನ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲ. ಮೊದಲನೆಯದಾಗಿ ನಾವು ತಪ್ಪು ಮಾಡುವ ಪ್ರವೃತ್ತಿ ಹೊಂದಿದ್ದೇವೆ. "ತಪ್ಪೆಸಗುವುದು ಮಾನವ ಸಹಜ." ಭಾರತದಲ್ಲಿ, ಉದಾಹರಣೆಗೆ, ಗಾಂಧೀಜಿಯವರು ಶ್ರೇಷ್ಠ ವ್ಯಕ್ತಿಯಾಗಿದ್ದರು. ಆದರೆ ಅವರೂ ಕೂಡ ತಪ್ಪುಗಳನ್ನು ಮಾಡಿದರು. ಅವರು ಹತ್ಯೆಗೀಡಾದ ಸಭೆಗೆ ಬರುವ ಕೆಲವೇ ನಿಮಿಷಗಳ ಮುನ್ನ ಅವರ ಆಪ್ತರು ಹೋಗುವುದು ಬೇಡ ಎಂದು ಸಲಹೆ ಮಾಡಿದರು. ಆದರೆ ಅವರು ಪಟ್ಟು ಹಿಡಿದರು. ಮತ್ತೊಂದು ಅಪರಿಪೂರ್ಣತೆ ಎಂದರೆ ಒಂದಕ್ಕೊಂದನ್ನು ತಪ್ಪಾಗಿ ತಿಳಿದು ಭ್ರಮೆಯ ಸೆಳೆತಕ್ಕೆ ಸಿಲುಕುತ್ತೇವೆ. ನಾವು ಮೋಸ, ವಂಚನೆ ಮಾಡುವ ಪ್ರವೃತ್ತಿ ಉಳ್ಳವರಾಗಿರುವುದರಿಂದ ಅದೂ ಒಂದು ಅಪರಿಪೂರ್ಣತೆ. ಉದಾಹರಣೆಗೆ, ಕೆಲವು ಬಾರಿ ನಾನು ತಪ್ಪು ಮಾಡುತ್ತೇನೆ ಮತ್ತು ಕೆಲವು ಬಾರಿ ಭ್ರಮಾಧೀನನಾಗುತ್ತೇನೆ ಎನ್ನುವುದನ್ನು ನಾನು ಒಪ್ಪಿಕೊಳ್ಳಬೇಕು. ಆದರೂ ನಾನು ನಿಜವೆಂದು ಹೇಳುತ್ತ ಪುಸ್ತಕವನ್ನು ಬರೆದರೆ ಅದು ವಂಚನೆಯಲ್ಲವೇ? ಅಷ್ಟೊಂದು ಅಪರಿಪೂರ್ಣರಾಗಿರುವವರು ಶಿಕ್ಷಕರೆಂದು ಹೇಗೆ ಹೇಳಿಕೊಳ್ಳುತ್ತಾರೆ? ನಮಗೆ ಸೀಮಿತವಾದ ಇಂದ್ರಿಯಗಳಿರುವುದು ಮತ್ತೊಂದು ಅಪರಿಪೂರ್ಣತೆ. ನಮ್ಮ ಸೀಮಿತ ಕಿವಿಗಳಿಂದ ನಾವು ನಿರ್ದಿಷ್ಟ ಧ್ವನಿ ಪ್ರಮಾಣವನ್ನು ಮಾತ್ರ ಕೇಳುತ್ತೇವೆ. ನಮ್ಮ ಕಣ್ಣುಗಳಿಂದ ನಾವು ಆಕಾಶದಲ್ಲಿನ ಬೃಹತ್ ಸೂರ್ಯನನ್ನು ರೂಪಾಯಿ ನಾಣ್ಯಕ್ಕಿಂತ ದೊಡ್ಡದಲ್ಲವೆಂದು ವೀಕ್ಷಿಸುತ್ತೇವೆ. ಪ್ರತಿಯೊಬ್ಬರ ಮೇಲೆಯೂ ಹೇರಿರುವ ಲೌಕಿಕ ಪ್ರಕೃತಿಯ ಈ ನಿರ್ಬಂಧಗಳು ಮಾನವನಿಗೆ ಅವನ ಜ್ಞಾನವನ್ನು ಸೀಮಿತಗೊಳಿಸಿವೆ.

## ಪರಿಪೂರ್ಣ ಜ್ಞಾನ

ಆದರೆ ನೋವಿನಿಂದ ನಮ್ಮನ್ನು ಮುಕ್ತಗೊಳಿಸುವ ಪರಿಪೂರ್ಣ ಜ್ಞಾನವು ಪರಿಪೂರ್ಣ ಮೂಲದಿಂದ ನಮಗೆ ಲಭ್ಯವಿದೆ. ಅಪರಿಪೂರ್ಣ ಬದ್ಧಜೀವಿಗಳು ನುಡಿಯುವ ಜ್ಞಾನಕ್ಕಿಂತ ಭಗವಂತನ ನುಡಿಯು ಪರಿಪೂರ್ಣ ಮತ್ತು ದೋಷಮುಕ್ತ. ಅಲ್ಲಿ ಪರಮ ಜ್ಞಾನಿ ಇದ್ದಾನೆ. ಮಾನವ ಕುಲವನ್ನು ಕುರಿತಂತೆ ಅವನ ಉದ್ದೇಶಗಳು ಪ್ರೀತಿಯುತ. ಪರಮ ಸೃಷ್ಟಿಕರ್ತನಾಗಿ ಅವನು ನೋವಿನಿಂದ ಪರಮ ಮುಕ್ತಿಗೆ ಜ್ಞಾನವನ್ನು ನೀಡುತ್ತಾನೆ.

ಪರಮ ದೇವರು ಎನ್ನುವುದಿಲ್ಲ ಎಂದು ನಾಸ್ತಿಕರು ವಾದಿಸುತ್ತಾರೆ. ಆದರೆ ವಿಶ್ವ, ಗ್ರಹಗಳು ಮತ್ತು ಮಾನವ ಜೀವಿಗಳ ಬೃಹತ್ ಬ್ರಹ್ಮಾಂಡವು ಹೇಗೆ ಅಸ್ತಿತ್ವಕ್ಕೆ ಬಂದವು ಎನ್ನುವುದನ್ನು ವಿವರಿಸಲು ಅವರಿಗೆ ಸಾಧ್ಯವಿಲ್ಲ. ಪುಣ್ಯಜೀವಿಗಳು ಭಗವಂತನು



ಗಗನದಲ್ಲಿ ತೇಲುವುದಕ್ಕೆ ಸಾಧ್ಯವಾಗುವ ಮತ್ತು ಗ್ರಹಿಸಲಾಗದ ದೈವೀ ಶಕ್ತಿಯನ್ನು ಕುರಿತಂತೆ ಸಮಾನಾರ್ಥಕವಾಗುವುದೂ ಇಲ್ಲ. ದಿಟವಾಗಿ, ಬ್ರಹ್ಮಾಂಡದಲ್ಲಿ ನಿಯಮಗಳನ್ನು ವೀಕ್ಷಿಸುವುದು ಎಂದರೆ ಅವುಗಳ ಹಿಂದೆ ನಿಯಮ ಸೃಷ್ಟಿಸಿದವನೂ ಇದ್ದಾನೆ ಎಂದು ಅರ್ಥ. ಹೀಗೆ ದೇವರಲ್ಲಿ – ಪರಮ ನಿಯಾಮಕ, ಪರಮ ಜ್ಞಾನದ ಅಸ್ತಿತ್ವದಲ್ಲಿ ನಂಬಿಕೆ ಪ್ರಾರಂಭವಾಗುತ್ತದೆ. ಅವನೊಬ್ಬನೇ ಸಂಕಷ್ಟದಿಂದ ಪಾರಾಗುವ ಆತ್ಯಂತಿಕ ಜ್ಞಾನವನ್ನು ನೀಡಬಲ್ಲನು.

ಭಗವಂತನ ಮಾತುಗಳಾದ (**ಅಪೌರುಷೇಯ**) ಧರ್ಮಗ್ರಂಥಗಳಲ್ಲಿ ಅವನ ಅಲೌಕಿಕ ಸ್ವರೂಪವನ್ನು ನಿರೂಪಿಸಲಾಗಿದೆ. ಮೂಲ ಧರ್ಮಗ್ರಂಥವನ್ನು **ವೇದ** (**ವೇದ** ಎಂದರೆ ಜ್ಞಾನ) ಎಂದು ಕರೆಯುತ್ತಾರೆ. ಭಗವಂತನು ಲೌಕಿಕ ಲೋಕದ ನೋವುಗಳಿಂದ ಮುಕ್ತರಾಗುವುದು ಹೇಗೆ ಎನ್ನುವುದನ್ನು ಎಲ್ಲ ಜೀವಿಗಳ ಉಪಯೋಗಕ್ಕಾಗಿ ಅರುಹಿದ್ದಾನೆ ಮತ್ತು ಗುರು ಪರಂಪರೆಯ ಆಧ್ಯಾತ್ಮಿಕ ಗುರುಗಳು ಅದನ್ನು ನಮಗೆ ತಿಳಿಯಪಡಿಸಿದ್ದಾರೆ. ಅಂತಹ ಜ್ಞಾನವನ್ನು **ಅಪೌರುಷೇಯ** ಎನ್ನುತ್ತಾರೆ. ಅಂದರೆ ಅದು ಈ ಲೋಕದ ಅಪರಿಪೂರ್ಣ ವ್ಯಕ್ತಿಗಳಿಂದಲ್ಲ, ದೋಷವಿಲ್ಲದ ಭಗವಂತನಿಂದ ಬರುತ್ತದೆ ಎಂದು ಅರ್ಥ. ಪರಮ ನಿಯಂತ್ರಕ, ಪ್ರತಿಯೊಂದೂ ಯಾರಿಂದ ಹೊರಹೊಮ್ಮುತ್ತದೋ ಆ ಬುದ್ಧಿಜೀವಿಯನ್ನು ವೈದಿಕ ಸಾಹಿತ್ಯದಲ್ಲಿ ಕೃಷ್ಣ ಎನ್ನುತ್ತಾರೆ. **ಕೃಷ್ಣ** ಎಂದರೆ "ಸರ್ವಾಕರ್ಷಕ" ಎಂದು ಅರ್ಥ.

ಸೃಷ್ಟಿಕರ್ತ ಎಂದು ಒಪ್ಪಿಕೊಳ್ಳುತ್ತಾರೆ. ಆದರೆ ನಾಸ್ತಿಕರು ಊಹಿಸುತ್ತಾರೆ. ಏನೆಂದು? ಸ್ವಾಭಾವಿಕ ದಹನ ಕ್ರಿಯೆ, ಆಕಸ್ಮಿಕ ರಾಸಾಯನಿಕ ಮತ್ತು ಲೈಂಗಿಕ ಸಂಯೋಜನೆಗಳು, ಅಂಧ ವಿಕಸನ ಇತ್ಯಾದಿಗಳ ಮೂಲಕ ಎಲ್ಲವೂ ಸ್ವಯಂ ಸೃಷ್ಟಿಗೊಂಡಿವೆ ಎಂದು ನಾಸ್ತಿಕರು ಊಹಿಸುತ್ತಾರೆ. ಈ ವಿವರಣೆಗಳು ಮಧ್ಯಾಂತರ ಕಾರಣಗಳನ್ನಷ್ಟೇ ಗುರುತಿಸುತ್ತವೆ. ಎಲ್ಲ ಕಾರಣಗಳ ಕಾರಣನಾದ ಭಗವಂತನ ಅಸ್ತಿತ್ವವನ್ನು ಕುರಿತಂತೆ ಯಾರೂ ನಿರಾಕರಿಸುವುದಿಲ್ಲ.

ಬ್ರಹ್ಮಾಂಡವು ಅದ್ಭುತ ನಿರ್ವಹಣೆ, ಶಿಲ್ಪ ನೈಪುಣ್ಯ (ಎಂಜಿನ್ ಕಾರ್ಯ) ಮತ್ತು ಕಲಾವಂತಿಕೆಯನ್ನು ಪ್ರದರ್ಶಿಸುತ್ತದೆ. ಪ್ರಕೃತಿಯ ಈ ಬೃಹತ್ ವ್ಯವಹಾರದ ಹಿಂದೆ ವಿಪರೀತ ದೊಡ್ಡ ಮಿದುಳು ಅಥವಾ ಬುದ್ಧಿ ಇದೆ. ಮಗುವು ಆಕಾಶದಲ್ಲಿ ಗಗನನೌಕೆಯು ಸುತ್ತುತ್ತಿರುವುದನ್ನು ನೋಡುತ್ತದೆ ಎಂದುಕೊಳ್ಳಿ. ಅದು ಯಾವುದೇ ನಿರ್ಬಂಧವಿಲ್ಲದೆ ಆಕಸ್ಮಿಕವಾಗಿ ಸುತ್ತುತ್ತಿದೆ ಎಂದು ಅವನು ಭಾವಿಸುತ್ತಾನೆ. ಆದರೆ ಬುದ್ಧಿವಂತ ವಿಜ್ಞಾನಿಗಳು ಮತ್ತು ತಂತ್ರಜ್ಞರ ತಂಡವು ಅದನ್ನು ನಿಯಂತ್ರಿಸುತ್ತದೆ ಎನ್ನುವುದು ಹಿರಿಯರಿಗೆ ಗೊತ್ತು. ಹಾಗಾದರೆ ನಾವು ಗ್ರಹಗಳೆಂದು ಕರೆಯುವ ಈ ಬೃಹತ್ ಗಗನನೌಕೆಗಳು ಆಕಾಶದಲ್ಲಿ ಸರಿಯಾದ ಕಕ್ಷೆಯಲ್ಲಿ ಸ್ವಯಂ ಚಾಲಿತವಾಗಿ ಹಾರಾಡುತ್ತಿವೆ ಎಂದು ತಿಳಿವಳಿಕೆ ಇಲ್ಲದ ಮಕ್ಕಳಂತೆ ನಾವು ಏಕೆ ಊಹಿಸಿಕೊಳ್ಳಬೇಕು? ಅದೂ ಅಲ್ಲದೆ ಅದರ ಹಿಂದೆ ಯಾವುದೇ ಬುದ್ಧಿ ಇಲ್ಲವೆಂದು? ನಮ್ಮ ವಿಜ್ಞಾನಿಗಳು ಬ್ರಹ್ಮಾಂಡದ ಕಾರ್ಯ ರೂಪವನ್ನು ವೀಕ್ಷಿಸಬಹುದು ಮತ್ತು ಹೇಗೆ ಗುರುತ್ವಾಕರ್ಷಣೆ ನಿಯಮವು ಗ್ರಹಗಳನ್ನು ಕಕ್ಷೆಯಲ್ಲಿ ಇಟ್ಟಿವೆ ಎನ್ನುವುದನ್ನು ವಿವರಿಸಬಹುದು. ಆದರೆ ವಿಷಯವನ್ನು ಸುಮ್ಮನೆ ವೀಕ್ಷಿಸುವುದರಿಂದ ಮತ್ತು ಅದನ್ನು ಗುರುತ್ವಾಕರ್ಷಣೆ ನಿಯಮ ಎಂದು ಪಟ್ಟಿ ಮಾಡುವುದು ನಿಜವಾದ ವಿವರಣೆಯಾಗುವುದಿಲ್ಲ. ಅಥವಾ ಯಾವುದೇ ರೀತಿಯಲ್ಲಿಯೂ ಅದು ಗ್ರಹಗಳು

## ದೇಹದಾಚೆಗಿನ ವಿದ್ಯೆ

ಅಲೌಕಿಕ ಜ್ಞಾನದಲ್ಲಿ ಮೊದಲ ಹೆಜ್ಜೆಯನ್ನು ಇಡಲು ವ್ಯಕ್ತಿಯು ತಾನು ದೇಹವಲ್ಲ, ಆಧ್ಯಾತ್ಮಿಕ ಆತ್ಮ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಆದಾಗ್ಯೂ, ಬಹಳಷ್ಟು ದೊಡ್ಡ ವಿದ್ವಾಂಸರು, ತತ್ತ್ವಜ್ಞಾನಿಗಳು ಮತ್ತು ರಾಜಕೀಯ ನಾಯಕರು ಈ ಮೊದಲ ಹೆಜ್ಜೆಯನ್ನೂ ಇರಿಸಿಲ್ಲ. ಅವರು ನಿಜವಾದ ಶಿಕ್ಷಣದ ಅಆಇಈಯನ್ನೇ ಕರಗತ ಮಾಡಿಕೊಂಡಿಲ್ಲ. ಬದಲಿಗೆ, ತಾವು ತಮ್ಮ ದೇಹಗಳೆಂದು ಯೋಚಿಸುತ್ತ ಅವರು ತಮ್ಮ ಕುಟುಂಬ, ಕುಲ, ರಾಷ್ಟ್ರಗಳು ಇತ್ಯಾದಿಯೊಂದಿಗೆ ಗುರುತಿಸಿಕೊಳ್ಳುತ್ತಾರೆ. ದೈಹಿಕ ಪ್ರಜ್ಞೆಯಲ್ಲಿರುವ ವ್ಯಕ್ತಿಯು 'ನಾನು ಬಿಳಿಯ', 'ನಾನು ಅಮೆರಿಕದವ'. 'ನಾನು ಕರಿಯ', 'ನಾನು ಕ್ರಿಶ್ಚಿಯನ್', 'ನಾನು ಮಾನವ' ಇತ್ಯಾದಿ. ಆದರೂ ಕೆಲವೇ ವರ್ಷಗಳಲ್ಲಿ ದೇಹದ ಅಂತ್ಯದೊಂದಿಗೆ ಅಂತಹ ಉಪಾಧಿಗಳು ಮಾಯವಾಗಿಬಿಡುತ್ತವೆ.

ವೈದಿಕ ಸಾಹಿತ್ಯದ ಪ್ರಕಾರ, ಭಗವಂತನೊಂದಿಗೆ ಪ್ರೀತಿಯ ಬಾಂಧವ್ಯದಲ್ಲಿರುವ ಶಾಶ್ವತ ಆತ್ಮ, ನಿಜವಾದ ಆತ್ಮವು ದೇಹವು ಅಂತ್ಯಗೊಂಡಾಗ ಸಾಯುವುದಿಲ್ಲ ಅಥವಾ ದೇಹವು ವೃದ್ಧಾಪ್ಯವನ್ನು ಪಡೆದಾಗ ಅದು ವೃದ್ಧನಾಗುವುದಿಲ್ಲ.

ಅವನನ್ನು ಕತ್ತರಿಸಲಾಗದು ಅಥವಾ ಅವನನ್ನು ಕೊಲ್ಲಲಾಗದು. ಅವನು ಯಾವಾಗಲೂ ಸಂತೋಷಭರಿತ. ವ್ಯಕ್ತಿಯು ಇದನ್ನು ಅರ್ಥಮಾಡಿಕೊಂಡರೆ, ಅವನು ನೋವಿನ ದೀರ್ಘ ಇತಿಹಾಸದಿಂದ ಮುಕ್ತನಾಗಬಹುದು. ಆದರೆ ಈ ಅಧ್ಯಯನವನ್ನು ಕೈಗೊಳ್ಳದಿದ್ದರೆ, ಅವನು ತನ್ನ ದೈಹಿಕ ಗುರುತಿನಿಂದ ಏನೇ ಮಾಡಿದರೂ ಅದು ಸಾವಿನ ಸಮಯದಲ್ಲಿ ಸೋಲನ್ನು ಅನುಭವಿಸುತ್ತದೆ.

ಆದುದರಿಂದ ಮಾನವ ಶಿಕ್ಷಣವು ನಮ್ಮನ್ನು ಉದ್ಯೋಗಕ್ಕೆ ಸಿದ್ಧ ಮಾಡುವುದಷ್ಟೇ ಅಲ್ಲ, ಅಥವಾ ಶ್ರೇಷ್ಠ ಚಿಂತಕರ ಅಪರಿಪೂರ್ಣ ಅಭಿಪ್ರಾಯಗಳನ್ನು ಕುರಿತು ಊಹಿಸುವುದೂ ಅಲ್ಲ. ಬದಲಿಗೆ, ಅದು ಬದುಕಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ನಮಗೆ ಸಹಾಯ ಮಾಡಬೇಕು. ಪ್ರತಿಯೊಬ್ಬರೂ ವೃದ್ಧಾಪ್ಯ, ಸಾವು ಮತ್ತು ರೋಗದ ಕಠಿಣ ಶಿಕ್ಷೆಗೆ ಗುರಿಯಾಗುವ ಭೌತಿಕ ಲೋಕವೆಂಬ ಜೈಲಿನಿಂದ ತನ್ನನ್ನು ಬಿಡುಗಡೆ ಮಾಡಿಕೊಳ್ಳುವವರೆಗೂ ಮಾನವ ಜೀವಿಯು ಅತೃಪ್ತನಾಗಿರಬೇಕು. ಜೈಲಿನೊಳಗೆ ಲಾಭದಾಯಕ ಉದ್ಯೋಗದಲ್ಲಿರುವುದು, ಸೆರೆಮನೆ ವಾಸವನ್ನು ಸಾಧ್ಯವಾದಷ್ಟೂ ಹೆಚ್ಚಾಗಿ ಆನಂದಿಸುವುದು ಅಥವಾ ಜೈಲಿನಿಂದ ಹೊರಬರುವ ಆಶಯಗಳನ್ನು ಬಿಟ್ಟು ಆನಂದಕ್ಕಾಗಿಯೇ ಪುಸ್ತಕಗಳನ್ನು ಓದುವುದು ಮತ್ತು ಬರೆಯುವುದರಲ್ಲಿ ತೊಡಗುವುದು ಸ್ವಾತಂತ್ರ್ಯ ಪ್ರೇಮಿಯ ನಿಜವಾದ ಗುಣವಾಗುವುದಿಲ್ಲ. ನಮ್ಮ ಮೂಲ ಗುಣಗಳಂತೆ ನಾವು ಪ್ರತಿಯೊಬ್ಬರೂ ಲೌಕಿಕ ಪ್ರಕೃತಿಯು ನಮ್ಮ ಮೇಲೆ ಹೇರಿರುವ ನೋವನ್ನು ಮುಕ್ತಗೊಳಿಸಿಕೊಳ್ಳಲೆಂದೇ ಇರುವುದು.

ಭೌತಿಕ ಲೋಕದಲ್ಲಿ ನಮ್ಮ ಬಂಧನವು ಪರಮ ನಿಯಂತ್ರಕ ಕೃಷ್ಣನ ವ್ಯಾಪ್ತಿಯಲ್ಲಿಯೇ ಇದ್ದರೂ ನಮ್ಮ ನೋವಿಗೆ ಅವನನ್ನು ದೂಷಿಸಲಾಗದು. ನಾವು ನಮ್ಮ ಅಜ್ಞಾನದಿಂದ ಇದನ್ನು ತಂದುಕೊಂಡಿದ್ದೇವೆ. ನಾವು ಭೌತಿಕ ಲೋಕಕ್ಕೆ ಸೇರಿದವರು ಎಂದು ಯೋಚಿಸುವುದರಿಂದ ನಮ್ಮ ಆಧ್ಯಾತ್ಮಿಕ ಗುಣಸ್ವಭಾವವನ್ನು ಮರೆತಿದ್ದೇವೆ. ತಾತ್ಕಾಲಿಕ ಕರ್ಮಗಳಲ್ಲಿ ಮಗ್ನರಾಗಿ ನಾವು ಕೃಷ್ಣನನ್ನು ಮರೆತಿದ್ದರೂ ಅವನು ನಮ್ಮನ್ನು ಮರೆತಿಲ್ಲ. ಭಗವದ್ಧಾಮಕ್ಕೆ ಹಿಂದಿರುಗುವ ಮಾರ್ಗವನ್ನು ನೀಡಲು, ದೈವಪ್ರಜ್ಞೆಯ ಬದುಕು, ಶಾಶ್ವತ ಜೀವನ, ಆನಂದ ಮತ್ತು ಜ್ಞಾನವನ್ನು ಉಪದೇಶ ಹಾಗೂ ಉದಾಹರಣೆಯ ಮೂಲಕ ಬೋಧಿಸಲು ಅವನು ತನ್ನ ಆಪ್ತ ಪ್ರತಿನಿಧಿ, ಆಧ್ಯಾತ್ಮಿಕ ಗುರುಗಳನ್ನು ಕಳುಹಿಸಿಕೊಡುತ್ತಾನೆ. *

# ಅಕ್ಷಯ ಪಾತ್ರೆ ವಾರ್ತೆ




**ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಆಹಾರ ವಿತರಣಾ ವಾಹನವನ್ನು ಕೊಡುಗೆಯಾಗಿ ನೀಡುವ ಮೂಲಕ ಅಕ್ಷಯ ಪಾತ್ರ ಫೌಂಡೇಶನ್‌ನೊಂದಿಗೆ ಪಾಲುದಾರಿಕೆ ಹೊಂದಿದೆ. ಇಸ್ಕಾನ್-ಬೆಂಗಳೂರಿನ ಜನರಲ್ ಮ್ಯಾನೇಜರ್ ಶ್ರೀ ಅರ್ಜುನ ಸಖ ದಾಸ ಅವರು ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್‌ನ ನಿರ್ದೇಶಕರಾದ ಶ್ರೀ ಎ. ಅರುಣಾಚಲಂ ಅವರಿಗೆ ಸ್ಮರಣಿಕೆಯನ್ನು ನೀಡಿ ಗೌರವಿಸಿದರು.**

# ಸೌದೆ ಕಡಿಯುವವನ ವಿವೇಚನೆ

**ಸುಂ**ದರಬನ ಅರಣ್ಯವು ಮರದ ಸಂಪತ್ತಿನಿಂದ ಕೂಡಿದೆ. ಸೌದೆ ಕಡಿಯುವವನೊಬ್ಬನು ಅಲ್ಲಿಂದ ಒಂದಷ್ಟು ಸೌದೆ ಶೇಖರಿಸಿಕೊಂಡು ಬರಲು ನಿರ್ಧರಿಸಿದ. ಸುಂದರಬನವು ಕಾಡು ಪ್ರಾಣಿಗಳಿಂದಲೂ ತುಂಬಿತ್ತು. ಜನರು ಅದರೊಳಗೆ ಹೋಗಲು ಹೆದರುತ್ತಿದ್ದರು. ಆದರೆ ಈ ಸೌದೆ ಕಡಿಯುವವನು ಹೋಗಲು ನಿರ್ಧರಿಸಿದ್ದ. ಸೂಕ್ತವಾದ ಆಯುಧಗಳಿಲ್ಲದೆ ಕಾಡನ್ನು ಹೊಕ್ಕುವುದು ಅಪಾಯಕಾರಿ ಎಂದು ಅನುಭವಿಗಳು ಅವನಿಗೆ ಬುದ್ಧಿವಾದ ಹೇಳಿದರು.

ಆದರೆ ಅವನು ತೀಕ್ಷ್ಣವಾಗಿ ಮಾರ್ನುಡಿದ, ''ಅರಣ್ಯದೊಳಗೆ ಆಯುಧಗಳೊಂದಿಗೆ ಪ್ರವೇಶಿಸಬೇಕೆಂಬ ಸಾಮಾನ್ಯ ಜನರ ಆಧಾರವಿಲ್ಲದ ಭಾವನೆಯನ್ನು ತಪ್ಪೆಂದು ನಾನು ಸಾಬೀತುಪಡಿಸುತ್ತೇನೆ. 'ಕಲ್ಲಿದ್ದಲು ಗಣಿಗೆ ಕಲ್ಲಿದ್ದಲು' ಒಯ್ಯುವ ಮೂರ್ಖತನವನ್ನು ನಾನು ಪ್ರದರ್ಶಿಸುವುದಿಲ್ಲ. ಯಾವುದಾದರೂ ಒಂದು ಮರದ ಮುರಿದ ರೆಂಬೆಯನ್ನು ಉಪಯೋಗಿಸಿದರೆ ಸಾಕು, ಎಲ್ಲ ಕಾಡು ಪ್ರಾಣಿಗಳು ಅಲ್ಲಿ ಇಲ್ಲಿ ಓಡಿ ಹೋಗುತ್ತವೆ. ಯಾವುದಾದರೂ ಪ್ರಾಣಿಯು ನನ್ನ ಬಳಿಗೆ ಬರುತ್ತಿರುವುದನ್ನು ನಾನು



ನೋಡಿದರೆ ಮರದಿಂದ ರೆಂಬೆಯನ್ನು ಕಡಿಯುವೆ ಮತ್ತು ಅದನ್ನು ಯಾವ ರೀತಿ ಹೆದರಿಸುವೆನೆಂದರೆ ಅದು ನನ್ನ ಸಮೀಪಕ್ಕೆ ಬರುವ ಸಾಹಸ ಮಾಡುವುದಿಲ್ಲ. ರೆಂಬೆ ಕಡಿಯುವುದನ್ನು ಕಂಡು ಅದು ಓಡಿಹೋಗುತ್ತದೆ.''

ಸೌದೆ ಕಡಿಯುವವನು ತಾನು ತುಂಬ ವಿವೇಕಿಯೆಂದು ಭಾವಿಸಿದ. ಆದರೆ ಅವನಿಗೆ ಕಿಂಚಿತ್ತೂ ಸಾಮಾನ್ಯ ಜ್ಞಾನವಿರಲಿಲ್ಲ. ಅವನು ಮರದ ರೆಂಬೆಯನ್ನು ಕಡಿಯುವಾಗ ಹುಲಿಯು ಅವನ ಮೇಲೆ ಎಗರಿ ಆಕ್ರಮಣ ಮಾಡಿದರೆ ಅವನ ಊಹಾಪೋಹಗಳಿಗೆ ಅರ್ಥವೇ ಇರುವುದಿಲ್ಲ. ಅವನಿಗೆ ರೆಂಬೆಯನ್ನು ಹಿಡಿದುಕೊಳ್ಳುವುದೂ ಸಾಧ್ಯವಾಗದು ಅಥವಾ ಅವನಿಗೆ ಹುಲಿಯನ್ನು ಕೊಲ್ಲುವುದೂ ಸಾಧ್ಯವಾಗದು. ಬದಲಿಗೆ ಅವನೇ ಸಾಯುತ್ತಾನೆ.

ವಾಸ್ತವವಾಗಿ ಹಾಗೇ ಆಗಿದ್ದು. ಸೌದೆ ಕಡಿಯುವವನು ಅರಣ್ಯವನ್ನು ಪ್ರವೇಶಿಸಿದ ಕೆಲವು ದಿನಗಳಾದ ಮೇಲೆ ಅಲ್ಲಿಂದ ಮಾಹಿತಿಯೊಂದು ಬಂದಿತು. ಹುಲಿಯೊಂದು ಅವನ ಮೇಲೆ ಆಕ್ರಮಣ ಮಾಡಿ ಅವನ ರಕ್ತ ಮತ್ತು ಮಾಂಸವನ್ನು ಆಸ್ವಾದಿಸಿತೆಂದು ಆ ಮಾಹಿತಿ ಹೇಳಿತ್ತು. ವಾಸ್ತವವಾಗಿ ಹುಲಿಯನ್ನು ನೋಡಿದಾಗ ಅವನು ಆ ಪ್ರಾಣಿಯ ಜೊತೆ ಹೋರಾಡಲು ಮರದ



ರೆಂಬೆಯೊಂದನ್ನು ಕಡಿಯಲು ಆರಂಭಿಸಿದ. ಆದರೆ ಅವನು ಸಿದ್ಧವಾಗುವ ಮೊದಲೇ ಹುಲಿಯು ಅವನ ಮೇಲೆ ಎಗರಿತು ಮತ್ತು ತತ್‌ಕ್ಷಣ ಕೊಂದು ಹಾಕಿತು.

**ಭಾವಾರ್ಥ :** ಅದೇ ರೀತಿ ಯೋಗಿಗಳು ದೈಹಿಕ ಶ್ರಮದಾಯಕ ವಿಧಾನಗಳ ಮೂಲಕ ಲೌಕಿಕ ಇಂದ್ರಿಯಗಳನ್ನು ನಿಯಂತ್ರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಸಾಮಾನ್ಯವಾಗಿ ಪಳಗಿಸದ ಕುಪಿತ ಹುಲಿಗಳಂತೆ ಆರು ಸುಪ್ತ ಮತ್ತು ಪ್ರಮುಖವಾದ ಭಾವೋದ್ರೇಕಗಳು ಹಾಗೂ ಮನುಷ್ಯನ ದುಷ್ಟತನವು ಅವನ ಮೇಲೆ ಆಕ್ರಮಣ ಮಾಡುತ್ತವೆ ಮತ್ತು ಅವನ ರಕ್ತವನ್ನು ಹೀರಲಾರಂಭಿಸುತ್ತವೆ. ಇಂತಹ ಪ್ರಸಂಗಗಳಲ್ಲಿ ವ್ಯಕ್ತಿಯು ಇಂದ್ರಿಯಗಳ ಉದ್ರೇಕಕ್ಕೆ ಬಲಿಯಾಗಬಹುದು.

ಭಕ್ತನ ಆಲೋಚನೆಯು ಲೌಕಿಕ ಇಂದ್ರಿಯಗಳ ನಿಯಂತ್ರಣದ ಅನಂತರ ತನ್ನ ಕಲ್ಯಾಣದ ಬಗೆಗೆ ಚಿಂತಿಸುವುದಲ್ಲ ಅಥವಾ ತಾತ್ಕಾಲಿಕ ಆತ್ಮ ರಕ್ಷಣೆಗಾಗಿ ಅನೇಕ ವಿಧವಾದ ಆಯುಧಗಳನ್ನು ಸಂಗ್ರಹಿಸುವುದೂ ಅಲ್ಲ. ಭಕ್ತನು ಅಂತಹ ರೀತಿಯಲ್ಲಿ ವರ್ತಿಸುವುದಿಲ್ಲ. ಕೃತಕ ವಿಧಾನಗಳ ಮೂಲಕ ತನ್ನ ಭಾವೋದ್ರೇಕಗಳನ್ನು ನಿಯಂತ್ರಿಸಲು ಅವನು ಊಹಾತ್ಮಕ ಪ್ರಯತ್ನಗಳಲ್ಲಿ ತೊಡಗುವುದೂ ಇಲ್ಲ.

ಭಕ್ತಿಸೇವೆಯ ಬೆಳವಣಿಗೆಯೊಂದಿಗೆ ಇಂದ್ರಿಯ ನಿಯಂತ್ರಣವು ಸ್ವಯಂ ಬೆಳೆಯುತ್ತದೆ ಮತ್ತು ಅದಕ್ಕಾಗಿ ಪ್ರತ್ಯೇಕವಾಗಿ ಅಭ್ಯಾಸ ಮಾಡಬೇಕಾಗಿಲ್ಲ ಎಂದು ದೇವೋತ್ತಮನ ಭಕ್ತನು ದೃಢವಾಗಿ ನಂಬುತ್ತಾನೆ. ತನ್ನ ಭಾವೋದ್ರೇಕಗಳನ್ನು ನಿಯಂತ್ರಿಸಿಕೊಳ್ಳಲು ಅವನೇನೂ ಕಾತರನಾಗಿಲ್ಲ. ಬದಲಿಗೆ, ದೇವೋತ್ತಮ ಪರಮ ಪುರುಷನಿಗೆ ಸಲ್ಲಿಸುವ ಭಕ್ತಿಸೇವೆಯ ಅಲೌಕಿಕ ಪ್ರಭಾವದಿಂದ ಆ ಉದ್ವೇಗವು ಅವನ ಭಕ್ತಿಸೇವೆಗೆ ಅನುಕೂಲವನ್ನೇ ಉಂಟು ಮಾಡುತ್ತವೆ.



(ಶ್ರೀಲ ಭಕ್ತಿಸಿದ್ಧಾಂತ ಸರಸ್ವತೀ ಠಾಕುರ ಅವರ ಬೋಧನೆಗಳಿಂದ ಆಯ್ದದ್ದು)

# ಶಕ್ತಿಯಿಂದ ಪರಮ ಪುರುಷನವರೆಗೆ

*ಭಗವಂತನ ವ್ಯಕ್ತಿತ್ವವನ್ನು ಸುತ್ತುವರಿದಿರುವ ಗುಪ್ತ ಮೋಡವನ್ನು ಭೇದಿಸುವುದರತ್ತ...*

**ಆಂಗ್ಲ ಮೂಲ : ಬ್ಯಾಕ್ ಟು ಗಾಡ್‌ಹೆಡ್**

ಭಗವತ್ ಸಾಕ್ಷಾತ್ಕಾರದ ಮೂರು ಹಂತಗಳು: ವ್ರತ ಮತ್ತು ಧ್ಯಾನಗಳಿಂದ ಭಗವಂತನನ್ನು ಸರ್ವ ವ್ಯಾಪಿ, ಸ್ವಯಂ ಪ್ರಕಾಶಿತ ಬ್ರಹ್ಮನ್ ಆಗಿ ನಾವು ಸಾಕ್ಷಾತ್ಕರಿಸಿಕೊಳ್ಳಬಹುದು. ಇನ್ನೂ ಹೆಚ್ಚಿನ ಸಾಕ್ಷಾತ್ಕಾರವೆಂದರೆ, ಹೃದಯದೊಳಗಿನ ಚತುರ್ಭುಜ ಪರಮ ಆತ್ಮ, ಪರಮಾತ್ಮನಾಗಿ ದೇವರ ಸಾಕ್ಷಾತ್ಕಾರ. ಬ್ರಹ್ಮನ್ ಮತ್ತು ಪರಮಾತ್ಮ ಸಾಕ್ಷಾತ್ಕಾರಗಳೆರಡೂ ಸೇರಿರುವ ಅತ್ಯುನ್ನತ ಸಾಕ್ಷಾತ್ಕಾರವೆಂದರೆ ಪರಮ ಪುರುಷ ಶ್ರೀ ಕೃಷ್ಣನನ್ನು ಭಗವಾನ್ ಎಂದು ಅರ್ಥಮಾಡಿಕೊಳ್ಳುವುದು. ಪರಿಶುದ್ಧ ಭಕ್ತಿಯಿಂದ ಮಾತ್ರ ನಾವು ಅವನನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಆಧ್ಯಾತ್ಮಿಕ ಲೋಕದಲ್ಲಿ ಅವನ ಶಾಶ್ವತ ಲೀಲೆಗಳೊಂದಿಗೆ ಪ್ರವೇಶಿಸಬಹುದು.

ದೇವರು ಬಹಳ ದೂರ, ತನ್ನದೇ ಪ್ರದೇಶದಲ್ಲಿ ವಾಸಿಸುವ ವ್ಯಕ್ತಿಯೇ? ಅಥವಾ ಅವನು ಎಲ್ಲರ ಹೃದಯಗಳಲ್ಲಿ ವಾಸಿಸುತ್ತ ಅತ್ಯಂತ ಸಮೀಪದಲ್ಲಿ ಇರುವನೇ? ಅಥವಾ ಅವನು ಎಲ್ಲದರಲ್ಲಿಯೂ ಸರಳ ವ್ಯಕ್ತಿಯೇ?

ಈ ಪ್ರಶ್ನೆಗಳಿಗೆ ನೀವು ಏನು ಹೇಳುವಿರಿ? ಅಥವಾ ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ದೇವರನ್ನು ಕುರಿತು ಚಿಂತಿಸುವಾಗ ನೀವು ಏನು ಯೋಚಿಸುವಿರಿ?

ಈ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವೆನ್ನಿಸಿದರೆ ನೀವು ಏಕಾಕಿಯಲ್ಲ. ದೇವರು ಹೇಗಿರಬಹುದು ಎನ್ನುವ ಬಗೆಗೆ ಬಹಳ ಜನರಿಗೆ ಕೇವಲ ಅಸ್ಪಷ್ಟ ಕಲ್ಪನೆಗಳಿವೆ. ನಾನು ಅನೇಕ ಜನರನ್ನು ಕೇಳಿದ್ದೇನೆ. ಅವರು ಸಾಮಾನ್ಯವಾಗಿ ಏನು ಹೇಳುತ್ತಾರೆಂದರೆ, ಸೌಂದರ್ಯ, ಶಕ್ತಿ ಮತ್ತು ವಿವೇಕದಂತಹ ಕೆಲವು ವೈಯಕ್ತಿಕ ಗುಣ ಲಕ್ಷಣಗಳಿರುವ ದೇವರನ್ನು ಕುರಿತು ಚಿಂತಿಸುವಾಗ ಅವರು, ಅವನು ಎಲ್ಲವೂ ಅಥವಾ ಸರ್ವ ವ್ಯಾಪಿ ಶಕ್ತಿಯಂತೆ ಎಲ್ಲದರ ಒಳಗೂ ಇರಬೇಕು ಎಂದೂ ಯೋಚಿಸುತ್ತಾರೆ. ದೇವರು ಒಬ್ಬ ವ್ಯಕ್ತಿಯೆಂದು ಅನೇಕ ಜನರು ನಂಬಿದರೂ ಕೂಡ ಅವನನ್ನು ನಿಷ್ಕೃಷ್ಟ ಮತ್ತು ಅಕ್ಷರಶಃ ಅರ್ಥೈಸಿ ಯೋಚಿಸುವುದು ಅವನನ್ನು ಸೀಮಿತಗೊಳಿಸಿದಂತೆ ಆಗುತ್ತದೆ ಎನ್ನುವುದನ್ನು ಅದು ಸೂಚಿಸುವುದರಿಂದ ಇದು ಅಸಮಾನತೆ, ಭಿನ್ನತೆಯನ್ನು ವ್ಯಕ್ತಪಡಿಸುತ್ತದೆ, ಸಾಮಾನ್ಯ ಮನುಷ್ಯನ ಎಲ್ಲ (ಅಥವಾ ಕೆಲವಾದರೂ) ಸೀಮಿತ ಮತ್ತು ಅಪರಿಪೂರ್ಣತೆಗೆ ಗುರಿಯಾಗುವ 'ದೇವರ' ಮಾನವ ರೂಪಿ ಕಲ್ಪನೆಯಲ್ಲಿ ತಾವು ಅಂತ್ಯಗೊಳ್ಳಬಹುದು ಎನ್ನುವ ಭಯ ಅವರಿಗಿದೆ.

ಉದಾಹರಣೆಗೆ ಕ್ರೈಸ್ತ ಧರ್ಮದಲ್ಲಿ ದೇವರನ್ನು ತಂದೆ ಎನ್ನುವ ವರ್ಣನೆ ಇದೆ. ಖಂಡಿತವಾಗಿ ಒಂದು ವಿಶೇಷ ಗುಣದ ಉಪಾಧಿ. ಆದರೆ ಸ್ವರ್ಗದಲ್ಲಿರುವ ನಮ್ಮ ತಂದೆಯು ಹೇಗೆ ಕಾಣುತ್ತಾರೆ? ಸಿಸ್ಟೈನ್ ಚಾಪೆಲ್‌ನ ಒಳ ಛಾವಣಿಯ ಮೇಲೆ ಮೈಕೆಲ್ ಏಂಜಲೋವಿನ ಕಲಾಕೃತಿ ಇದೆ. ಅದರಲ್ಲಿ ವೃದ್ಧನ ರೂಪದ ದೇವರು ಆಡಮ್‌ನನ್ನು ಸೃಷ್ಟಿಸುತ್ತಿರುವ ದೃಶ್ಯವಿದೆ. ಆಡಮ್ ಭಗವಂತನಿಗಿಂತ ಹೆಚ್ಚು ಆರೋಗ್ಯಪೂರ್ಣವಾಗಿ ಮತ್ತು ಸುಂದರವಾಗಿ ಕಾಣುತ್ತಾನೆ.

ಆದುದರಿಂದ ನಾನು ಹೇಳುತ್ತಿದ್ದಂತೆ, ಶಿಕ್ಷಿತರಲ್ಲಿ ಅನೇಕ ಜನರು ದೇವರನ್ನು ಒಂದು ವ್ಯಕ್ತಿಯೆಂದು ಗಂಭೀರವಾಗಿ ಯೋಚಿಸಲು ಇಷ್ಟಪಡುವುದಿಲ್ಲ. ಬುದ್ಧಿವಂತರಲ್ಲದ ಸಾಮಾನ್ಯ ಜನರು ಅದನ್ನು ಮಾಡಬಹುದು ಅಥವಾ ಕಲಾವಿದನೊಬ್ಬನು ತನ್ನ ಕಲ್ಪನಾ ಶಕ್ತಿಯಿಂದ ದೇವರ ಯಾವುದಾದರೂ ವೈಯಕ್ತಿಕ ರೂಪವನ್ನು ಕಲ್ಪಿಸಿಕೊಳ್ಳಬಹುದು. ಆದರೆ ಅತ್ಯಾಧುನಿಕ ಆರಾಧಕರು, ಪೂಜಾರಿಗಳು ಮತ್ತು ದೇವತಾಶಾಸ್ತ್ರಜ್ಞರು 'ತಂದೆಯಾದ ದೇವರು' ಎನ್ನುವ ವಾಕ್ಯವನ್ನು ಅಕ್ಷರಶಃ ಸ್ವೀಕರಿಸಲು ಇಷ್ಟಪಡುವುದಿಲ್ಲ. ತಮ್ಮನ್ನು ಮೂಲವಾಸಿಗಳು ಎಂದು ಪರಿಗಣಿಸುವ ಕಳಂಕದಿಂದ ತಪ್ಪಿಸಿಕೊಳ್ಳಲು ಅವರು ಇಷ್ಟಪಡುತ್ತಾರೆ.

## ನನ್ನದೇ ರೀತಿಯಲ್ಲಿ...

ದೇವರು ವ್ಯಕ್ತಿ ಎನ್ನುವ ನನ್ನ ಕಲ್ಪನೆಗಳು ಅಸಮರ್ಪಕವೆಂದು ಸಾಬೀತಾದಾಗ ನನ್ನ ಬದುಕಿನಲ್ಲಿಯೂ ಅದೊಂದು ಕಾಲವಿತ್ತು. 1966ರಲ್ಲಿ, ನನ್ನ ಕಾಲೇಜು ದಿನಗಳಲ್ಲಿ, ನಾನು ನನ್ನ ಮೊದಲ ತತ್ತ್ವಶಾಸ್ತ್ರ ಶಿಕ್ಷಣ, ಆರಂಭಿಕ ತತ್ತ್ವಶಾಸ್ತ್ರವನ್ನು ಕಲಿಯಲು ಆರಂಭಿಸಿದೆ. ನಾನು ಕಲಿತಿದ್ದೆಲ್ಲವನ್ನೂ ಆ ಆಂಶದಿಂದ ಪರೀಕ್ಷಿಸಲು ಪ್ರಾರಂಭಿಸಿದೆ. ದೇವರು ಮತ್ತು ಧರ್ಮವನ್ನು ಕುರಿತ ನನ್ನ ಅಭಿಪ್ರಾಯಗಳು ಅತಿ ಶೀಘ್ರದಲ್ಲಿ ಬದಲಾಗಲಾರಂಭಿಸಿದವು. ದೇವರು ಎಲ್ಲ ಕಡೆ, ಎಲ್ಲದರಲ್ಲಿಯೂ ಮತ್ತು ಎಲ್ಲ ಸಂದರ್ಭಗಳಲ್ಲಿಯೂ ಇರಬೇಕೆಂದು ನಾನು ಬಯಸಿದೆ. ಏಕೆಂದರೆ, ಪ್ರತಿಯೊಂದು ಘಟ್ಟದಲ್ಲಿಯೂ ನಾನು ಕೆಟ್ಟ ವಾಸ್ತವಾಂಶಗಳಿಂದ ಸುತ್ತುವರಿಯಲ್ಪಟ್ಟಿದ್ದೆ. ಕಾಲವು ಪಟ್ಟುಹಿಡಿದ ನಾಶಕ – ಋತುಗಳು ಬದಲಾದವು, ಎಲೆಗಳು ಉದುರಿದವು, ಹೂವುಗಳು ಒಣಗಿದವು, ನೆನಪು ವಿಫಲವಾಯಿತು, ಧೂಳು ಶೇಖರಗೊಂಡಿತು ಮತ್ತು ನಿಜವಾದ ಪ್ರೀತಿಯು ಹುಸಿಯಾಯಿತು. ಕಾಲದ ತುಕ್ಕು, ಆಲಸ್ಯವು ಪ್ರತಿಯೊಂದು ಕಟ್ಟಡದ ಮೇಲೆ. ಪ್ರತಿಯೊಂದು ಪ್ರಾಣಿಗಳ ಮೇಲೆ ಕಾಣತೊಡಗಿತು ಮತ್ತು ಪ್ರತಿಯೊಂದು ತತ್ತ್ವ ಮತ್ತು ಕಲೆಯನ್ನು ನಾಶಪಡಿಸಿತು. ಅದು ಗಾಳಿಯಲ್ಲಿ ತೂಗುತ್ತಿತ್ತು ಮತ್ತು ಶ್ವಾಸಕೋಶದ ಮೂಲಕ ರಕ್ತವನ್ನು ಪ್ರವೇಶಿಸಿತು. ಯಾವುದೂ ಉಳಿಯಲಿಲ್ಲ, ಇದನ್ನು ಬಿಟ್ಟು... ನಾನು ಉಳಿದೆ. ನಾನು ಆಗಲೇ ಬೇಕಾಗಿತ್ತು. ನಾನು ಹೇಗೆ ನಾಶವಾಗಬಲ್ಲೆ?



ಮತ್ತು ನಿಜವಾದ ಗುರುತನ್ನು ಉಳ್ಳ ಸರ್ವವ್ಯಾಪಿ, ಶಾಶ್ವತ, ಆಧ್ಯಾತ್ಮಿಕ ವಾಸ್ತವದ ಜೊತೆಗೆ ವಿಲೀನವಾಗುತ್ತದೆ. ಉಳಿದೆಲ್ಲವೂ ಭ್ರಮೆ.

ನಾನು ಬೆಳೆದು ಬಂದ ದೇವರು ಬಾಹ್ಯ, ಭಾವನಾತ್ಮಕ ಮತ್ತು ತಾತ್ತ್ವಿಕವಾಗಿ ದುರ್ಬಲ ಎನ್ನುವ ಸಾಮಾನ್ಯ ಗ್ರಹಿಕೆಯನ್ನು ಅರಿತುಕೊಳ್ಳುವ ನನ್ನ ಪರಿಸ್ಥಿತಿ ಏನೂ ಅಸಾಮಾನ್ಯವಾಗಿರಲಿಲ್ಲ. ಭಗವಂತನನ್ನು ಕುರಿತ ನನ್ನ ಅರಿವನ್ನು ಹೆಚ್ಚಿಸಿಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೆ. ನನಗೆ ನಾನು ಶ್ರದ್ಧೆ ಇಡಬಹುದಾದಂತಹ ಒಂದು ದೇವತಾ ಶಾಸ್ತ್ರ, ಒಂದು ತತ್ತ್ವ ಶಾಸ್ತ್ರ, ಒಂದು ಜೀವನ ಸಿದ್ಧಾಂತ ಬೇಕಾಗಿತ್ತು. ಶೈಕ್ಷಣಿಕ ಪರಿಶೀಲನೆಯ ಅಗ್ನಿ ಪರೀಕ್ಷೆಯಲ್ಲಿ ನಾಶವಾಗುವಂತಹ ಕೇವಲ ಧಾರ್ಮಿಕ ಭಾವನೆ ಬೇಕಾಗಿರಲಿಲ್ಲ.

ಆದುದರಿಂದ ವೈದಿಕ ಸಾಹಿತ್ಯವು ಯಾವುದನ್ನು ಬ್ರಹ್ಮನ್ ಎಂದು ಹೇಳುತ್ತದೆಯೋ ಅದನ್ನು ಕುರಿತಂತೆ ನಾನು ನನ್ನದೇ ಅನೌಪಚಾರಿಕ ರೀತಿಯಲ್ಲಿ ಜನಸಾಮಾನ್ಯನ ರೂಪಾಂತರಕ್ಕೆ ಬಂದೆ. ಇದು ಭಗವತ್ ಸಾಕ್ಷಾತ್ಕಾರವನ್ನು ಕುರಿತಂತೆ ಸಾಂಪ್ರದಾಯಿಕವಾಗಿ ಚರ್ಚಿಸಿದ ಮೂರು ಮಟ್ಟಗಳಲ್ಲಿ ಮೊದಲನೆಯದು. ಒಂದಕ್ಕಿಂತ ಮತ್ತೊಂದು ಮಟ್ಟವು ಹೆಚ್ಚು ಸ್ಪಷ್ಟ ಮತ್ತು ಕರಾರುವಾಕ್ಕಾಗಿದೆ. ಬಹುಶಃ ಇದನ್ನು ನಾನು ಒಂದು ದೃಷ್ಟಾಂತದೊಂದಿಗೆ ವಿವರಿಸುವುದು ಉತ್ತಮ.

ನನಗೆ ಬದುಕುವುದು ಬೇಕಾಗಿತ್ತು, ಶರತ್ಕಾಲ, ಚಳಿಗಾಲ ಮತ್ತು ವಸಂತ ಕಾಲ ಎಲ್ಲದರಲ್ಲಿಯೂ ಬದುಕಲು, ಅಸ್ತಿತ್ವದಲ್ಲಿರಲು ಬಯಸಿದ್ದೆ. ಭೂಮಿಯು ಸಾಯಬಹುದು, ಸೂರ್ಯನು ಸುಟ್ಟು ಹೋಗಬಹುದು, ನಿಶ್ಚಯವಾಗಿಯೂ ನನ್ನ ದೇಹವು ವಿಭಜಿತಗೊಳ್ಳಬಹುದು. ಆದರೆ ನಾನು ಉಳಿಯುವೆ. ನಾನು ಶಾಶ್ವತ.

ಎಲ್ಲ ನಶ್ವರ ವಿಷಯದೊಳಗೆ ನಾನು ಸಾಕ್ಷಾತ್ಕರಿಸಿಕೊಂಡ ಆಧ್ಯಾತ್ಮಿಕ ಸಾರವೂ ಕೂಡ ಶಾಶ್ವತ. ಮತ್ತು ಆ ಸಾರವೂ ನಾನು. ಆದರೆ, 'ನಾನು' ಎನ್ನುವ ಭಾವನೆಯು ಭ್ರಮೆ ಎಂದು ನಾನು ತೀರ್ಮಾನಿಸಿದೆ. ಹಂಗಾಮಿಯಾದ, ಸದಾ ಚಂಚಲವಾದ, ನಾನು ಭ್ರಮೆ ಎಂದು ಪರಿಗಣಿಸುವ ನನ್ನ ಸುತ್ತಲಿನ ಜಡ ಲೋಕದ ಹಂಗಾಮಿ ವಿಷಯ ಅಥವಾ ಸಂಗತಿ ಎಂದು ನಾನು ನಿರ್ಧರಿಸಿದೆ. ನಾನು ಅಸ್ತಿತ್ವದಲ್ಲಿರುವೆ, ಆದರೆ ಅನನ್ಯ, ವೈಯಕ್ತಿಕ ಜೀವಿಯಾಗಿ ಅಲ್ಲ ಎಂದು ನಾನು ನನ್ನ ಅಧ್ಯಯನ ಮತ್ತು ಊಹೆಗಳಿಂದ ತೀರ್ಮಾನಿಸಿದೆ. ಶಂಕರರ ಕ್ರೆಸ್ಟ್ ಜುವೆಲ್ ಆಫ್ ಡಿಸ್ಕ್ರಿಮಿನೇಷನ್ ಅನ್ನು ಓದುವಾಗ ನಾನು **ತತ್ ತ್ವಂ ಅಸಿ** ಎನ್ನುವ ಸಂಸ್ಕೃತ ವಾಕ್ಯವನ್ನು ಕಂಡೆ. ಅಂದರೆ 'ನೀವು ಅದು.' 'ನಾನು' ಎನ್ನುವುದು ವಿಷಯ-ವಿಷಯಿ ಭಾಗದಿಂದ ಹೊರಬರುತ್ತದೆ, ತನ್ನತನ ಮತ್ತು ಅಹಂನಿಂದ ಹೊರಬರುತ್ತದೆ ಮತ್ತು ನಿಜವಾದ ಅಸ್ತಿತ್ವ

ನಾನು ಲಾಸ್ ಏಂಜಲೀಸ್‌ನಲ್ಲಿ ವಾಸಿಸುತ್ತಿದ್ದೆ. ನಿರ್ಮಲವಾದ, ಸಾಮಾನ್ಯವಾಗಿ ಭಾರಿ ಮಳೆಯ ಅನಂತರ ನನಗೆ ದೂರದಲ್ಲಿ, ನಗರದ ಆಚೆಗೆ ಸ್ಯಾನ್ ಗೇಬ್ರಿಯಲ್ ಪರ್ವತ ಶ್ರೇಣಿಯು ಕಾಣುತ್ತಿತ್ತು. ಆದರೆ ಅವು ಸಾಮಾನ್ಯವಾಗಿ ವಾಯುಮಂಡಲದಲ್ಲಿ ಹೆಚ್ಚಾಗಿ ಮೋಡಗಳಂತೆ ಅಥವಾ ಪಥ ಭ್ರಂಶವಾಗಿ ತೋರುತ್ತ ಮಬ್ಬು ಕವಿದಂತೆ ಮತ್ತು ವಿಶಿಷ್ಟ ಲಕ್ಷಣಗಳಿಲ್ಲದಂತೆ ಕಾಣುತ್ತಿದ್ದವು. ಒಂದು ಭಾನುವಾರ ನಾನು ನನ್ನ ಪತ್ನಿ ಮತ್ತು ಮೂರು ವರ್ಷದ ಮಗನನ್ನು ಕರೆದುಕೊಂಡು ಮೌಂಟ್ ವಿಲ್ಸನ್‌ಗೆ ವಿಹಾರಕ್ಕೆಂದು ಹೊರಟೆ. ಕಾರಿನಲ್ಲಿ ಸಾಗುತ್ತಿದ್ದಂತೆಯೇ ನಮಗೆ ಪರ್ವತವು ಸ್ಪಷ್ಟವಾಗಿ ಕಾಣುತ್ತಿತ್ತು. ಮುಂದಿನ 15 ನಿಮಿಷಗಳಲ್ಲಿ ನಾವು ವಾಸ್ತವವಾಗಿ ಏಂಜಲೀಸ್ ಕ್ರೆಸ್ಟ್ ಹೆದ್ದಾರಿಯಲ್ಲಿ ಸಾಗುತ್ತಿದ್ದೆವು. ಅಲ್ಲಿ ಮನೆಗಳು, ಜಾನುವಾರು ಕೇಂದ್ರ ಮತ್ತು ಸಣ್ಣ ಅಡ್ಡ ರಸ್ತೆಯ ಗ್ರಾಮಗಳು ಕಂಡವು. ಈಗ ನಮಗೆ ಸ್ಯಾನ್ ಗೇಬ್ರಿಯಲ್ ಪರ್ವತ

ಶ್ರೇಣಿಯು ದಿಗಂತದಲ್ಲಿ ದೂರದ, ವಿಶಿಷ್ಟ ಲಕ್ಷಣಗಳಿಲ್ಲದ ಉಪಸ್ಥಿತಿಯಂತೆ ಕಾಣುತ್ತಿರಲಿಲ್ಲ. ಅದು ಜೀವನೋತ್ಸಾಹ ಮತ್ತು ಚಟುವಟಿಕೆಯಿಂದ ಕೂಡಿದ ಕಲ್ಪನೆಯಲ್ಲದ, ಸ್ಪಷ್ಟ ವಾಸ್ತವದಂತೆ ಕಾಣುತ್ತಿತ್ತು. ಅಲ್ಲಿ ಜನರು ವಾಸಿಸುತ್ತಿದ್ದರು ಮತ್ತು ಕೆಲಸ ಮಾಡುತ್ತಿದ್ದರು. ನಾವು ಕಾಲು ದಾರಿಯಲ್ಲಿ ನಡೆದೆವು, ಬಂಡೆಗಳನ್ನು ಏರಿದೆವು, ಹಿಮ ರಾಶಿಯನ್ನು ಕಂಡೆವು ಮತ್ತು ಅಸಾಧಾರಣ ಸಸ್ಯವರ್ಗವನ್ನು ಅನುಭವಿಸುತ್ತಿದ್ದೆವು. ನಾವು ಮೌಂಟ್ ವಿಲ್ಸನ್ ವೀಕ್ಷಣಾಲಯಕ್ಕೂ ಭೇಟಿ ನೀಡಿದೆವು. ಈ ಮೊದಲು ನಾವು ಊಹಿಸುತ್ತಿದ್ದುದನ್ನು ಈಗ ವಾಸ್ತವವಾಗಿ ನೋಡುವುದು ಸಾಧ್ಯವಾಗಿತ್ತು.

ಆದುದರಿಂದ, ಈ ದೃಷ್ಟಾಂತದಲ್ಲಿ ನಾನು ಭಗವಂತನನ್ನು ಸರ್ವ ವ್ಯಾಪಿ, ಶಾಶ್ವತ ಆಧ್ಯಾತ್ಮಿಕ ಅಸ್ತಿತ್ವದವನೆಂದು ಪ್ರೌಢಶಾಲೆ ವಿದ್ಯಾರ್ಥಿಗೆ ತಕ್ಕುನಾದ ರೀತಿಯಲ್ಲಿ ರೂಪಾಂತರಿಸಿರುವುದು, 20 ಮೈಲಿ ಹೊಗೆ ತುಂಬಿದ ಮಂಜಿನ ಮೂಲಕ ಸ್ಯಾನ್ ಗೆಬ್ರಿಯಲ್ ಪರ್ವತಗಳನ್ನು ನನ್ನ ಮಬ್ಬು ಕವಿದ ದೃಷ್ಟಿಯಿಂದ ನೋಡಿದಂತೆ ಆಗಿದೆ. ಪರ್ವತಗಳು ಕ್ಷಿತಿಜದಲ್ಲಿ ವಿಶಿಷ್ಟಗುಣಗಳಿಲ್ಲದಂತೆ ಕಂಡಿತು. ಭಗವತ್ ಸಾಕ್ಷಾತ್ಕಾರದ ಎರಡನೆಯ ಮಟ್ಟವು (ತಾಂತ್ರಿಕವಾಗಿ ಪರಮಾತ್ಮ ಸಾಕ್ಷಾತ್ಕಾರ ಎಂದು ಪ್ರಸಿದ್ಧಿ) ಪರ್ವತದತ್ತ ಹತ್ತಿರದ, ಸ್ಪಷ್ಟ ನೋಟ ಹರಿಸುವುದಾಗಿದೆ. ಆದರೆ ಅಂತಿಮ ಮಟ್ಟವು (ಭಗವಾನ್ ಸಾಕ್ಷಾತ್ಕಾರ) ಒಂದು ವಿಹಾರದಂತೆ, ಒಂದು ಏರುವ ಪ್ರಯಾಣದಂತೆ, ಒಂದು ಮೌಂಟ್ ವಿಲ್ಸನ್ ವೀಕ್ಷಣಾಲಯಕ್ಕೆ ಪ್ರವಾಸ ಮಾಡಿದಂತೆ ಮತ್ತು ಎಲ್ಲವೂ ಒಂದರಲ್ಲಿ ಮಾಡಿದಂತೆ. ನಾನು ಈಗಾಗಲೇ ಮೊದಲ ಮಟ್ಟವನ್ನು ಚರ್ಚಿಸಿದ್ದೇನೆ. ಈಗ ಎರಡನೆಯ ಮಟ್ಟವನ್ನು ಅರ್ಥಮಾಡಿಕೊಳ್ಳಲು ಈ ಕೆಳಗಿನ ದೃಶ್ಯವನ್ನು ಪರಿಗಣಿಸಿ, ಕಲ್ಪಿಸಿಕೊಳ್ಳಿ...

## ಯೋಗಿಯ ದೃಷ್ಟಾಂತ

ಹಿಮಾಲಯದಲ್ಲಿ ಯೋಗಿಯೊಬ್ಬ ಧ್ಯಾನ ನಿರತನಾಗಿದ್ದಾನೆ. ಅವನು ತುಂಬ ಕೃಶನಾಗಿದ್ದಾನೆ, ಸೊರಗಿದ್ದಾನೆ, ಅವನ ವಯಸ್ಸು ಅಗ್ರಾಹ್ಯವಾಗಿದೆ, ಕಾಲು ಮಡಚಿಕೊಂಡು, ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಧ್ಯಾನಾಸಕ್ತನಾಗಿದ್ದಾನೆ. ಅವನ ಆಹಾರ ತುಂಬ ಸರಳ, ಲಘು ಮತ್ತು ಕ್ರಮಬದ್ಧ. ಅವನು ಬಹಳ ಹಿಂದೆಯೇ ನಾಗರಿಕತೆಯೊಂದಿಗೆ ಎಲ್ಲ ಸಂಪರ್ಕವನ್ನು ಕಳಚಿಕೊಂಡಿದ್ದಾನೆ. ಅವನ ಮನಸ್ಸು ನೆಮ್ಮದಿಯಿಂದ ಕೂಡಿದೆ. ನಗರ ಸೌಲಭ್ಯಗಳಿಗೆ ಹಿಂದಿರುಗುವ ಹಾತೊರೆಯುವಿಕೆ ಇಲ್ಲ ಮತ್ತು ಇಂದ್ರಿಯ ಆಸಕ್ತಿಗಳು ಅವನಿಗೆ ಏನೂ ಅಡ್ಡಿ ಉಂಟುಮಾಡುವುದಿಲ್ಲ. ಲೈಂಗಿಕ ಆಸಕ್ತಿಗಳಿಂದ ಅವನು ಪೂರ್ಣ ಮುಕ್ತ. ಏಕಾಗ್ರತೆ ಭಂಗ ಪಡಿಸುವಂತಹ ಕೌಟುಂಬಿಕ ವಾತ್ಸಲ್ಯಗಳಿಲ್ಲ, ಆರ್ಥಿಕ ಒತ್ತಡ ಅಥವಾ ಜವಾಬ್ದಾರಿಗಳಿಲ್ಲ. ಅವನಿಗೆ ತನ್ನ ಜನ್ಮ ದೇಶದ ಬಗೆಗೆ ಪ್ರೀತಿ ವಾತ್ಸಲ್ಯಗಳಿಲ್ಲ, ಆದುದರಿಂದ ಅವನು ದೇಶಪ್ರೇಮದ ಭಾವನೆಗಳು ಮತ್ತು ಹೊಣೆ ಇಲ್ಲದವನು. ಅವನಿಗೆ ಲೌಕಿಕ ಮಹತ್ವಾಕಾಂಕ್ಷೆಗಳಿಲ್ಲ ಮತ್ತು ಅನೇಕ ವರ್ಷಗಳಿಂದ ಅಭ್ಯಸಿಸುತ್ತಿರುವ ತನ್ನ ಯೋಗ ಪ್ರಭುತ್ವದ ಬಗೆಗೆ ಇತರರಿಗೆ ತಿಳಿಸುವ ಲಕ್ಷ್ಯವೂ ಇಲ್ಲ. ನಿಜ, ಅವನು ನಾಗರಿಕತೆಗೆ ಹಿಂದಿರುಗಿ



ತನ್ನ ಪರಿಣತಿಯನ್ನು ಪ್ರದರ್ಶಿಸಬಹುದು. ಅವನು ಪ್ರಸಿದ್ಧ ಗುರುವಾಗಬಹುದು, ತನ್ನ ಯೋಗಶಕ್ತಿಯನ್ನು ತೋರಬಹುದು, ಅನೇಕ ಅನುಯಾಯಿಗಳನ್ನು ಆಕರ್ಷಿಸಬಹುದು ಮತ್ತು ಬಹುಶಃ ತಾನು ಭಗವಂತನ ಅವತಾರ ಎಂದು ಜಾಹೀರುಮಾಡಿಕೊಳ್ಳಬಹುದು. ಆದರೆ ಅಂತಹ ಲೌಕಿಕ ಅಪೇಕ್ಷೆಗಳು ಯೋಗದ ಗಂಭೀರ ವಿದ್ಯಾರ್ಥಿಯ ಪತನವೆಂದು ಅವರಿಗೆ ಗೊತ್ತು.

ಅವರೇನು ಮಾಡುತ್ತಿದ್ದಾರೆ? ಅವರು ಪರಮ ಸತ್ಯನನ್ನು ಕುರಿತ ಮಸುಕಾದ, ದೂರದ, ನಿರಾಕಾರ ಬ್ರಹ್ಮನ್ ಕಲ್ಪನೆಯ ಸೀಮಿತಗಳ ಆಚೆಗೆ ಹೋಗಲು ಪ್ರಯತ್ನಿಸುತ್ತಿದ್ದಾರೆ. ಅಂತರಂಗದಲ್ಲಿ ಧ್ಯಾನಿಸಲು ಅವರಿಗೆ ತರಬೇತಿ ನೀಡಲಾಗಿದೆ. ಈ ವಿಧಾನವು ತುಂಬ ಕಷ್ಟಕರ. ಅವಿಚಲಿತ ಸ್ಥಿರಸಂಕಲ್ಪ, ಉತ್ತಮ ಆರೋಗ್ಯ, ತಾಳ್ಮೆ, ಅತ್ಯುತ್ತಮ ಮಾನಸಿಕ ಶಕ್ತಿ, ಸ್ಪಷ್ಟತೆ ಮತ್ತು ದೀರ್ಘ ಜೀವನದ ಅಗತ್ಯ ಅದಕ್ಕಿದೆ. ಈಗ ಅವರು ಸುದೀರ್ಘ ಕಾಲದಿಂದ ಎಲ್ಲ ರೀತಿಯ ಲೌಕಿಕ ನಿರ್ಬಂಧಗಳು ಮತ್ತು ಅರಿವುಗಳಿಂದ ಬಿಡುಗಡೆ ಹೊಂದಿದ್ದಾರೆ. ಆಧ್ಯಾತ್ಮಿಕ ಆನಂದದಲ್ಲಿ ಶಾಶ್ವತ, ಜ್ಞಾನ ಮತ್ತು ಪರಮಾನಂದದ ಚತುರ್ಭುಜ ವಿಷ್ಣು ಮೂರ್ತಿಯನ್ನು, ಪರಮಾತ್ಮನನ್ನು ತಮ್ಮ ಹೃದಯದೊಳಗೆ ಇಟ್ಟುಕೊಂಡಿದ್ದಾರೆ.

ಪರಮಸತ್ಯನ ಈ ರೂಪವನ್ನು ಧ್ಯಾನಿಸುವುದರಲ್ಲಿ ತಲ್ಲೀನರಾಗಿರುವ ನಮ್ಮ ಪರಿಪೂರ್ಣ ಯೋಗಿಯು ತನ್ನ ಅರ್ಥಗ್ರಹಿಕೆಯಲ್ಲಿ ಬ್ರಹ್ಮನ್ ಸಾಕ್ಷಾತ್ಕಾರದಲ್ಲಿ ಮಾತ್ರ ನೆಲೆಸಿರುವ ಅಲೌಕಿಕವಾದಿಗಿಂತ ಹೆಚ್ಚು ಪ್ರಗತಿ ಹೊಂದಿದ್ದಾರೆ. ಸರ್ವವ್ಯಾಪಿ ಬ್ರಹ್ಮನ್ ದೇವೋತ್ತಮ ಪರಮ ಪುರುಷನ ದೈಹಿಕ ಪ್ರಭೆಯಾಗಿದ್ದರೆ, ಪರಮಾತ್ಮನು ಅವನ ವೈಯಕ್ತಿಕ ವಿಸ್ತರಣೆ. ಪರಮ ಪುರುಷನು ಅಚಿಂತ್ಯ ಶಕ್ತಿಶಾಲಿ ಮತ್ತು ಅವನು ಅಸಂಖ್ಯ ರೂಪಗಳಲ್ಲಿ ವಿಸ್ತರಣೆಗೊಂಡಿದ್ದಾನೆ, ಪ್ರತಿಯೊಂದೂ ಕೂಡ ಪರಿಪೂರ್ಣ ಮತ್ತು ಸಂಪೂರ್ಣ. ಇದು

ಪರಮಾತ್ಮ, ಪ್ರತಿಯೊಂದು ಜೀವಿಯ ಹೃದಯದಲ್ಲಿರುವ ಸಾಕ್ಷಿ, ನಿಯಂತ್ರಕ ಮತ್ತು ಮಿತ್ರ. ನಮ್ಮ ಸ್ಯಾನ್ ಗೇಬ್ರಿಯಲ್ ಪರ್ವತ ದೃಷ್ಟಾಂತದಲ್ಲಿ, ನಮ್ಮ ಪರಮಾತ್ಮ ಸಾಕ್ಷಾತ್ಕಾರ ಯೋಗಿಯು ವಿವರವಾಗಿ ಅಲ್ಲದಿದ್ದರೂ ಪರ್ವತವನ್ನು ಸ್ಪಷ್ಟವಾಗಿ ನೋಡುವಷ್ಟು ಹತ್ತಿರದಲ್ಲಿ ಇರುವವರು. ಪರಮಸತ್ಯನ ಸಾಕ್ಷಾತ್ಕಾರ ಅವರಿಗಿದೆ, ಆದರೆ ಪೂರ್ಣವಾಗಿ ಅಲ್ಲ. ಅವರು ದೇವೋತ್ತಮ ಪರಮ ಪುರುಷನನ್ನು ಇನ್ನೂ ಸಾಕ್ಷಾತ್ಕರಿಕೊಳ್ಳಬೇಕಾಗಿದೆ. ಈ ಅಂತಿಮ ಸಾಕ್ಷಾತ್ಕಾರವನ್ನು ವೈದಿಕ ಸಾಹಿತ್ಯದಲ್ಲಿ ಭಗವಾನ್ ಸಾಕ್ಷಾತ್ಕಾರ ಎನ್ನುತ್ತಾರೆ.

## ದೇವ ಸಾಕ್ಷಾತ್ಕಾರ

ದೇವೋತ್ತಮ ಪರಮ ಪುರುಷ (ಭಗವಾನ್) ಎಂದರೆ ಕೃಷ್ಣ. ಇದನ್ನು ಅರ್ಥಮಾಡಿಕೊಂಡವರು ದೇವ ಸಾಕ್ಷಾತ್ಕಾರದ ಇತರ, ಅಪೂರ್ಣ ಹಂತಗಳನ್ನು ದಾಟಿರುತ್ತಾರೆ. ಆದರೆ ಭಗವಾನ್ ಸಾಕ್ಷಾತ್ಕಾರವು ತಾತ್ತ್ವಿಕ ಊಹಪೋಹ ಅಥವಾ ಯೋಗದ ಧ್ಯಾನಗಳಿಂದ ಸಾಧ್ಯವಿಲ್ಲ. ಬದಲಿಗೆ, ದೇವೋತ್ತಮ ಪರಮ ಪುರುಷನ ಕೃಪೆಯನ್ನು ಅವನ ಪ್ರತಿನಿಧಿ, ಶುದ್ಧ ಭಕ್ತನ ಮೂಲಕ ಪಡೆದಾಗ ಮಾತ್ರ ಅದು ಸಾಧ್ಯ.

ಭಗವಂತನ ಶುದ್ಧ ಭಕ್ತನು ಈಗಾಗಲೇ ಭಗವಾನ್ ಸಾಕ್ಷಾತ್ಕಾರ ಹಂತವನ್ನು ಪಡೆದಿದ್ದಾನೆ ಮತ್ತು ಭಗವಂತನ ವಿಶೇಷ ಕೃಪೆಯನ್ನು ಇತರರಿಗೆ ಹರಡುವುದನ್ನು ಬಿಟ್ಟರೆ ಅವರಿಗೆ ಈ ಭೌತಿಕ ಲೋಕದಲ್ಲಿ ಬೇರೆ ಏನೂ ವ್ಯವಹಾರವಿಲ್ಲ. ಭಗವಾನ್ ಸಾಕ್ಷಾತ್ಕಾರಗೊಂಡ ವ್ಯಕ್ತಿಯು ಪರಮ, ಆಧ್ಯಾತ್ಮಿಕ ಲೋಕವನ್ನು ಪ್ರವೇಶಿಸಿದ್ದಾನೆ ಮತ್ತು ಅಲ್ಲಿ ಅವನು ದೇವೋತ್ತಮ ಪರಮ ಪುರುಷ ಶ್ರೀ ಕೃಷ್ಣನ ಅಲೌಕಿಕ ಸೇವೆಯಲ್ಲಿ ಶಾಶ್ವತವಾಗಿ ನಿರತನಾಗುತ್ತಾನೆ. ಆದರೆ ಇತರರಿಗೂ ದೈವ ಸಾಕ್ಷಾತ್ಕಾರದ ಅತ್ಯುನ್ನತ ಮಟ್ಟವನ್ನು ತಲಪಿ ತಮ್ಮ ಜೀವನವನ್ನು ಪರಿಪೂರ್ಣಗೊಳಿಸುವಂತೆ ಮಾಡಲು ಅವನು ಈ ಭೌತಿಕ ಲೋಕಕ್ಕೆ ಬರುತ್ತಾನೆ.

## ಭಗವಾನ್ ಸಾಕ್ಷಾತ್ಕಾರ

ಒಮ್ಮೆಲೆ ದಾರ್ಶನಿಕನು (ಅಲೌಕಿಕವಾದಿಯು) ಪರಮಸತ್ಯನನ್ನು ನಿರಾಕಾರ, ಸರ್ವವ್ಯಾಪಿ ಬ್ರಹ್ಮನ್ (ಮೊದಲ ಹೆಜ್ಜೆ) ಮತ್ತು ಹೃದಯದಲ್ಲಿನ ಪರಮಾತ್ಮ (ಎರಡನೆಯ ಹೆಜ್ಜೆ) ಎಂದು ಅರ್ಥಮಾಡಿಕೊಳ್ಳುವ ಶ್ರಮದಾಯಕ ಪಥವನ್ನು ಪೂರ್ಣಗೊಳಿಸಿದಾಗ, ಅವನು ಅದಾಗಲೇ ಸಂಪೂರ್ಣವಾಗಿ ಭಗವಾನ್ ಸಾಕ್ಷಾತ್ಕಾರ ಹೊಂದಿದ ಮತ್ತು ಪರಮಸತ್ಯನೊಂದಿಗೆ ಒಂದಾಗಿ ಅವನ ಭಕ್ತಿಸೇವೆಯಲ್ಲಿ ತೊಡಗಿರುವ ಶುದ್ಧ ಭಕ್ತನಿಗೆ ಶರಣಾಗಬೇಕು. ಈ ರೀತಿ, ಅಂತಹ ಭಗವಾನ್ ಸಾಕ್ಷಾತ್ಕಾರಗೊಂಡ ವ್ಯಕ್ತಿಯಿಂದ ಮಾರ್ಗದರ್ಶನವನ್ನು ಪಡೆಯುತ್ತ ದಾರ್ಶನಿಕನು (ಅಲೌಕಿಕವಾದಿಯು) ತನ್ನ ತರಬೇತಿಯನ್ನು ಪೂರ್ಣಗೊಳಿಸಿ ದೈವ ಸಾಕ್ಷಾತ್ಕಾರದ ಮೂರನೆಯ ಮತ್ತು ಕೊನೆಯ ಹಂತಕ್ಕೆ ಬರಬಹುದು.

ಆದರೆ ತಾತ್ತ್ವಿಕ ಊಹೆ ಮತ್ತು ಯೋಗ ಧ್ಯಾನದಲ್ಲಿ ವ್ಯಕ್ತಿಯು ಅದಾಗಲೇ ಪ್ರಗತಿ ಹೊಂದಿಲ್ಲದಿದ್ದರೆ? ಅತ್ಯುನ್ನತ ಸತ್ಯವನ್ನು ಅರಿಯುವಲ್ಲಿ ಅವನು ಅನನುಕೂಲ ಪರಿಸ್ಥಿತಿಯಲ್ಲಿರುವನೇ?

ಇಲ್ಲ. ಪರಿಶುದ್ಧ ಭಕ್ತನ ಕೃಪೆ ಎಷ್ಟು ಶಕ್ತಿಯುತವೆಂದರೆ ಅದನ್ನು ಪಡೆದವರು ದೇವೋತ್ತಮ ಪರಮ ಪುರುಷನಿಗೆ ಸೇವೆಗೈಯುವ ಆಧ್ಯಾತ್ಮಿಕ ಸತ್ಯವನ್ನು ಪ್ರವೇಶಿಸಬಹುದು. ಭಗವಾನ್ ಸಾಕ್ಷಾತ್ಕಾರಗೊಂಡ ಪರಿಶುದ್ಧ ಭಕ್ತನು ಆಕಾಂಕ್ಷಿ ದಾರ್ಶನಿಕನಿಗೆ ಪರಿಪೂರ್ಣತೆಯನ್ನು ಸಾಧಿಸಲು ಮಾರ್ಗದರ್ಶನ ನೀಡುತ್ತ ಆಧ್ಯಾತ್ಮಿಕ ಗುರುವಾಗಿ ಸೇವೆ ಸಲ್ಲಿಸುತ್ತಾನೆ. ಅವನಿಗೆ ಪರಮಸತ್ಯ ವಿಜ್ಞಾನವನ್ನು ಬೋಧಿಸುತ್ತಾನೆ ಮತ್ತು ಭೌತಿಕ ಲೋಕ ಹಾಗೂ ಲೌಕಿಕ ಮನಸ್ಸು, ಪ್ರಜ್ಞೆಗೆ ಮೀರಿದುದಾದರೂ ದೇವೋತ್ತಮ ಪರಮ ಪುರುಷನ ಅಲೌಕಿಕ ರೂಪ, ಗುಣ, ಲೀಲೆ ಮತ್ತು ನಾಮಗಳ ಬಗೆಗೆ ಪೂರ್ಣವಾಗಿ ಪರಿಚಯಿಸುತ್ತಾನೆ. ಇದು ಪರಮ ಪುರುಷನ ಪರಿಶುದ್ಧ ಭಕ್ತನಿಗೆ ಇರುವ ವಿಶೇಷ ಶಕ್ತಿ ಮತ್ತು ಪ್ರಾಮಾಣ್ಯ: ಅಲೌಕಿಕ ಲೋಕದವನಾಗಿರುವುದರಿಂದ ಅವನು ಆ ಶಾಶ್ವತ ಸತ್ಯವನ್ನು ಯಾವುದೇ ಪ್ರಾಮಾಣಿಕ, ವಿಧೇಯ ಸೇವಕನಿಗೆ ತಿಳಿಸಿಕೊಡಬಹುದು. ಮುಖ್ಯವಾಗಿ ಪರಮ ಪ್ರಭುವಿನ ಅಲೌಕಿಕ ನಾಮಗಳನ್ನು ಜಪಿಸುವ ಮೂಲಕ ಅವನಿಗೆ ತರಬೇತಿ ನೀಡುತ್ತಾನೆ: ಹರೇ ಕೃಷ್ಣ, ಹರೇ ಕೃಷ್ಣ, ಕೃಷ್ಣ ಕೃಷ್ಣ ಹರೇ ಹರೇ / ಹರೇ ರಾಮ, ಹರೇ ರಾಮ, ರಾಮ ರಾಮ ಹರೇ ಹರೇ.

ಭಗವಾನ್ ಸಾಕ್ಷಾತ್ಕಾರಗೊಂಡ ಆಧ್ಯಾತ್ಮಿಕ ಗುರುವು ಭಗವಂತನ ಸೇವಕನಾಗಿ ತನ್ನ ಶಾಶ್ವತ ಸ್ಥಾನವನ್ನು ಪರಿಪೂರ್ಣವಾಗಿ ಅರ್ಥಮಾಡಿಕೊಳ್ಳುವುದರಿಂದ ಅವನು ಈ ಗ್ರಹಿಕೆಯನ್ನು ತನ್ನ ಶಿಷ್ಯನಿಗೆ ಪರಿಪೂರ್ಣವಾಗಿ ಶ್ರುತಪಡಿಸುತ್ತಾನೆ. ಈ ಮೂಲಕ ಶಿಷ್ಯನನ್ನು ಅಲೌಕಿಕ, ಪ್ರೀತಿಯ ಸೇವೆಯ ಸ್ಥಾನಕ್ಕೆ ಏರಿಸುತ್ತಾನೆ. ಹೀಗೆ, ತಾನು ಭಗವಂತನಲ್ಲಿ ಒಂದಾದರೂ ಅದು ಪ್ರಮಾಣದಲ್ಲಿ ಅಲ್ಲ, ಗುಣದಲ್ಲಿ ಎಂದು ಶಿಷ್ಯನು ಅರಿಯುತ್ತಾನೆ. ಭಗವಂತನು ದೊಡ್ಡವನು, ಆದರೆ ಅವನು ಕಿರಿಯನು. ದೇವರು ಮಾಲೀಕ, ಆದರೆ ಅವನು ಸೇವಕ.



ಪರಮ ಸತ್ಯನ ಇಡೀ ಚಿತ್ರವು ಈಗ ಕೇಂದ್ರ ಬಿಂದುವಾಗುತ್ತದೆ. ದೇವೋತ್ತಮ ಪರಮ ಪುರುಷನಿಗೆ ಸಂಬಂಧಿಸಿದಂತೆ ಭಗವಾನ್ ಸಾಕ್ಷಾತ್ಕಾರದ ಕೆಳ ಹಂತಗಳನ್ನು ಅವುಗಳ ಯಥಾ ದೃಷ್ಟಿಯಲ್ಲಿ ನೋಡಬಹುದು. ಉದಾಹರಣೆಗೆ, ನಾನು ಕಾಲೇಜಿನಲ್ಲಿ ರೂಪಿಸಿಕೊಂಡ ಆ ನಿರಾಕಾರ ಅಭಿಪ್ರಾಯಗಳನ್ನೇ ಗಮನಿಸಿ. ಭಗವಂತನು ಸರ್ವವ್ಯಾಪಿ ಆಧ್ಯಾತ್ಮಿಕ ಸತ್ಯ ಎನ್ನುವ ಕಲ್ಪನೆ ನನಗಿತ್ತು ಮತ್ತು ಈ ಭೌತಿಕ ಲೋಕದ ಎಲ್ಲ ಬದಲಾವಣೆಗಳ ಮೂಲಕ ಮುಂದುವರಿಯುತ್ತ ನಾನು ಆಧ್ಯಾತ್ಮಿಕ ಮತ್ತು ಶಾಶ್ವತ ಎಂದು ಪ್ರತಿಪಾದಿಸಿದೆ. ಅಷ್ಟರಮಟ್ಟಿಗೆ ಸರಿಯಾಗಿತ್ತು. ಆದರೆ ಕೆಲವು ಮುಖ್ಯ ಅಂಶಗಳ ವಿಷಯದಲ್ಲಿ ನನ್ನದು ತಪ್ಪಾಗಿತ್ತು.

## ತಪ್ಪು ಎಲ್ಲಿ?

ನಾನು ಎಲ್ಲಿ ತಪ್ಪಾಗಿದ್ದೆ? ನಶ್ವರ ಅಥವಾ ಅಲ್ಪಕಾಲಿಕದ ಆಚೆಗೆ ಹೋಗುವ ನನ್ನ ಕಾತರದಲ್ಲಿ ನಾನು ಈ ಲೌಕಿಕ ದೇಹ ಎನ್ನುವ ಹುಸಿ ಅಹಂ ಅನ್ನು ತಿರಸ್ಕರಿಸಿದ್ದು ಮಾತ್ರವಲ್ಲ, ನಾನು ನಿಜವಾದ ಅಹಂನ ವಿಶಾಲ ನೋಟವನ್ನೂ ತಿರಸ್ಕರಿಸಿದ್ದೆ. ನನ್ನ ಆಗಿನ ಅಲ್ಪ ಆಧ್ಯಾತ್ಮಿಕ ಕಲಿಕೆಯು ಅಪಾಯಕಾರಿ ಎನ್ನುವುದು ಈಗ ತಿಳಿಯುತ್ತದೆ. ನನ್ನ ಲೌಕಿಕ ಗುರುತನ್ನು ನಿರಾಕರಿಸುವುದು ಒಳ್ಳೆಯದಾದರೂ ಆಧ್ಯಾತ್ಮಿಕ ಗುರುತಿನ ಸಾಧ್ಯತೆಯನ್ನು ತಿರಸ್ಕರಿಸುವುದು ಸ್ನಾನದ ನೀರಿನೊಂದಿಗೆ ಮಗುವನ್ನೂ ಹೊರಗೆ ಚೆಲ್ಲಿದಂತೆ. ಅಹಂರಹಿತ ಸ್ಥಿತಿಯನ್ನು ಹುಡುಕುತ್ತ ನಾನು ಆಧ್ಯಾತ್ಮಿಕ ಆತ್ಮಹತ್ಯೆಗೆ ಆಹ್ವಾನ ನೀಡುತ್ತಿದ್ದೆ. ನನಗೆ ಯಾವುದಾದರೂ ವೈಯಕ್ತಿಕ ಆಧ್ಯಾತ್ಮಿಕ ಗುರುತು ಇದೆ ಎನ್ನುವುದನ್ನು ನಾನು ನಿರಾಕರಿಸುತ್ತಿದ್ದೆ ಮತ್ತು ದೇವರು ಒಬ್ಬ ವ್ಯಕ್ತಿಯಾಗಿರಬಹುದು ಎನ್ನುವುದನ್ನು ನಿರಾಕರಿಸುತ್ತಿದ್ದೆ. ಹೀಗೆ, ದೇವರನ್ನು ಅಸೀಮಿತ ಎಂದು ಮಾಡುವ ಪ್ರಯತ್ನದಲ್ಲಿ ನಾನು ಅವನನ್ನು ನಿರ್ಬಂಧಿಸಿದ್ದೆ: "ದೇವರಿಗೆ ವ್ಯಕ್ತಿತ್ವ, ಆಕಾರ, ಅಪೇಕ್ಷೆಗಳಿರುವುದು ಸಾಧ್ಯವಿಲ್ಲ." ನಾನು ದೇವರನ್ನು ನಿರ್ಬಂಧಿಸುತ್ತಿದ್ದುದಲ್ಲದೆ ನಾನು ಅವನ ಸ್ಥಾನವನ್ನು ಅತಿಕ್ರಮಿಸಲು ಪ್ರಯತ್ನಿಸುತ್ತಿದ್ದೆ.

ಅದು ಸರಿ. ಆಧ್ಯಾತ್ಮಿಕ ಆತ್ಮವಾಗಿ ನಾನು ಮತ್ತು ವೈಯಕ್ತಿಕ ಆಧ್ಯಾತ್ಮಿಕ ವ್ಯಕ್ತಿಯಾಗಿ (ಪುರುಷನಾಗಿ) ದೇವರ ನಡುವೆ ವ್ಯತ್ಯಾಸ ಇಲ್ಲದಿರುವುದರಿಂದ, ಎಲ್ಲವೂ ಒಂದೇ ಮತ್ತು ಒಂದೇ ಎಲ್ಲವೂ. ಬೇರೆ ಮಾತಿನಲ್ಲಿ ಹೇಳುವುದಾದರೆ, ನಾನೇ ದೇವರೆಂದು ನಾನು ಯೋಚಿಸಿದೆ! ನನ್ನನ್ನು ನಂಬಿ, ನಾನು ಓದುತ್ತಿದ್ದ ಪುಸ್ತಕಗಳೂ ಕೂಡ ಅದೇ ಮಾರ್ಗವನ್ನು ಪೋಷಿಸುತ್ತಿದ್ದವು. ನಮ್ರತೆ ಮತ್ತು ಸೇವೆಯನ್ನು ಎತ್ತಿಹಿಡಿಯುತ್ತ ಈ ಗುರುಗಳೆನ್ನಿಸಿಕೊಳ್ಳುವವರು ನಾನು ದೇವರು ಎಂದು ಯೋಚಿಸುವಂತೆ ಮುಖಸ್ತುತಿ ಮಾಡುತ್ತಿದ್ದರು. (ಆದರೆ ನೀವೇ ಪರಮ ಎಂದು ನೀವು ಯೋಚಿಸಿದರೆ ನಮ್ರತೆಯ ಸಾಧ್ಯತೆಯಾದರೂ ಎಲ್ಲಿದೆ?)

ಆರಾಧನೆಯ ವಿಷಯದಲ್ಲಿ ಅದೆಲ್ಲ ಸರಿ. ಆದರೆ ಉನ್ನತ ಮಟ್ಟದಲ್ಲಿ ಅದಕ್ಕೆ ಏನೂ ಅರ್ಥವಿಲ್ಲ ಎನ್ನಿಸಿತು. ಆದರೂ, ನಾನು ಭಗವಂತನಿಂದ ಪ್ರತ್ಯೇಕ ವ್ಯಕ್ತಿ ಅಥವಾ ಗುರುತು ಎನ್ನುವ ಅಭಿಪ್ರಾಯವು ಭ್ರಮೆ ಎಂದು ಇಟ್ಟುಕೊಂಡರೆ, ಆರಾಧನೆಯನ್ನು ಕುರಿತಂತೆ ಈ ಬೊಬ್ಬೆ, ಅಬ್ಬರವೇಕೆ? ಪೂಜೆಯು ಕಡಮೆ ಬುದ್ಧಿವಂತರಿಗೆ, ಮಾನವೀಕರಣದಲ್ಲಿ ನಂಬಿಕೆ ಉಳ್ಳವರಿಗೆ ಮತ್ತು ಮೂಲವಾಸಿಗಳಿಗಾಗಿ. ನಿಜ, ನೀವು ನಿಮ್ಮ ಬಗೆಗೆ ಎಚ್ಚರದಿಂದ ಇದ್ದರೆ ಮತ್ತು ನೀವು ವಿಷಯ-ವಿಷಯಿ ಭಾಗಕ್ಕೆ ಪತನಹೊಂದದಿದ್ದರೆ ಆಗ ಆರಾಧನೆಯು ಸಹಾಯಕ. ಹೀಗೆ ನನ್ನ ಹೊಸದಾಗಿ ಕಂಡುಕೊಂಡ ಕುತರ್ಕವು ಕ್ರಮೇಣ ಭಗವಂತನನ್ನು ಕುರಿತ ನನ್ನ ಎಲ್ಲ ಕೊಂಡಾಟವನ್ನು ಭಕ್ತಿರಹಿತ, ಹೊಗಳುಭಟ್ಟನ ಅಗೌರವಯುತ ಉದ್ಗಾರಗಳಾಗಿ ತಿರುಚಿಕೊಂಡಿತು. **ತತ್ ತ್ವಂ ಅಸಿ** : 'ನೀನು ಅದು.' ಹೌದು, ನಾನು ಅದು. ನಿಜವಾಗಿಯೂ ನಾನು ಅದು. ಧರ್ಮಗ್ರಂಥಗಳು ನಿರಾಕಾರ ರೂಪವನ್ನು ಕುರಿತು ವರ್ಣಿಸುವ ತೊಂದರೆಯನ್ನೇಕೆ ತೆಗೆದುಕೊಳ್ಳುತ್ತವೆ ಎಂದು ನಿಮಗೆ ಅಚ್ಚರಿಯಾಗಬಹುದು. ಅತ್ಯುನ್ನತ ಸಾಕ್ಷಾತ್ಕಾರ, ದೇವೋತ್ತಮ ಪರಮ ಪುರುಷನತ್ತ ಏಕೆ ಜಿಗಿಯಬಾರದು? ಅದಕ್ಕೆ ಕಾರಣವಿದೆ. ದೇವರು ಮತ್ತು ಆಧ್ಯಾತ್ಮಿಕ ವಾಸ್ತವಿಕತೆ ಲೌಕಿಕ ವಾಸ್ತವಿಕತೆಗೆ ತದ್ವಿರುದ್ಧವಾದವು ಎನ್ನುವುದನ್ನು ಅರ್ಥಮಾಡಿಕೊಳ್ಳುವುದೇ ಆಧ್ಯಾತ್ಮಿಕ ಜೀವನದ ಮೊದಲ ಪಾಠ. ದೇವರನ್ನು ನಮ್ಮ ತೀರ ಲೌಕಿಕ ಮನಸ್ಸುಗಳಿಗೆ ಒಬ್ಬ ವ್ಯಕ್ತಿ ಎಂದು ಪ್ರಸ್ತುತಪಡಿಸಿದರೆ, ನಾವು ಅವನನ್ನು ಸಾಮಾನ್ಯ ಮನುಷ್ಯನೆಂದು ಭಾವಿಸುತ್ತೇವೆ. ಆದುದರಿಂದ ದೇವರಿಗೆ ಲೌಕಿಕ ಆಕಾರ ಮತ್ತು ಗುಣಗಳಿಲ್ಲದಿರುವುದರಿಂದ ಧರ್ಮಗ್ರಂಥಗಳು ಅವನನ್ನು ಆಕಾರ ಮತ್ತು ಗುಣಗಳಿಲ್ಲದವನೆಂದು ವರ್ಣಿಸುತ್ತವೆ. ಆದರೆ ಹೊಸದಾಗಿ ದೀಕ್ಷೆ ಪಡೆದವರ ಸಾಮಾನ್ಯ ಪ್ರವೃತ್ತಿ ನನ್ನದರಂತೆಯೆ. ಅಂದರೆ ಸ್ನಾನದ ನೀರಿನೊಂದಿಗೆ ಮಗುವನ್ನೂ ಹೊರಗೆಸೆಯುವುದು.

## ಪ್ರಭುಪಾದರಿಂದ ಅರಿವು

ಭಗವದ್ಗೀತೆಯಂತಹ ವೈದಿಕ ಸಾಹಿತ್ಯ ಮತ್ತು ನನ್ನ ಆಧ್ಯಾತ್ಮಿಕ ಗುರು ಶ್ರೀಲ ಪ್ರಭುಪಾದರ ಬೋಧನೆಗಳಿಂದ ನಿಜವಾದ ಆಧ್ಯಾತ್ಮಿಕ ಪೂರ್ಣತೆ, ಏಕತ್ವ ಏನು ಎನ್ನುವುದು ನನಗೆ ಈಗ ಅರ್ಥವಾಗುತ್ತದೆ. ದೇವರನ್ನು ಕುರಿತಂತೆ ಸಾಕಾರ ಕಲ್ಪನೆಯನ್ನು ಹೊಂದಲು ನೀವು ಮಾನವೀಕರಣ ತತ್ತ್ವಕ್ಕೆ ಒಪ್ಪಿಗೆ ಸೂಚಿಸಬೇಕಾಗಿಲ್ಲ. ಮಾನವೀಕರಣವು ವೈಯಕ್ತಿಕ ಗುಣ ವಿಶೇಷಗಳು ಪರಮನಿಗೆ ಸೇರಿದ್ದೆಂದು ಮಾನವ ಜೀವಿಯು ತಾತ್ತ್ವಿಕವಾಗಿ ಹೇಳುವುದಕ್ಕೆ ಸಂಬಂಧಿಸಿದೆ. ಆದರೆ ಇದು ಊಹಾತ್ಮಕ ಕಲ್ಪನೆ ಮತ್ತು ದೇವೋತ್ತಮ ಪರಮ ಪುರುಷನ ಸಾಕ್ಷಾತ್ಕಾರಕ್ಕೆ ಏನೂ ಸಹಾಯ ಮಾಡುವುದಿಲ್ಲ. ಭಗವಾನ್ ಸಾಕ್ಷಾತ್ಕಾರದಲ್ಲಿ ವ್ಯಕ್ತಿಯು ಅತ್ಯುನ್ನತ ಹಂತವನ್ನು ತಲಪಿದಾಗ, ಶ್ರೀ ಕೃಷ್ಣನೇ ಸ್ವತಃ ಪ್ರಕಟಪಡಿಸಿಕೊಳ್ಳುತ್ತಾನೆ. ಮೈಕೆಲ್ ಏಂಜಲೋನ ಕಲಾಕೃತಿಗಳಲ್ಲಿರುವಂತೆ ಭಗವಂತನು ವೈಯಕ್ತಿಕ ಲಕ್ಷಣಗಳನ್ನು ಹೊಂದಿದ್ದಾನೆಂದು ಕಲ್ಪಿಸಿಕೊಳ್ಳುವ ಪ್ರಶ್ನೆ ಇದಲ್ಲ. ದೇವರು ತನ್ನ ಆಕಾರದಲ್ಲಿಯೇ ಮಾನವನನ್ನು ಸೃಷ್ಟಿಸುತ್ತಾನೆ. ಅದು ಪ್ರತಿಯಾಗಿ ಅಲ್ಲ. ಭಗವಂತನ ಆಕಾರವು ಪೂರ್ಣವಾಗಿ ಆಧ್ಯಾತ್ಮಿಕ, ಅಲೌಕಿಕ, ಶಾಶ್ವತ. ಮಾನವನ ಆಕಾರವು ಲೌಕಿಕ ಮತ್ತು ತಾತ್ಕಾಲಿಕ. *

# ನಾಮಾಮೃತ



## ಪರಮ ಪ್ರಭುವು ತನ್ನ ಸೃಷ್ಟಿಯಿಂದ ಏಕಕಾಲದಲ್ಲಿ ಭಿನ್ನನೂ ಅಭಿನ್ನನೂ ಆಗಿರುತ್ತಾನೆ.

ಸಾಂಖ್ಯದರ್ಶನವು ಹೇಳುವ ಈ ಅಚಿಂತ್ಯಭೇದಾಭೇದ ತತ್ತ್ವವನ್ನು ಚೈತನ್ಯರು ಜನರಿಗೆ ಉಪದೇಶಿಸಿದರು. ಚೈತನ್ಯರು ಈ ತತ್ತ್ವೋಪದೇಶವನ್ನು ಪ್ರಭುವಿನ ನಾಮ ಸಂಕೀರ್ತನೆಯ ಮೂಲಕ ಮಾಡಿದರು. ಪ್ರಭುವಿನ ಪವಿತ್ರ ನಾಮವು ಅವನ ಶಬ್ದಾವತಾರವೇ ಆಗಿದೆ. ಆದ್ದರಿಂದ ಪ್ರಭುವು ಪರಮ ಪರಿಪೂರ್ಣನು. ಆದುದರಿಂದ ಅವನ ಪವಿತ್ರ ನಾಮಕ್ಕೂ ದಿವ್ಯರೂಪಕ್ಕೂ ವ್ಯತ್ಯಾಸವಿಲ್ಲವೆಂದು ಪ್ರಭು ಚೈತನ್ಯರು ಬೋಧಿಸಿದರು. ಪ್ರಭುವಿನ ಪವಿತ್ರ ನಾಮ ಸಂಕೀರ್ತನೆ ಮಾಡುವುದರಿಂದ ಶಬ್ದ ತರಂಗಗಳ ಮೂಲಕ ಪರಮ ಪ್ರಭುವಿನ ನೇರ ಸಂಪರ್ಕವನ್ನು ಪಡೆಯಬಹುದಾಗಿದೆ.

– ಶ್ರೀ ಚೈತನ್ಯರ ಬೋಧನೆಗಳು



# ಶ್ರೀ ರಾಧಾಷ್ಟಮಿ 2024, ಇಸ್ಕಾನ್ ಹರೇ ಕೃಷ್ಣ ಗಿರಿ, ಬೆಂಗಳೂರು













ವಿಶೇಷ ಅಭಿಷೇಕ











ವಿಶೇಷ ಅಭಿಷೇಕ

# ಶ್ರೀ ರಾಧಾಷ್ಟಮಿ 2024, ಇಸ್ಕಾನ್ ಹರೇ ಕೃಷ್ಣ ಗಿರಿ, ಬೆಂಗಳೂರು






108 ಸಸ್ಯಾಹಾರಿ ಕೇಕ್ ಸಮರ್ಪಣೆ



ವಿಶೇಷ ಅಭಿಷೇಕ

# ಶ್ರೀ ರಾಧಾಷ್ಟಮಿ 2024, ಇಸ್ಕಾನ್ ವೈಕುಂಠ ಗಿರಿ, ಬೆಂಗಳೂರು







ವಿಶೇಷ ಅಲಂಕಾರ, ಶ್ರೀ ಶ್ರೀ ರಾಧಾಕೃಷ್ಣರ ಉತ್ಸವ ಮೂರ್ತಿಗಳು, ಭಕ್ತರು

ಶ್ರೀಲ ಪ್ರಭುಪಾದರ
ಇಸ್ಕಾನ್
ಬೆಂಗಳೂರು



# ಕಾರ್ತಿಕ ದೀಪೋತ್ಸವ

## ದಾಮೋದರ ಲೀಲೆಯ ಆಚರಣೆ

**17 ಅಕ್ಟೋಬರ್ - 15 ನವೆಂಬರ್ 2024**

**ಆಚರಣೆ ಪ್ರತಿ ಸಂಜೆ 8 ಕ್ಕೆ**

| | |
|---|---|
| ಇಸ್ಕಾನ್ ಹರೇ ಕೃಷ್ಣ ಗಿರಿ<br>ರಾಜಾಜಿನಗರ | ಇಸ್ಕಾನ್ ವೈಕುಂಠ ಗಿರಿ<br>ವಸಂತಪುರ |

ನೇರ ಪ್ರಸಾರದಲ್ಲಿ ಪಾಲ್ಗೊಳ್ಳಿ : ISKCON Bangalore




**Bhaktivedanta Darshana Kannada Monthly Magazine, October 2024, Vol. 22, Issue 6, Price Rs. 40/-**
Registered with Registrar of Newspapers for India under **No. RNI KANNADA/11697/2003**